ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 27 ಸೋಮವಾರ 2026

ಸಂಪುಟ: 47 | ಸಂಚಿಕೆ: 12 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಜನಗಣತಿ ದೇಶದ ಅಭಿವೃದ್ಧಿಯ ದಿಕ್ಸೂಚಿ; ಪ್ರತಿ ಪ್ರಜೆಯ ಜವಾಬ್ದಾರಿ

● ತಪ್ಪದೇ ಪಾಲ್ಗೊಳ್ಳಲು ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಮನವಿ ● ವಿದ್ಯುತ್ ಉಳಿತಾಯದ ಜೊತೆಗೆ ಸೌರ, ಪವನ ಶಕ್ತಿ ಬಳಕೆ ಹೆಚ್ಚಳ ಅನಿವಾರ್ಯ


ನವದೆಹಲಿ: ಜನಗಣತಿ ಪ್ರಕ್ರಿಯೆ ಸರ್ಕಾರದ ಕೆಲಸ ಮಾತ್ರವಲ್ಲ, ಇದು ಪ್ರತಿ ನಾಗರಿಕರ ಮಹತ್ವದ ಜವಾಬ್ದಾರಿ ಹಾಗೂ ದೇಶದ ಅಭಿವೃದ್ಧಿಯ ದಿಕ್ಸೂಚಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್' ಮೂಲಕ 2027ರ ಜನಗಣತಿ ಅಭಿಯಾನ ದಲ್ಲಿ ಪ್ರತಿಯೊಬ್ಬರೂ ತಪ್ಪದೇ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ. ಜನಗಣತಿ ಸಮಯದಲ್ಲಿ ಜನರು ನೀಡುವ ಎಲ್ಲಾ ಮಾಹಿತಿಗಳು ಸಂಪೂರ್ಣವಾಗಿ ಸುರಕ್ಷಿತ ಮತ್ತು ಗೌಪ್ಯವಾಗಿರುತ್ತವೆ. ಬಲಿಷ್ಠ ಡಿಜಿಟಲ್ ಭದ್ರತೆಯ ಮೂಲಕ ಈ ಡೇಟಾವನ್ನು ರಕ್ಷಿಸಲಾಗುತ್ತದೆ ಎಂದು ಭರವಸೆ ನೀಡುವ ಮೂಲಕ ವೈಯಕ್ತಿಕ ಮಾಹಿತಿ ಸೋರಿಕೆ ಆರೋಪಕ್ಕೆ ಸ್ಪಷ್ಟನೆ ನೀಡಿದ್ದಾರೆ. ಭಾರತದ ಜನಗಣತಿಯು ವಿಶ್ವದ



ಅತಿದೊಡ್ಡ ಪ್ರಕ್ರಿಯೆ. ಈ ಬಾರಿ ಸಂಪೂರ್ಣ ಡಿಜಿಟಲ್ ರೂಪದಲ್ಲಿ ಜನಗಣತಿ ನಡೆಸಲಾಗುತ್ತಿದೆ. ಗಣತಿದಾರರು ಮೊಬೈಲ್ ಆಪ್ ಮೂಲಕ ನೇರವಾಗಿ ಮಾಹಿತಿ ದಾಖಲಿಸಲಿದ್ದಾರೆ. ಸಾರ್ವಜನಿಕರು ಸ್ವತಃ ಆನ್‌ಲೈನ್ ಮೂಲಕ ಮಾಹಿತಿ ದಾಖಲಿಸುವ ಒಂದು ವಿಶೇಷ ಅವಕಾಶ ನೀಡಲಾಗಿದೆ. ಈಗಾಗಲೇ ಕೆಲವು ರಾಜ್ಯಗಳಲ್ಲಿ ಸ್ವಯಂ ಗಣತಿ ಪ್ರಕ್ರಿಯೆ ಮುಗಿದಿದ್ದು, ಅಧಿಕಾರಿಗಳು ಮನೆಗಳ ಪಟ್ಟಿ ಮಾಡುವ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಈವರೆಗೆ ಸುಮಾರು 1.2 ಕೋಟಿ ಕುಟುಂಬಗಳು ಮಾಹಿತಿ ನೀಡಿವೆ ಎಂದು ತಿಳಿಸಿದ್ದಾರೆ.

ಸೌರ-ಪವನಶಕ್ತಿ ಬಳಕೆ ಮಹತ್ವ: ನವೀಕರಿಸಬಹುದಾದ ಶಕ್ತಿಯೇ ದೇಶದ ಶಾಶ್ವತ ಅಭಿವೃದ್ಧಿಗೆ ದಾರಿ. ವಿದ್ಯುತ್ ಸಂರಕ್ಷಣೆ ಜೊತೆಗೆ ಸೌರ ಮತ್ತು ಪವನ ಶಕ್ತಿಯ ಬಳಕೆಯನ್ನು ಹೆಚ್ಚಿಸುವುದು ಅನಿವಾರ್ಯ ಎಂದು ಹೇಳಿದ್ದಾರೆ.




ಬುದ್ಧ ಸ್ಮರಣೆ: ಜಾಗತಿಕ ಅಶಾಂತಿ, ಅನಿಶ್ಚಿತತೆ ನಡುವೆ ಶಾಂತಿ ಮತ್ತು ಅಹಿಂಸೆ ಸಂದೇಶವನ್ನು ಉಲ್ಲೇಖಿಸಿದ ಮೋದಿ, ಭಗವಾನ್ ಬುದ್ಧ ಅವರ ತತ್ವಗಳು ಇಂದಿನ ಜಗತ್ತಿಗೆ ದಿಕ್ಕು ತೋರಿಸಬಲ್ಲವು. ಶಾಂತಿ ಮತ್ತು ಅಹಿಂಸೆ ಮೂಲಕವೇ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎನ್ನುವ ಮೂಲಕ ಇದು ಯುದ್ಧದ ಯುಗವಲ್ಲ ಎಂಬ ತಮ್ಮ ನಿಲುವನ್ನು ಪುನರುಚ್ಚರಿಸಿದ್ದಾರೆ.

ಚಿಲಿಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ಬೌದ್ಧ ತತ್ವಗಳನ್ನು ಪ್ರಚಾರ ಮಾಡುತ್ತಿರುವ ಸಂಸ್ಥೆಯ ಕಾರ್ಯವನ್ನೂ ಇದೇ ವೇಳೆ ವಿಶೇಷವಾಗಿ ಉಲ್ಲೇಖಿಸಿ, ಜಾಗತಿಕ ಮಟ್ಟದಲ್ಲಿ ಭಾರತದ ಮೌಲ್ಯಗಳ ಪ್ರಸಾರವಾಗುತ್ತಿದೆ ಎಂದು ಹೇಳಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಮುನ್ನಡೆ ಸಾಧಿಸಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ಮೋದಿ, ತಮಿಳು ನಾಡಿನ ಕಲ್ಪಾಕಂನ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಯೋಜನೆ ಐತಿಹಾಸಿಕ ಮೈಲಿಗಲ್ಲು. ಪರಮಾಣು ವಿಜ್ಞಾನಿಗಳ ಸಾಧನೆ ಅಭಿನಂದನೀಯ. ನಾವು ತಂತ್ರಜ್ಞಾನದ ಅದ್ಭುತವನ್ನು ವೀಕ್ಷಿಸುತ್ತಿದ್ದೇವೆ. ಇದು ನಮ್ಮ ಭೂತಕಾಲವನ್ನು ವರ್ತಮಾನ ದೊಂದಿಗೆ ಸರಾಗವಾಗಿ ಸಂಪರ್ಕಿಸುತ್ತದೆ ಎಂದಿದ್ದಾರೆ.

ಈ ತಿಂಗಳ ಆರಂಭದಲ್ಲಿ ಫ್ರಾನ್ಸ್‌ನ ಬೋರ್ಡೆಕ್ಸ್‌ನಲ್ಲಿ ನಡೆದ ಯುರೋಪಿಯನ್ ಬಾಲಕಿಯರ ಗಣಿತ ಒಲಿಂಪಿಯಾಡ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳು ಅಸಾಧಾರಣ ಪ್ರದರ್ಶನ ನೀಡಿದರು. ಈ ಸ್ಪರ್ಧೆಯಲ್ಲಿ ಭಾರತೀಯ ತಂಡವು ವಿಶ್ವದಲ್ಲಿ ಆರನೇ ಸ್ಥಾನ ಪಡೆದಿದ್ದು, ಇದು ದೇಶಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತೀಯ ಯುವಜನತೆಯ ಸಾಧನೆಯನ್ನು ಬಣ್ಣಿಸಿದ್ದಾರೆ.



ಟ್ರಂಪ್ ಅವರನ್ನು ಸುರಕ್ಷಿತವಾಗಿ ಕರೆದೊಯ್ಯುತ್ತಿರುವುದು.

ಔತಣಕೂಟದಲ್ಲಿ ಟ್ರಂಪ್ ಗುರಿಯಾಗಿಸಿ ಗುಂಡಿನ ದಾಳಿ

■ ಶ್ವೇತಭವನ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಘಟನೆ ■ ಭಾರೀ ಭದ್ರತೆ ಭೇದಿಸಿ ಒಳನುಗ್ಗಲು ಯತ್ನಿಸಿದ ಆಗಂತುಕ ಸೆರೆ ■ ಗಣ್ಯರು, ಅಧಿಕಾರಿಗಳು, ಪತ್ರಕರ್ತರು ಅಪಾಯದಿಂದ ಪಾರು

ವಾಷಿಂಗ್ಟನ್: ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಪರಿಸ್ಥಿತಿ ಮುಂದುವರೆದಿರುವ ಹೊತ್ತಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ವ್ಯಕ್ತಿಯೋರ್ವ ಹಠಾತ್ ಗುಂಡಿನ ದಾಳಿ ನಡೆಸಿದ್ದು, ಸದ್ಯ ಯಾವುದೇ ಸಾವು ನೋವು ಸಂಭವಿಸಿಲ್ಲ.

ಭಾರತೀಯ ಕಾಲಮಾನದ ಪ್ರಕಾರ ಶನಿವಾರ ರಾತ್ರಿ ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ಶ್ವೇತ ಭವನದ ವರದಿಗಾರರ ವಾರ್ಷಿಕ ಔತಣಕೂಟ ಕಾರ್ಯಕ್ರಮ ಆಯೋಜಿಸಿದ್ದ ವೇಳೆ ಈ ಘಟನೆ ಸಂಭವಿಸಿದೆ. ಗುಂಡಿನ ದಾಳಿ ನಡೆಸಿದವನನ್ನು ಕ್ಯಾಲಿಫೋರ್ನಿಯಾದ 31 ವರ್ಷದ ಎಂಜಿನಿಯರ್ ಮತ್ತು ಕಂಪ್ಯೂಟರ್ ವಿಜ್ಞಾನಿ ಕೋಲ್ ಥಾಮಸ್ ಆಲೆನ್ ಎಂದು ಗುರುತಿಸಲಾಗಿದೆ.

ಶಸ್ತ್ರಸಜ್ಜಿತನಾಗಿ ಭಾರೀ ಭದ್ರತೆಯನ್ನು ಭೇದಿಸಿ ಸಭಾಂಗಣದೊಳಗೆ ನುಗ್ಗಲು ಯತ್ನಿಸಿದ್ದಾನೆ. ಈ ವೇಳೆ ಈತನ ಬಳಿ ಶಸ್ತ್ರಾಸ್ತ್ರಗಳಿರುವುದು ಮೆಟಲ್ ಡಿಟೆಕ್ಟರ್‌ನಿಂದ ತಿಳಿದ ಕೂಡಲೇ ಭದ್ರತಾ ಪಡೆ ಆತನನ್ನು ತಡೆಯಲು ಮುಂದಾಗಿದೆ. ಆದರೆ ಭದ್ರತಾ ಸಿಬ್ಬಂದಿ ನಡುವೆಯೇ ಶರವೇಗದಲ್ಲಿ ಗುಂಡು ಹಾರಿಸುತ್ತಾ ಒಳನುಗ್ಗಲು ಯತ್ನಿಸಿದ್ದಾನೆ. ಅಷ್ಟರಲ್ಲಿ ಆಗಂತುಕನನ್ನು ಸೆರೆಹಿಡಿಯುವಲ್ಲಿ ಭದ್ರತಾ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಆತಂಕ ಸೃಷ್ಟಿ: ಕಾರ್ಯಕ್ರಮ ಆಯೋಜಿಸಿದ್ದ ಬಾಲ್‌ರೂಮ್‌ನ ಹೊರಭಾಗದಲ್ಲಿ ಹಠಾತ್ ಶೂಟೌಟ್ ಸದ್ದು ಕೇಳಿಸಿತು. ಈ ವೇಳೆ ಸೀಕ್ರೆಟ್ ಸರ್ವಿಸ್ ಹಾಗೂ ಇತರ ಅಧಿಕಾರಿಗಳು ಬಾಲ್‌ರೂಮ್‌ಗೆ ಧಾವಿಸುತ್ತಿದ್ದಂತೆ ಬುರಾಟಾ ಸಲಾಡ್ ಸೇವಿಸುತ್ತಿದ್ದ ಅತಿಥಿಗಳು ಭೀತಿಯಿಂದ ಮೇಜುಗಳ ಕೆಳಗೆ ಅಡಗಿ ಕುಳಿತರು. ಏಕಾಏಕಿ ದಾರಿ ಬಿಡಿ, ಸರ್... ಎಲ್ಲರೂ ಅಡಗಿ ಕುಳಿತುಕೊಳ್ಳಿ... ಗಾಡ್ ಬ್ಲೆಸ್ ಅಮೆರಿಕ... ಎಂಬ ಘೋಷಣೆ ಕೇಳಿ ಏನೋ ದೊಡ್ಡ ಪ್ರಮಾದವೇ ಆಗಿದೆ ಎಂದು ಎಲ್ಲರೂ ಭಯಭೀತಗೊಂಡರು. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ವೇದಿಕೆಯಲ್ಲಿದ್ದ ಇತರ ಪ್ರಮುಖ ನಾಯಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಟ್ರಂಪ್ ಅವರನ್ನು ವೇದಿಕೆಯಿಂದ ಕರೆದುಕೊಂಡು ಹೋಗುವಾಗ ಅವರು ಜಾರಿ ಬಿದ್ದು, ಬಳಿಕ ಸೀಕ್ರೆಟ್ ಸರ್ವಿಸ್ ಸಿಬ್ಬಂದಿಯ ಸಹಾಯದಿಂದ ಮೇಲೆದ್ದು ಸುರಕ್ಷಿತ ಸ್ಥಳಕ್ಕೆ ತೆರಳಿದರು.



ದಾಳಿಯಿಂದ ತಪ್ಪಿಸಿಕೊಳ್ಳಲು ಟೇಬಲ್ ಕೆಳಗೆ ಅವಿತುಕೊಂಡಿರುವುದು.

ಕಾರ್ಯಕ್ರಮದಲ್ಲಿ ಡೊನಾಲ್ಡ್ ಟ್ರಂಪ್ ಜೊತೆಗಿದ್ದ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಸೇರಿದಂತೆ ಡೊನಾಲ್ಡ್ ಟ್ರಂಪ್ ಆಡಳಿತದ ಅನೇಕ ನಾಯಕರನ್ನೂ ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಪ್ರಸಿದ್ಧ ವ್ಯಕ್ತಿಗಳು ಮತ್ತು ರಾಷ್ಟ್ರೀಯ ನಾಯಕರು ಟ್ರಂಪ್ ಭಾಷಣಕ್ಕಾಗಿ ಕಾಯುತ್ತಿದ್ದ ಔತಣಕೂಟ ಸ್ಥಳವನ್ನು ತಕ್ಷಣ ತೆರವುಗೊಳಿಸಲಾಯಿತು. ನ್ಯಾಷನಲ್ ಗಾರ್ಡ್ ಸದಸ್ಯರು ಕಟ್ಟಡದ ಒಳಗೆ ■ 6ನೇ ಪುಟಕ್ಕೆ

ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಜಾಗವಿಲ್ಲ

ಅಮೆರಿಕದಲ್ಲಿನ ಶೂಟೌಟ್ ಖಂಡಿಸಿದ ಪ್ರಧಾನಿ ಮೋದಿ

ಜಾಗತಿಕ ನಾಯಕರಿಂದಲೂ ವ್ಯಾಪಕ ಖಂಡನೆ; ಅನಾಹುತ ತಪ್ಪಿದ್ದಕ್ಕೆ ನಿರಾಳ

ನವದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ನಡೆದ ಗುಂಡಿನ ದಾಳಿ ಘಟನೆಯನ್ನು ಪ್ರಧಾನಿ ಮೋದಿ ಖಂಡಿಸಿದ್ದಾರೆ.

ಘಟನೆ ಬಗ್ಗೆ 'ಎಕ್ಸ್' ಮೂಲಕ ಪ್ರತಿಕ್ರಿಯಿಸಿ ಡೊನಾಲ್ಡ್ ಟ್ರಂಪ್, ಮೆಲಾನಿಯಾ ಟ್ರಂಪ್ ಹಾಗೂ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಸುರಕ್ಷಿತವಾಗಿದ್ದಾರೆ ಎಂಬುದನ್ನು ತಿಳಿದು ಸಂತೋಷವಾಗುತ್ತಿದೆ. ಅವರ ಮುಂದಿನ ಸುರಕ್ಷತೆ ಮತ್ತು ಕ್ಷೇಮವನ್ನು ಆಶಿಸುತ್ತೇವೆ. ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಜಾಗವಿಲ್ಲ, ಅದನ್ನು ಯಾವುದೇ ಅನುಮಾನವಿಲ್ಲದೆ ಖಂಡಿಸಬೇಕು ಎಂದು ಹೇಳಿದ್ದಾರೆ.

ಜಾಗತಿಕ ನಾಯಕರ ಖಂಡನೆ: ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಟ್ರಂಪ್ ಹತ್ಯೆ ಯತ್ನದ ವಿಚಾರ ತಿಳಿದು, ತಾವು ಹಾಗೂ ತಮ್ಮ ಪತ್ನಿ ಇಬ್ಬರೂ ಆಘಾತಕ್ಕೆ ಒಳಗಾದೆವು. ಇದು 'ಹತ್ಯೆಯ ಯತ್ನ'. ಈ ಘಟನೆಯಲ್ಲಿ ಗಾಯಗೊಂಡ ಪೊಲೀಸ್ ಅಧಿಕಾರಿ ಶೀಘ್ರ ಚೇತರಿಸಿಕೊಳ್ಳಲಿ. ಜತೆಗೆ ■ 6ನೇ ಪುಟಕ್ಕೆ

ಆಗಂತುಕ 'ಉತ್ತಮ ಶಿಕ್ಷಕ ಪ್ರಶಸ್ತಿ' ಪುರಸ್ಕೃತ!

ದಾಳಿಕೋರ ಕೋಲ್ ಥಾಮಸ್ ಆಲೆನ್‌ಗೆ ಸಂಬಂಧಿಸಿದ ಸಾರ್ವಜನಿಕ ದಾಖಲೆಗಳ ಪರಿಶೀಲನೆ ವೇಳೆ, ಆತನಿಗೆ ಉತ್ತಮ ಶಿಕ್ಷಣ ಹಾಗೂ ತಾಂತ್ರಿಕ ಹಿನ್ನೆಲೆ ಇದ್ದರೂ ಆನ್‌ಲೈನ್‌ನಲ್ಲಿ ಹೆಚ್ಚು ಸಕ್ರಿಯವಾಗಿಲ್ಲ ಎಂಬುದು ತಿಳಿದಿದೆ. ಅವನ ಲಿಂಕ್ಡ್‌ಇನ್ ಪ್ರೊಫೈಲ್ ಪ್ರಕಾರ, 2017 ರಲ್ಲಿ ಕ್ಯಾಲ್ಟೆಕ್‌ನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ, 2025ರಲ್ಲಿ ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿ ಡೊಮಿಂಗ್ವೆಜ್ ಹಿಲ್ಸ್‌ನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾನೆ. ಕ್ಯಾಲ್ಟೆಕ್ ವೆಬ್‌ಸೈಟ್‌ನಲ್ಲಿರುವ ಒಂದು ಚಿತ್ರದಲ್ಲಿ ಆತ ರೋಬೋಟಿಕ್ಸ್ ಡಿಸೈನ್ ಲ್ಯಾಬ್ ಸದಸ್ಯನಾಗಿರುವುದಾಗಿ ಗುರುತಿಸಲಾಗಿದೆ. ವೃತ್ತಿಪರವಾಗಿ, ಆಲೆನ್ ಸಿ2 ಎಜುಕೇಶನ್ ಎಂಬ ಖಾಸಗಿ ಟ್ಯೂಟರಿಂಗ್ ಸಂಸ್ಥೆಯಲ್ಲಿ ಅರೆಕಾಲ ಶಿಕ್ಷಕನಾಗಿದ್ದು, 2024 ಡಿಸೆಂಬರ್‌ನಲ್ಲಿ 'ಟೀಚರ್ ಆಫ್ ದ ಮಂಥ್' ಪ್ರಶಸ್ತಿಯನ್ನೂ ಪಡೆದಿದ್ದಾನೆ. 2018ರಿಂದಲೂ ಇಂಡಿ ಗೇಮ್ ಡೆವಲಪರ್ ಆಗಿಯೂ ಗುರುತಿಸಿಕೊಂಡಿದ್ದು, ರಸಾಯನಶಾಸ್ತ್ರ ಆಧಾರಿತ 'ಅಟಾಮಿಕ್ ಫೈಟಿಂಗ್ ಗೇಮ್' ಅನ್ನು ಸ್ಟೀಮ್ ಪ್ಲಾಟ್‌ಫಾರ್ಮ್‌ನಲ್ಲಿ ಬಿಡುಗಡೆ ಮಾಡಿದ್ದಾನೆ. ಬಂಧನದ ನಂತರ ಎಫ್‌ಬಿಐ ಅಧಿಕಾರಿಗಳು ಕ್ಯಾಲಿಫೋರ್ನಿಯಾದ ಟೋರನ್ಸ್‌ನಲ್ಲಿರುವ ಆತನ ನಿವಾಸವನ್ನು ಶೋಧಿಸಿದ್ದಾರೆ.



ಪಾಕಿಸ್ತಾನಕ್ಕೆ ತೆರಳದಂತೆ ರಾಯಭಾರಿಗಳಿಗೆ ಟ್ರಂಪ್ ಕಟ್ಟಾಜ್ಞೆ

ಇಸ್ಲಾಮಾಬಾದ್ ತೊರೆದ ಇರಾನ್ ಪ್ರತಿನಿಧಿಗಳು

ವಾಷಿಂಗ್ಟನ್: ಶ್ವೇತಭವನ ವರದಿಗಾರರ ಔತಣಕೂಟದ ವೇಳೆ ನಡೆದ ದುರ್ಘಟನೆ



ಯುದ್ಧಕ್ಕೆ ಸಂಬಂಧಿಸಿದ್ದು ಎಂದೆನಿಸುತ್ತಿಲ್ಲ. ಆದರೆ ಇದು ಇರಾನ್ ಮೇಲಿನ ಯುದ್ಧದಿಂದ ನನ್ನನ್ನು ತಡೆಯಲು ಸಾಧ್ಯವಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಶ್ವೇತಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಶೂಟೌಟ್‌ಗೂ ಇರಾನ್ ಮೇಲಿನ ಯುದ್ಧಕ್ಕೂ ಯಾವುದೇ ಸಂಬಂಧವಿದೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೆ ನಮಗೆ ತಿಳಿದ ಮಾಹಿತಿ ಪ್ರಕಾರ ಹಾಗಿಲ್ಲವೆಂದು ಭಾವಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಅವನು ಒಂಟಿ ದಾಳಿಕೋರ, ಹುಚ್ಚನಂತೆ ವರ್ತಿಸಿದ್ದಾನೆ. ಇರಾನ್ ಯುದ್ಧಕ್ಕೂ ಇದಕ್ಕೂ ಸಂಬಂಧವಿದೆ ಎಂದು ಅನ್ನಿಸುವುದಿಲ್ಲ ಎಂದಿದ್ದಾರೆ.

ರಾಯಭಾರಿಗಳ ಕಳುಹಿಸಲ್ಲ: ಉನ್ನತ ರಾಯಭಾರಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೆರೆಡ್ ಕುಶ್ನರ್ ಅವರಿಗೆ ಇರಾನ್ ಜೊತೆ ಮಾತುಕತೆ ನಡೆಸಲು ಪಾಕಿಸ್ತಾನಕ್ಕೆ ಪ್ರಯಾಣಿಸದಂತೆ ತಿಳಿಸಿದ್ದೇನೆ ಮತ್ತು ಇರಾನ್ ಯಾವಾಗ ಬೇಕಾದರೂ ನಮಗೆ ಕರೆ ಮಾಡಬಹುದು ಎಂದು ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಪಾಕಿಸ್ತಾನ ತೊರೆದ ಇರಾನ್ ಸಚಿವ: ಅಮೆರಿಕ ತನ್ನ ಬಂದರುಗಳ ಮೇಲಿನ ದಿಗ್ಬಂಧನವನ್ನು ತೆರವುಗೊಳಿಸದ ಹೊರತು ತಮ್ಮ ದೇಶ ಮಾತುಕತೆ ನಡೆಸುವುದಿಲ್ಲ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಸ್ಪಷ್ಟಪಡಿಸಿದ್ದಾರೆ. ಶನಿವಾರ ರಾತ್ರಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರಿಗೆ ದೂರವಾಣಿ ಕರೆ ಮಾಡಿದ ಪೆಜೆಶ್ಕಿಯಾನ್, ಅಮೆರಿಕವು ಮೊದಲು ದಿಗ್ಬಂಧನ ಸೇರಿದಂತೆ ಇತರ ಕಾರ್ಯಾಚರಣೆಯ ಅಡೆತಡೆಗಳನ್ನು ■ 6ನೇ ಪುಟಕ್ಕೆ

ಮೇ 2, ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆ

ಚಿಕ್ಕಮಗಳೂರು: ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣೆಯ ಅಂಚೆ ಮತಗಳ ಮರು ಎಣಿಕೆಗೆ ಅಂತಿಮವಾಗಿ ದಿನಾಂಕ ನಿಗದಿಗೊಳಿಸಲಾಗಿದೆ.

ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಮೇ 2 ರಂದು ಮರು ಮತ ಎಣಿಕೆ ಪ್ರಕ್ರಿಯೆ ನಡೆಯಲಿದ್ದು, ಇದಕ್ಕಾಗಿ ಜಿಲ್ಲಾಡಳಿತ ಸಂಪೂರ್ಣ ಸಿದ್ಧತೆ ಮಾಡಿಕೊಂಡಿದೆ. ಎಡಿಸಿ ಗೌರವ್ ಶೆಟ್ಟಿ ಅವರನ್ನು ಚುನಾವಣಾಧಿಕಾರಿ ಹಾಗೂ ನಾಲ್ವರನ್ನು ಸಹಾಯಕ ಚುನಾವಣಾಧಿಕಾರಿಗಳನ್ನಾಗಿ ನಿಯೋಜಿಸಲಾಗಿದೆ. ಐಡಿಎಸ್‌ಜಿ ಪ್ರಥಮ ದರ್ಜೆ ಕಾಲೇಜಿನ ಕೇಂದ್ರದಲ್ಲಿ ಅಂದು ಬೆಳಗ್ಗೆ 8 ಗಂಟೆಗೆ ಮರುಎಣಿಕೆ ಪ್ರಾರಂಭವಾಗಲಿದೆ.

ಹಿನ್ನೆಲೆ: 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ, ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ವಿರುದ್ಧ ಕೇವಲ 201 ಮತಗಳ ಅಂತರದಿಂದ ಜಯಗಳಿಸಿದ್ದರು. ಆ ಚುನಾವಣೆಯಲ್ಲಿ ಚಲಾವಣೆಯಾಗಿದ್ದ ಒಟ್ಟು 2,811 ಅಂಚೆ ಮತಗಳಲ್ಲಿ ■ 6ನೇ ಪುಟಕ್ಕೆ

ಹಾಪ್‌ಕಾಮ್ಸ್ ಮಳಿಗೆ ಹೆಚ್ಚಿಸಲು ನಿರ್ಧಾರ

● ಹೊಸ 30 ಮಳಿಗೆ ಆರಂಭಿಸಲು ಚಿಂತನೆ; ಹಳೆ ಮಳಿಗೆ ಹೈಟೆಕ್ ಸ್ಪರ್ಶಕ್ಕೆ 30 ಲಕ್ಷ ರೂ. ಅನುದಾನ ● ಪ್ರತಿ ದಿನ 7-8 ಟನ್ ಹಣ್ಣು-ತರಕಾರಿ ಮಾರಾಟ

ಮೈಸೂರು, ಏ.26(ಎಂಟಿವೈ)- ಗುಣಮಟ್ಟ ಹಾಗೂ ತಾಜಾ ಹಣ್ಣು-ತರಕಾರಿಯನ್ನು ರೈತರಿಂದ ನೇರವಾಗಿ ಖರೀದಿಸಿ, ಗ್ರಾಹಕರಿಗೆ ಒದಗಿಸುತ್ತಿರುವ ಸರ್ಕಾರಿ ಸ್ವಾಮ್ಯದ ಹಾಪ್‌ಕಾಮ್ಸ್ ವ್ಯವಸ್ಥೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಹೊಸದಾಗಿ ಇನ್ನೂ 30 ಮಳಿಗೆ ಆರಂಭಿಸಲು ತೀರ್ಮಾನಿಸಲಾಗಿದೆ.

ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಹಾಪ್ ಕಾಮ್ಸ್(ತೋಟದ ಬೆಳೆಗಾರರ ಮತ್ತು ಸಂಸ್ಕರಣಾ ಸಹಕಾರ ಸಂಘ) ತನ್ನ ಸೇವೆಯನ್ನು ವಿವಿಧ ಬಡಾವಣೆಗಳಿಗೂ ವಿಸ್ತರಿಸುವ ನಿಟ್ಟಿನಲ್ಲಿ ಹೊಸ ಮಳಿಗೆಗಳನ್ನು ಆರಂಭಿಸಲು ಮುಂದಾಗಿದೆ.

ಈಗಾಗಲೇ ನಗರದಲ್ಲಿ 30 ಹಾಪ್ ಕಾಮ್ಸ್ ಮಳಿಗೆಗಳಿದ್ದು, ಸಿಬ್ಬಂದಿ ಕೊರತೆಯಿಂದಾಗಿ ಮಳಿಗೆಗಳ ನಿರ್ವಹಣೆ ಸಾಧ್ಯವಾಗದೇ 16 ಮಳಿಗೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇದೀಗ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ನೇಮಕ ಮಾಡಿಕೊಳ್ಳಲು ನಿರ್ಧರಿಸಿ, ಹಳೆಯ ಮಳಿಗೆ ಜೊತೆಗೆ ಹೊಸದಾಗಿ 30 ಮಳಿಗೆಗಳನ್ನು ಆರಂಭಿಸಲು ಸಿದ್ಧತೆ ನಡೆಸಲಾಗಿದೆ.

ಹಾಪ್‌ಕಾಮ್ಸ್‌ನಲ್ಲಿ ನೋಂದಣಿಯಾಗಿರುವ ರೈತರಿಂದ ನೇರವಾಗಿ ತರಕಾರಿ ಮತ್ತು ಹಣ್ಣುಗಳ ಖರೀದಿಸುತ್ತಿರುವ ಹಾಪ್‌ಕಾಮ್ಸ್‌ನಲ್ಲಿ ಪ್ರತಿದಿನ 7ರಿಂದ 8 ಟನ್ ಹಣ್ಣು



ಮೈಸೂರಿನ ಅಶೋಕ(ಬಲ್ಲಾಳ್) ವೃತ್ತದ ಬಳಿಯಿರುವ ಹಾಪ್‌ಕಾಮ್ಸ್

▶ ಸರ್ಕಾರಿ ಶಾಲಾ ಮಕ್ಕಳಿಗೆ ಬಾಳೆ ಹಣ್ಣು ಹಾಗೂ ಎಲ್ಲಾ ಇಲಾಖೆಗಳ ವಿದ್ಯಾರ್ಥಿನಿಲಯಗಳಿಗೆ ತರಕಾರಿ ಪೂರೈಕೆ ಮಾಡುವ ಗುತ್ತಿಗೆಯನ್ನು ಹಾಪ್ ಕಾಮ್ಸ್‌ಗೆ ನೀಡುವಂತೆ ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಶ್ರೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸಲಾಗಿದೆ.

- ಹೊಸಹುಂಡಿ ರಘು, ಮಾಜಿ ಅಧ್ಯಕ್ಷ, ಹಾಪ್‌ಕಾಮ್ಸ್

ಮತ್ತು ತರಕಾರಿ ಮಾರಾಟವಾಗುತ್ತಿದ್ದು, 4ರಿಂದ 5 ಲಕ್ಷ ರೂ. ವಹಿವಾಟು ನಡೆಯುತ್ತಿದೆ. ಇದು ಲಾಭರಹಿತವಾದ ಸಂಸ್ಥೆಯಾಗಿದ್ದು, ರೈತರು ಮತ್ತು ಗ್ರಾಹಕರ ನಡುವೆ ಸಂಪರ್ಕ ಸೇತುವೆಯಾಗಿದೆ. ರೈತರಿಂದ ಗುಣಮಟ್ಟದ ತರಕಾರಿ ಮತ್ತು ಹಣ್ಣುಗಳನ್ನು ಖರೀದಿಸಿ ನೇರವಾಗಿ ಗ್ರಾಹಕರಿಗೆ ಕಡಿಮೆ ದರಕ್ಕೆ ಮಾರಾಟ ಮಾಡುವುದು ಸಂಸ್ಥೆಯ ಉದ್ದೇಶವಾಗಿದ್ದು, ಈಗಾಗಲೇ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿರುವುದರಿಂದ ಸೇವೆಯನ್ನು ಮತ್ತಷ್ಟು ವಿಸ್ತರಿಸಲು ಮುಂದಾಗಿದೆ.

ಜಾಗ ನಿಗದಿ: ಹಾಪ್‌ಕಾಮ್ಸ್ ಮಳಿಗೆಗಳನ್ನು ನಗರ ಪಾಲಿಕೆ ಮತ್ತು ಮುಡಾ ವ್ಯಾಪ್ತಿಯ ಸ್ಥಳಗಳಲ್ಲಿ ತೆರೆಯಲು ಉದ್ದೇಶಿಸಲಾಗಿದೆ. 10x15 ಅಡಿ ಅಳತೆಯ ಮಳಿಗೆ ನಿರ್ಮಿಸಲು ಸೂಕ್ತ ಸ್ಥಳ ಗುರುತಿಸುವ ಪ್ರಕ್ರಿಯೆ ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಹಾಪ್‌ಕಾಮ್ಸ್ ಗುಣಮಟ್ಟದ ಹಾಗೂ ತಾಜಾತನದಿಂದ ಕೂಡಿದ ಹಣ್ಣು-ತರಕಾರಿಗಳನ್ನು ಕಡಿಮೆ ಬೆಲೆಗೆ ಗ್ರಾಹಕರಿಗೆ ಒದಗಿಸುತ್ತಾ ಬಂದಿದೆ. ಇದರಿಂದ ಹೆಚ್ಚು ಗ್ರಾಹಕರ ವಿಶ್ವಾಸ ಉಳಿಸಿಕೊಂಡಿದೆ. ಮೈಸೂರಿನಲ್ಲಿರುವ ಹಾಪ್‌ಕಾಮ್ಸ್‌ಗೆ ಕಾಯಕಲ್ಪ ನೀಡುವುದರೊಂದಿಗೆ ಹೊಸದಾಗಿ 30 ಮಳಿಗೆಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಸ್ಥಳ ಗುರುತಿಸುವ ಕಾರ್ಯ ನಡೆಸಲಾಗುತ್ತಿದೆ.

-ಬಿ.ಪಿ.ಬೋರೇಗೌಡ, ಅಧ್ಯಕ್ಷ, ಜಿಲ್ಲಾ ಹಾಪ್‌ಕಾಮ್ಸ್.

ಮಳಿಗೆ ನವೀಕರಣಕ್ಕೆ ಅನುದಾನ: ಮೈಸೂರು ನಗರದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 30 ಮಳಿಗೆಗಳನ್ನು ನವೀಕರಣ ಮಾಡಿ ಹೈಟೆಕ್ ಸ್ಪರ್ಶ ನೀಡಲು 30 ಲಕ್ಷ ರೂ. ಅನುದಾನ ಮೀಸಲಿಡಲಾಗಿದೆ. ಅದರಲ್ಲಿ ಪ್ರತಿ ಮಳಿಗೆಯನ್ನು 50ರಿಂದ 1 ಲಕ್ಷ ರೂ.ವರೆಗೆ ವೆಚ್ಚ ಮಾಡಿ ನವೀಕರಿಸಲು ನಿರ್ಧರಿಸಲಾಗಿದೆ.

ಜ್ಯೂಸ್ ಘಟಕ ಆರಂಭ: ಈಗಾಗಲೇ ಇರುವ ಹಾಪ್‌ಕಾಮ್ಸ್ ಮಳಿಗೆ ಸೇರಿದಂತೆ ಹೊಸದಾಗಿ ಆರಂಭಿಸುವ ಎಲ್ಲ ಮಳಿಗೆಗಳಲ್ಲಿಯೂ ತರಕಾರಿ ಮತ್ತು ಹಣ್ಣುಗಳ ಮಾರಾಟದೊಂದಿಗೆ ಹಾಪ್‌ಕಾಮ್ಸ್‌ನಿಂದ ಸಿದ್ಧಪಡಿಸಿದ ಗ್ರೇಪ್ ಸೇರಿದಂತೆ ವಿವಿಧ ಬಗೆಯ ಜ್ಯೂಸ್ ಮಾರಾಟ ಮಾಡುವ ಯೋಜನೆ ರೂಪಿಸಲಾಗಿದೆ

ನಮಗೆ ಪಕ್ಷದ ಮೇಲೆ ವಿಶ್ವಾಸ ಇದೆ, ಏನು ಮಾಡಬೇಕೆಂದು ಅವರಿಗೆ ಗೊತ್ತಿದೆ

ನಾಯಕತ್ವ ಬದಲಾವಣೆ ಬಗ್ಗೆ ಡಿಕೆಶಿ ಮತ್ತೆ ಮಾರ್ಮಿಕ ನುಡಿ



ಬೆಂಗಳೂರು: ಯಾವಾಗ ಏನು ಆಗಬೇಕೋ ಅದೇ ಆಗುತ್ತದೆ. ಸಮಯ ಬಂದಾಗ ತಾನಾಗಿಯೇ ಎಲ್ಲವೂ ಗೊತ್ತಾಗುತ್ತದೆ ಎಂದು ಹೇಳುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಧಿಕಾರ ಹಸ್ತಾಂತರ ವಿಚಾರದಲ್ಲಿ ನಿರ್ಲಿಪ್ತತೆ ವ್ಯಕ್ತಪಡಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ದೆಹಲಿಯಲ್ಲಿ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಬಂದಿದ್ದು, ಅವರ ಜನ್ಮದಿನವಾದ ಮೇ 15ರ ಆಸುಪಾಸಲ್ಲಿ ರಾಜ್ಯದಲ್ಲಿ ರಾಜಕೀಯ ಕ್ರಾಂತಿ ಆಗಲಿದೆ ಎಂಬ ಚರ್ಚೆ ಬಗ್ಗೆ ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ. ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ಒಳ ರಾಜಕೀಯವೂ ಇಲ್ಲ. ಏನೇನೂ ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ ಎಂದು ಸ್ಪಷ್ಟಪಡಿಸಿದರು.

ಪಕ್ಷದಲ್ಲಿ ಗೊಂದಲಗಳು ಇವೆ ಎಂಬ ಸಚಿವ ಸತೀಶ್ ಜಾರಕಿಹೊಳಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ ಎಂದು ಹೈಕಮಾಂಡ್ ಕಡೆಗೆ ಬೊಟ್ಟು ಮಾಡಿದರು.

ನಾಯಕತ್ವ ಬದಲಾವಣೆ ವಿಚಾರವಾಗಿ ಮಾತನಾಡಿ, ನಿಮಗೆ ಈ ಬಗ್ಗೆ ಗೊಂದಲ ಇರಬಹುದು. ನಾನು ಈ ಬಗ್ಗೆ ಯಾವತ್ತು ಚರ್ಚೆ ಮಾಡಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ನಾವು ಅದನ್ನು ಪಾಲಿಸುತ್ತೇವೆ ಎಂದು ನಾನು ಮತ್ತು ಮುಖ್ಯಮಂತ್ರಿ ಅವರು ಈ ಹಿಂದೆಯೇ ಹೇಳಿದ್ದು, ಅದರಂತೆ ನಡೆಯುತ್ತೇವೆ ಎಂದು ತಿಳಿಸಿದರು. ■ 6ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 27 ಏಪ್ರಿಲ್ 2026

ಒತ್ತಡಕ್ಕೆ ಮಣಿದು ಒಳಮೀಸಲಾತಿ ಜಾರಿ, ಕೋರ್ಟ್ ಆದೇಶದಂತಿಲ್ಲ, ಇದು ಓಟ್ ಬ್ಯಾಂಕ್ ರಾಜಕಾರಣ

●ಒಳ ಮೀಸಲಾತಿ ಬಗ್ಗೆ ವಕೀಲ ಅರುಣ್‌ಕುಮಾರ್ ಪ್ರತಿಕ್ರಿಯೆ ●ರೋಸ್ಟರ್ ಗಮನಿಸಿ ಮುಂದಿನ ನಿರ್ಧಾರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರಾದ ಹಿರಿಯ ವಕೀಲ ಅರುಣ್‌ಕುಮಾರ್ ಮಾತನಾಡಿದರು.

ಮೈಸೂರು, ಏ.26(ಜಿಎ)–ರಾಜ್ಯ ಸರ್ಕಾರ ಸ್ವಯಂಪ್ರೇರಣೆಯಿಂದ ಒಳ ಮೀಸಲಾತಿ ಜಾರಿಗೊಳಿಸಿಲ್ಲ. ಬದಲಾಗಿ ಹೋರಾಟ ಒತ್ತಡಕ್ಕೆ ಮಣಿದು ಜಾರಿಗೊಳಿಸಿದ್ದಾರೆ. ಆದರೆ, ಇದು ನ್ಯಾಯಾಲಯದ ಆದೇಶದಂತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರಾದ ಹಿರಿಯ ವಕೀಲ ಅರುಣ್ ಕುಮಾರ್ ಇದು ಓಟ್ ಬ್ಯಾಂಕ್ ರಾಜಕೀಯ ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಿಶೇಷ ಸಚಿವ ಸಂಪುಟ ಸಭೆ ಒಳ ಮೀಸಲಾತಿ ಕುರಿತಂತೆ ಹೊಸ ಸೂತ್ರ ಪ್ರಕಟಿಸಿರುವುದು ಮಾದಿಗ ಸಮುದಾಯದ ಸುಮಾರು 35 ವರ್ಷಗಳ ಹೋರಾಟಕ್ಕೆ ಸಂದ ಜಯ. ಆದರೂ ಸರ್ಕಾರ ಸುಮಾರು 56 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ವೇಳೆ ಸಮುದಾಯಕ್ಕೆ ಯಾವ ರೀತಿ ನ್ಯಾಯ ದೊರಕುತ್ತದೆ, ಸೂತ್ರದಲ್ಲಿನ ರೋಸ್ಟರ್ ಏನು ಎಂಬುದನ್ನು ಗಮನಿಸಿದ ಬಳಿಕ ಸೂತ್ರವನ್ನು ಸ್ವಾಗತಿಸಬೇಕೇ, ಹೋರಾಟ ಮುಂದುವರಿಸಬೇಕೇ ಎಂಬುದನ್ನು ನಿರ್ಧರಿಸಲಾಗುವುದು ಎಂದು ಹೇಳಿದರು.

> “ರಾಜ್ಯ ಸರ್ಕಾರಕ್ಕೆ ನಿಜಕ್ಕೂ ಒಳ ಮೀಸಲಾತಿ ಜಾರಿಗೊಳಿಸುವ ಇಚ್ಛಾಸಕ್ತಿ ಇರಲಿಲ್ಲ. ಆದರೆ ಇಕ್ಕಟ್ಟಿಗೆ ಸಿಲುಕಿ, ಸಿಎಂ ಕುರ್ಚಿಗೆ ಎಲ್ಲಿ ಅಪಾಯ ಬರುವುದೋ ಎಂಬ ಅಂಜಿಕೆಯಿಂದ ಈಗ ಹೊಸ ಸೂತ್ರ ಮುಂದುರಿಸಲಾಗಿದೆ. ಅಲ್ಲದೆ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾದಿಗ ಸಮುದಾಯಕ್ಕೆ ಹಂತ ಹಂತದಲ್ಲಿಯೂ ಅನ್ಯಾಯ ಮಾಡಿದ್ದಾರೆ. ಈಗ 15ಕ್ಕಿಂತ ಕಡಿಮೆ ಹುದ್ದೆ ನೇಮಕಾತಿ ವೇಳೆ ಒಳ ಮೀಸಲಾತಿ ಅನ್ವಯ ಆಗದೆಂದಿದ್ದಾರೆ. ವಿಶ್ವವಿದ್ಯಾನಿಲಯದ ಪ್ರೊಫೆಸರ್, ಸಹ ಪ್ರೊಫೆಸರ್, ಮೊದಲಾದ ಹುದ್ದೆಗಳ ನೇಮಕ 15 ಇರಲು ಸಾಧ್ಯವೇ ಇಲ್ಲ. ಹೀಗಾಗಿ ಇಂತಹ ಹಲವಾರು ಕಡೆಗಳಲ್ಲಿ ಮಾದಿಗ ಸಮುದಾಯ ಒಳ ಮೀಸಲಾತಿ ಇಲ್ಲದೇ ಅನ್ಯಾಯಕ್ಕೊಳಗಾಗಬೇಕಾಗುತ್ತದೆ. ಈ ನಿಟ್ಟಿನಲ್ಲಿಯೂ ಯೋಚಿಸಬೇಕಾಗಿದೆ.
> –ಅರುಣ್‌ಕುಮಾರ್, ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಹಾಗೂ ಹಿರಿಯ ವಕೀಲರು.

ಸುಪ್ರೀಂಕೋರ್ಟ್ ಆದೇಶದ ಅಡಿಯಲ್ಲಿ ಒಳ ಮೀಸಲಾತಿ ಕುರಿತಂತೆ ಎಂಪರಿಕಲ್ ದತ್ತಾಂಶ, ಹಿಂದುಳಿದವರು, ಅತೀ ಹಿಂದುಳಿದವರು, ಪ್ರಾತಿನಿಧ್ಯದ ಮಾಹಿತಿ ಅಡಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಬೇಕಾಗಿತ್ತು. ಈ ಸೂತ್ರದಂತೆ ಜಾರಿಗೊಳಿಸಿರುವ ಇತರೆ ರಾಜ್ಯಗಳಲ್ಲಿ ಸಮಸ್ಯೆಯುಂಟಾಗಿಲ್ಲ. ಆದರೆ ರಾಜ್ಯ ಸರ್ಕಾರ ಮಾತ್ರ ಸುಪ್ರೀಂಕೋರ್ಟ್ ಸೂತ್ರ ಪಾಲಿಸಲಿಲ್ಲ. ಬದಲಾಗಿ ವೋಟ್ ಬ್ಯಾಂಕ್ ರಾಜಕೀಯ ಮಾಡಿತು ಎಂದು ಅರುಣ್‌ಕುಮಾರ್ ಆರೋಪಿಸಿದರು.

ಬಹಳಷ್ಟು ಹೋರಾಟ ನಡೆಸಿದ ಕಾರಣ ಅಂತಿಮವಾಗಿ 5.25, 5.25 ಹಾಗೂ 4.50 ಸೂತ್ರ ಮುಂದಿಟ್ಟಿದೆ. ಇದರ ಅಡಿಯಲ್ಲಿಯೇ 56456 ಹುದ್ದೆ ಭರ್ತಿ ಮಾಡುವುದಾಗಿ ತಿಳಿಸಿದೆ. ಆದರೆ ಈ ಹೊಸ ಸೂತ್ರದ ಅಡಿಯಲ್ಲಿ ನಿಜಕ್ಕೂ ಮಾದಿಗ ಸಮುದಾಯಕ್ಕೆ ನ್ಯಾಯ ದೊರಕುವುದೇ ಎಂಬುದನ್ನು ಗಮನಿಸಲಾಗುವುದು. ಜೊತೆಗೆ ಹೊರಡಿಸುವ ಶ್ವೇತಪತ್ರ, ರೋಸ್ಟರ್ ಪದ್ಧತಿ ಏಕೆ, ಏಡಿ ವಿವಾದ, 15ಕ್ಕಿಂತ ಕಡಿಮೆ ಹುದ್ದೆ ಇದ್ದರೆ ನೇಮಕಾತಿ ವೇಳೆ ಒಳ ಮೀಸಲಾತಿ ಅನ್ವಯ ಆಗದು ಎಂಬಿವೇ ಮೊದಲಾದ ಅಂಶಗಳನ್ನು ಗಮನಿಸಿ, ಅಧ್ಯಯನ ಮಾಡಿದ ಬಳಿಕ ಸರ್ಕಾರದ ಹೊಸ ಸೂತ್ರ ಸ್ವಾಗತಿಸಬೇಕೇ, ಬೇಡವೇ, ಹೋರಾಟ ಮುಂದುವರಿಸಬೇಕೇ ಎಂಬುದನ್ನು ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಆರ್. ಸುರೇಂದ್ರ ಕುಮಾರ್, ಮಲ್ಲು, ಕಾರ್ತಿಕ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಸ್ಪಷ್ಟತೆ ಮುಖ್ಯ, ಇಲ್ಲವಾದರೆ ಬದುಕು ದಿಕ್ಕು ತಪ್ಪಲಿದೆ

‘ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ, ಕರಿಯರ್ ಆಯ್ಕೆ’ ಕುರಿತ ಕೌನ್ಸಲಿಂಗ್



ನೈಪುಣ್ಯ ಪ್ರಿ–ಯೂನಿವರ್ಸಿಟಿ ವತಿಯಿಂದ ‘ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಮತ್ತು ಕರಿಯರ್ ಆಯ್ಕೆ’ ಕುರಿತ ಕೌನ್ಸಲಿಂಗ್ ಕಾರ್ಯಕ್ರಮ ನಡೆಯಿತು.

ಮೈಸೂರು,ಏ.26(ಎಂಕೆ)–ಆತ್ಮ ವಿಶ್ವಾಸ ಹೆಚ್ಚಿಸುವ, ಕೌಶಲ್ಯತೆಗಳಿಂದ ಕೂಡಿರುವ ಶಿಕ್ಷಣದ ಜೊತೆಗೆ ವಿಷಯದ ಆಯ್ಕೆಯಲ್ಲಿ ಸ್ಪಷ್ಟತೆ ಇರಲಿ ಎಂದು ವೃತ್ತಿಪರ ಮಾರ್ಗದರ್ಶಕ ಪ್ರಶಾಂತ್‌ಕುಮಾರ್ ನಾಯಕ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನೈಪುಣ್ಯ ಪ್ರಿ–ಯೂನಿವರ್ಸಿಟಿ ವತಿಯಿಂದ ಆಯೋಜಿಸಿದ್ದ ‘ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಮತ್ತು ಕರಿಯರ್ ಆಯ್ಕೆ’ ಕುರಿತ ಕೌನ್ಸಲಿಂಗ್ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಪಂಚದಲ್ಲಿ ಎಷ್ಟು ಬೇಕಾದರೂ ಜ್ಞಾನ ಸಿಗಲಿದೆ. ಆದರೆ, ನಾವು ಎಷ್ಟು ಜ್ಞಾನ ಪಡೆದುಕೊಳ್ಳುತ್ತೇವೆ ಎಂಬುದು ಮುಖ್ಯ ಎಂದರು.


ಬದುಕಿನಲ್ಲಿ ಸ್ಪಷ್ಟತೆ ಮುಖ್ಯ. ಸ್ಪಷ್ಟತೆ ಇಲ್ಲವಾದರೆ ಜೀವನವೇ ದಿಕ್ಕು ತಪ್ಪಿ ಹೋಗಲಿದೆ. ಏನೋ ಆಗಬೇಕು ಎಂದುಕೊಂಡು ಮತ್ತೇನೋ ಆಗಬೇಕಾಗುತ್ತದೆ. ಆದ್ದರಿಂದ ನಿರ್ಧಾರಗಳು ಸ್ಪಷ್ಟವಾಗಿರಬೇಕು. ಕೆಲವೊಮ್ಮೆ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಗೊಂದಲಗಳಾಗುವುದು ಸಹಜ. ಈ ವೇಳೆ ಸರಿಯಾದ ಮಾರ್ಗದರ್ಶನ ಪಡೆಯುವುದು ಅವಶ್ಯವಾಗಿದೆ ಎಂದು ತಿಳಿಸಿದರು.

ನಿರ್ಧಾರಗಳಲ್ಲಿ ಬದಲಾಯಿಸಬಹುದಾದ ನಿರ್ಧಾರಗಳು ಮತ್ತು ಬದಲಾಯಿಸಲಾಗದ ನಿರ್ಧಾರಗಳಿದ್ದು, ನಿರ್ಧಾರ ತೆಗೆದುಕೊಳ್ಳುವ ಮುನ್ನವೇ ಎಚ್ಚರಿಕೆ ಮತ್ತು ತಾಳ್ಮೆಯಿಂದಿರಬೇಕು. ಬದುಕಿನಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಕನಸು ಕಾಣುತ್ತೇವೆ. ಆದರೆ, ಕನಸನ್ನು ನನಸು ಮಾಡಿಕೊಳ್ಳಲು ಮಾಡಬೇಕಾದ ಕೆಲಸ ಮಾಡಲು ಮನಸ್ಸಿರುವುದಿಲ್ಲ. ಆದ್ದರಿಂದ ಆಯ್ಕೆಯಲ್ಲಿ ಸ್ಪಷ್ಟತೆ ಎಂಬುದು ಮುಖ್ಯವಾಗಲಿದೆ ಎಂದು ಹೇಳಿದರು.

ಭೂಮಿಯ ಮೇಲೆ ಒಂದಲ್ಲಾ ಒಂದು ಆವಿಷ್ಕಾರಗಳು ನಡೆಯುತ್ತಲೇ ಇವೆ. ಇವಾಗ ಯಂತ್ರಕ್ಕೆ ಕೃತಕ ಬುದ್ದಿಯನ್ನು ನೀಡಲಾಗುತ್ತಿದೆ. ಈ ಕೃತಕ ಯಂತ್ರಗಳು ಮತ್ತಷ್ಟು ಸ್ಪರ್ಧೆಯನ್ನು ಏರ್ಪಡಿಸಲಿವೆ. ಹಾಗಾಗಿ ಪಡೆದುಕೊಳ್ಳುವ ಶಿಕ್ಷಣ ಸಂವಹನ ಕೌಶಲ್ಯ, ಆತ್ಮವಿಶ್ವಾಸ, ನಾಯಕತ್ವದ ಗುಣ, ಟೀಂ ವರ್ಕ್, ಹೊಸ ಡಿಜಿಟಲ್ ಸ್ಕಿಲ್ಸ್, ಹಣಕಾಸಿನ ಅರಿವು ಮತ್ತು ಚರ್ಚೆಗೆ ಅವಕಾಶ ನೀಡುವಂತಿರಲಿ ಎಂದು ಸಲಹೆ ನೀಡಿದರು.

ಶಿಕ್ಷಣ ತಜ್ಞ ಪ್ರೊ.ಗುರುರಾಜ್ ಶ್ರೀಧರ ಮಾತನಾಡಿ, ಎಐ ಎಂಬುದು ಈ ಕಾಲದ ಕ್ರಾಂತಿಕಾರಕ ಬದಲಾವಣೆಯಾಗಿದ್ದು ಕೆಲವೊಂದು ಕೆಲಸಗಳು ಸುಲಲಿತವಾಗಿ ನಡೆಯಲಿವೆ. ಆದರೆ ನಂತರದ ದಿನಗಳಲ್ಲಿ ಇದರಿಂದ ಅಪಾಯಗಳು ತಪ್ಪಿದ್ದಲ್ಲ. ಒಂದು ಡೇಟಾ ಸೆಂಟರ್ ಆರಂಭಿಸಿದರೆ ಅದಕ್ಕೆ ನಮ್ಮ ಮೈಸೂರು ನಗರಕ್ಕೆ ಒಂದು ವರ್ಷಕ್ಕೆ ಬೇಕಾಗುವ ವಿದ್ಯುತ್ ಒಂದೇ ದಿನಕ್ಕೆ ಬೇಕಾಗುತ್ತದೆ. ಮಾತ್ರವಲ್ಲದೇ ಕೂಲಿಂಗ್ ವ್ಯವಸ್ಥೆಗೆ ಎತೇಚ್ಚ ಶುದ್ದ ನೀರು ಬೇಕಾಗುತ್ತದೆ. ಹಾಗಾಗಿ ಈ ಬೆಳವಣಿಗೆಯಿಂದ ಭವಿಷ್ಯದಲ್ಲಿ ದೊಡ್ಡ ಅಪಾಯ ಕಾದಿದೆ ಎಂದು ಎಚ್ಚರಿಸಿದರು. ನೈಪುಣ್ಯ ಪ್ರಿ–ಯೂನಿವರ್ಸಿಟಿ ಕಾರ್ಯದರ್ಶಿ ಆರ್.ಕೌಟಿಲ್ಯ ಮತ್ತಿತರರಿದ್ದರು.

ಮೈಸೂರು ಬಂಟರ ಸಂಘದ ಅಧ್ಯಕ್ಷರಾಗಿ ಕೆ.ಗಣೇಶ್ ನಾರಾಯಣ ಹೆಗ್ಡೆ ಅವಿರೋಧ ಆಯ್ಕೆ



ಕೆ.ಗಣೇಶ್‌ನಾರಾಯಣಹೆಗ್ಡೆ



ಸಿ.ಎ.ಸುರೇಂದ್ರ ಹೆಗ್ಡೆ



ಪಿ.ಸುರೇಶ್ ಆಳ್ವ

ಮೈಸೂರು, ಏ. 26– ಬಂಟರ ಸಂಘ ಹಾಗೂ ಬಂಟ್ಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಾರ್ಷಿಕ ಮಹಾಸಭೆ ಆಶಾ ಪ್ರಕಾಶ್ ಶೆಟ್ಟಿ ಬಂಟ್ಸ್ ಕನ್ವೆನ್ಷನ್ ಹಾಲ್, ಬಂಟರ ಭವನದಲ್ಲಿ ನಡೆಯಿತು.

ಸಭೆಯಲ್ಲಿ ಸಂಘದ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಮೈಸೂರು ಬಂಟರ ಸಂಘದ ಅಧ್ಯಕ್ಷರಾಗಿ ಕೆ.ಗಣೇಶ್ ನಾರಾಯಣ ಹೆಗ್ಡೆ, ಉಪಾಧ್ಯಕ್ಷರಾಗಿ ಎಂ. ನಂದ್ಯಪ್ಪ ಶೆಟ್ಟಿ ಹಾಗೂ ರಂಜಿತ್ ಹೆಗ್ಡೆ ಆಯ್ಕೆಯಾದರು. ಗೌರವ ಕಾರ್ಯದರ್ಶಿಯಾಗಿ ಸಿ.ಎ.ಸುರೇಂದ್ರ ಹೆಗ್ಡೆ, ಕೋಶಾಧಿಕಾರಿಗಳಾಗಿ ಶ್ರೀಮತಿ ಆಲಕ ರಾಣಿ ಶೆಟ್ಟಿ ಮತ್ತು ಜೊತೆ ಕೋಶಾಧಿಕಾರಿಗಳಾಗಿ ಶ್ರೀಮತಿ ಸೌಮ್ಯ ವಿ.ಶೆಟ್ಟಿ ಆಯ್ಕೆಯಾದರೆ, ಕಾರ್ಯದರ್ಶಿಗಳಾಗಿ ಶ್ರೀಮತಿ ಪ್ರಮೀಳಾ ಶೆಟ್ಟಿ ಹಾಗೂ ಡಾ.ವೇದಾಂತ್ ಶೆಟ್ಟಿ ಜವಾಬ್ದಾರಿ ವಹಿಸಿ ಕೊಂಡರು. ಬಂಟ್ಸ್ ಚಾರಿಟೇಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿಯಾಗಿ ಪಿ.ಸುರೇಶ್ ಆಳ್ವ ಆಯ್ಕೆಯಾಗಿದ್ದು, ಉಪ ಮ್ಯಾನೇಜಿಂಗ್ ಟ್ರಸ್ಟಿಗಳಾಗಿ ಡಾ.ಜಗನ್ನಾಥ್ ಶೆಟ್ಟಿ ಹಾಗೂ ಸಂಜಯ್ ಕೆ.ಶೆಟ್ಟಿ ಆಯ್ಕೆಯಾದರು. ಕೋಶಾಧಿಕಾರಿ ಹಾಗೂ ಗೌರವ ಕಾರ್ಯದರ್ಶಿಯಾಗಿ ಸಿ.ಎ.ಸುರೇಂದ್ರ ಹೆಗ್ಡೆ, ಕಾರ್ಯದರ್ಶಿಗಳಾಗಿ ಪಿ.ಹರೀಶ್ ಆಳ್ವ ಮತ್ತು ಡಾ. ಪ್ರಕಾಶ್‌ಶೆಟ್ಟಿ ಆಯ್ಕೆಯಾದರು. ಸುಮಾರು 12 ಸದಸ್ಯರನ್ನು ಒಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಏ.29, ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ



ಮೈಸೂರು, ಏ.26–ಮೈಸೂರಿನ ಅಮೃತ ಟ್ರಸ್ಟ್, ಮಣಿಪಾಲ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಹಾಗೂ ಕೆ.ಆರ್.ಆಸ್ಪತ್ರೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರವನ್ನು ಏ.29 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ರವರೆಗೆ ಚಾಮುಂಡಿಪುರಂನ ಮೇದರ ಕೇರಿ 5ನೇ ಮುಖ್ಯ ರಸ್ತೆಯಲ್ಲಿರುವ ಪಾಂಚಜನ್ಯ ಕಟ್ಟಡದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಕಣ್ಣಿನಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲುಕೋಮಾ, ವಾರೆಗಣ್ಣು, ಕಣ್ಣಿನಲ್ಲಿ ಬಿರುಕು, ನೀರು ಸೋರುವಿಕೆ, ರಾತ್ರಿ ಕುರುಡುತನ ಸಮಸ್ಯೆಗಳಿಗೆ ಪರೀಕ್ಷೆ ನಡೆಸಲಾಗುವುದು. ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಶಿಬಿರಾರ್ಥಿಗಳಿಗೆ ಉಚಿತವಾಗಿ ಬಿಪಿ, ಶುಗರ್ ಮತ್ತು ಇಸಿಜಿ ತಪಾಸಣೆ ಮಾಡಲಾಗುವುದು. ಶಿಬಿರಕ್ಕೆ ಬರುವವರು ತಮ್ಮ ಬಿಪಿಎಲ್ ಕಾರ್ಡ್‌ನ ಜೆರಾಕ್ಸ್ ತರಬೇಕು. ಉಚಿತವಾಗಿ ಆಯುಷ್ಮಾನ್ ಕಾರ್ಡ್ ಮಾಡಿ ಕೊಡಲಾಗುತ್ತದೆ. ಮಾಹಿತಿಗೆ ಮೊ:9945270646, 9742634110, 8867259815.

ನಾಳೆ ಸಂತ ಫಿಲೋಮಿನಾ ಕಾಲೇಜಲ್ಲಿ ಪದವಿ ಪ್ರದಾನ

ಮೈಸೂರು,ಏ.26(ಜಿಎ)–ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಏ.28 ರಂದು ಪದವಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ರೆಕ್ಟರ್ ಲೂರ್ದ್ ಪ್ರಸಾದ್ ಜೋಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕ ಪ್ರೊ.ಯು.ದಿನೇಶ್ ಕುಮಾರ್, ಪದವಿ ಪ್ರದಾನ ಮಾಡಿ ಭಾಷಣ ಮಾಡುವರು. ಮೈಸೂರು ಡಯಾಸೀಸನ್ ಎಜುಕೇಷನಲ್ ಸೊಸೈಟಿ ಅಧ್ಯಕ್ಷ, ಧರ್ಮಗುರುಗಳಾದ ಡಾ.ರಾನ್ಸಿಸ್ ಸೆರಾವ್ ಅಧ್ಯಕ್ಷತೆ ವಹಿಸುವರು ಎಂದರು.

ಕಾರ್ಯಕ್ರಮದಲ್ಲಿ ಸ್ನಾತಕ ಪದವಿಯಲ್ಲಿ 35 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳಿಸಿದ್ದಾರೆ. 52 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು. ಅಲ್ಲದೇ, ಮೂವರು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಟಿ.ತುಂಬೂ ಚೆಟ್ಟಿ ಪ್ರಾಯೋಜಿತ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಅಲ್ಲದೆ, ಪ್ರೊ.ಸೈಯದ್ ಅಲಿ ವಿದ್ಯಾರ್ಥಿ ವೇತನವನ್ನು ಪ್ರದಾನ ಮಾಡಲಾಗುವುದು ಎಂದರು. ಗೋಷ್ಠಿಯಲ್ಲಿ ಪ್ರಾಂಶುಪಾಲ ರವಿ ಜೆ.ಡಿ. ಸಲ್ಡಾನಾ, ಡೀನ್‌ಗಳಾದ ಡಾ.ಹೀನಾ ರಾನ್ಸಿಸ್, ಯಮುನಾ ಇತರರಿದ್ದರು.

ಶ್ರೀಮತಿ ಪುಟ್ಟೀರಮ್ಮ ಕಿವುಡು ಹೆಣ್ಣು ಮಕ್ಕಳ ಶಾಲೆಗೆ ಶೇ.100ರಷ್ಟು ಫಲಿತಾಂಶ

ಮೈಸೂರು: ಮೈಸೂರಿನ ವಾಗ್ದೇವಿನಗರದಲ್ಲಿರುವ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಅಂಗಸಂಸ್ಥೆ ಶ್ರೀಮತಿ ಪುಟ್ಟೀರಮ್ಮ ಕಿವುಡು ಹೆಣ್ಣು ಮಕ್ಕಳ ವಸತಿ ಶಾಲೆ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ.

ಕೆಪಿಸಿಸಿ ಎಸ್‌ಸಿ ಘಟಕಕ್ಕೆ ಅಧ್ಯಕ್ಷ, ಎಐಸಿಸಿ ಎಸ್‌ಸಿ ಘಟಕಕ್ಕೆ ಸಂಚಾಲಕನಾಗಿ ಧರ್ಮಸೇನಾ ನೇಮಕ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಎಂಎಲ್‌ಸಿ ಧರ್ಮಸೇನಾ ಮಾತನಾಡಿದರು.

ಮೈಸೂರು, ಏ.26(ಜಿಎ)– ಕೆಪಿಸಿಸಿ ಎಸ್‌ಸಿ ಘಟಕಕ್ಕೆ ಅಧ್ಯಕ್ಷ ಮತ್ತು ಎಐಸಿಸಿ ಎಸ್‌ಸಿ ಘಟಕದ ಸಂಚಾಲಕರನ್ನಾಗಿ ಮಾಜಿ ಎಂಎಲ್‌ಸಿ ಧರ್ಮಸೇನಾ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ತಾವು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಈ ನೇಮಕ ಮಾಡಲಾಗಿದ್ದು, ಕಾರಣಕರ್ತರಾದ ಎಲ್ಲರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಆರಂಭಿಕ ದಿನಗಳಲ್ಲಿ ವಿ.ಶ್ರೀನಿವಾಸ ಪ್ರಸಾದ್ ಪ್ರೋತ್ಸಾಹ ನೀಡಿದರು. ನಂತರ

ಗೋಷ್ಠಿಯಲ್ಲಿ ಅಭಿನಂದನೆ ಸಲ್ಲಿಸಿದ ಧರ್ಮಸೇನಾ

2006ರಲ್ಲಿ ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅವರು ಬಂದ ವೇಳೆ ಅವರ ಉಪ ಚುನಾವಣೆಯಲ್ಲಿ ಕಾರ್ಯ ನಿರ್ವಹಿಸಿದ್ದ ರೀತಿ ಗಮನಿಸಿ ಎಸ್‌ಸಿ ಘಟಕದ ಅಧ್ಯಕ್ಷನ್ನಾಗಿ ಸುಮಾರು 10 ವರ್ಷ ಸೇವೆ ಸಲ್ಲಿಸುವಂತೆ ಮಾಡಿದರು. ಬಳಿಕ ಎಂಎಲ್‌ಸಿ ಸಹಾ ಮಾಡಿದ್ದರು. ಎಂಎಲ್‌ಸಿ ಅವಧಿ ಮುಗಿದ ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವೇಣುಗೋಪಾಲ್ ಅವರು ಇನ್ನಷ್ಟು ಜವಾಬ್ದಾರಿ ನೀಡಿ ಪ್ರೋತ್ಸಾಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು ಮತ್ತು ಎಲ್ಲಾ ನಾಯಕರಿಗೂ ಧನ್ಯವಾದ ತಿಳಿಸುವುದಾಗಿ ಅವರು ಹೇಳಿದರು.

ರಾಜ್ಯದಲ್ಲಿ ಒಳ ಮೀಸಲಾತಿ ಕಗ್ಗಂಟಾಗಿತ್ತು. ಅದು ಏಕೆ ಈ ರೀತಿ ಆಯಿತು ಎಂದು ತಿಳಿದಿಲ್ಲ. ಸಿದ್ದರಾಮಯ್ಯ ಅವರು ಇಂದು ಎಲ್ಲಾ ವರ್ಗದವರಿಗೂ ಉತ್ತಮ ರೀತಿ ವಿಂಗಡಣೆ ಮಾಡಿದ್ದಾರೆ. ಸಮಾನವಾಗಿ ಹಂಚಿಕೆ ಮಾಡಿದ್ದಾರೆ. ಆದರೆ, ಬಿಜೆಪಿಯ ಮಹಿಳಾ ಮೀಸಲಾತಿ ವಿಚಾರ ಮಂಡನೆ ಸರಿ ಇಲ್ಲದ ಕಾರಣ ಅವರ ಪಕ್ಷದವರೇ ವಿರೋಧಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರಮೇಶ್, ರಂಗನಾಥ್, ಪ್ರಸಾದ್, ಬಿ.ಎಂ.ಶ್ರೀನಿವಾಸ್, ಶಿವರುದ್ರ, ಚಿಕ್ಕಣ್ಣ, ಶಶಿಕುಮಾರ್ ಇದ್ದರು.

ಖರ್ಗೆಯವರ ಟಾರ್ಗೆಟ್ ಮಾಡುವುದ ನಿಲ್ಲಿಸಿ



ಎನ್.ಭಾಸ್ಕರ್

ಮೈಸೂರು,ಏ.26–ಎಐಸಿಸಿ ಅಧ್ಯಕ್ಷರಾದ ರಾಷ್ಟ್ರೀಯ ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಗುರಿಯಾಗಿಸುವ ಧೋರಣೆಯನ್ನು ಬಿಜೆಪಿ ಪರಿವಾರ ಕೂಡಲೇ ನಿಲ್ಲಿಸಬೇಕು ಎಂದು ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಆಗ್ರಹಿಸಿದ್ದಾರೆ.

ಪಂಚರಾಜ್ಯ ಚುನಾವಣಾ ಪ್ರಚಾರದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಬಗ್ಗೆ ಆಡಿದ ಮಾತನ್ನು ನೆಪವಾಗಿಸಿಕೊಂಡು ತೇಜೋವಧೆ ಮಾಡಲಾಗುತ್ತಿದೆ. ಮಲ್ಲಿಕಾರ್ಜುನ ಖರ್ಗೆಯವರು ಸಾರ್ವಜನಿಕ ಜೀವನದಲ್ಲಿ ಐದು ದಶಕಗಳಿಗೂ ಹೆಚ್ಚು ಕಾಲದಿಂದ ಸೇವೆ ಸಲ್ಲಿಸಿರುವುದನ್ನು ಮರೆಯಬಾರದು. ಬಿಜೆಪಿ ಪರಿವಾರ ಖರ್ಗೆಯವರ ಹಿರಿತನಕ್ಕೆ ಗೌರವ ಕೊಡಬೇಕು ಎಂದಿದ್ದಾರೆ.

ಖರ್ಗೆಯವರ ಹೇಳಿಕೆಯಿಂದ ದೇಶಕ್ಕೇ ಅಪಮಾನವಾದಂತೆ ವಿವಿಧೆಡೆ ಪ್ರತಿಭಟನೆ ನಡೆಸಿ, ಅವರ ರಾಜೀನಾಮೆಗೆ ಒತ್ತಾಯಿಸಲಾಗುತ್ತಿದೆ. ದೇಶದ ಗೌರವಕ್ಕೆ ಧಕ್ಕೆ ತರುವ ಯಾವ ಕೆಲಸವನ್ನೂ ಖರ್ಗೆಯವರು ಮಾಡಿಲ್ಲ ಎಂಬುದನ್ನು ಬಿಜೆಪಿಯವರು ಅರ್ಥ ಮಾಡಿಕೊಳ್ಳಬೇಕು. ಕಳೆದ ಒಂದೂವರೆ ದಶಕದಿಂದ ದೇಶದಲ್ಲಿ ಅಶಾಂತಿ ಸೃಷ್ಟಿಸಿ, ಜನರನ್ನು ಬೆದರಿಸಲಾಗುತ್ತಿದೆ ಎಂಬರ್ಥದಲ್ಲಿ ಮಾತನಾಡಿರುವುದು ಮಹಾಪರಾಧವೇನಲ್ಲ ಎಂದಿದ್ದಾರೆ.

ಚುನಾವಣಾ ಆಯೋಗ 24 ಗಂಟೆಯೊಳಗೆ ಉತ್ತರ ನೀಡುವಂತೆ ಖರ್ಗೆಯವರಿಗೆ ನೋಟೀಸ್ ನೀಡಿದೆ. ಎಲ್ಲ ಪ್ರಕರಣಗಳಲ್ಲೂ ಆಯೋಗ ಇದೇ ರೀತಿ ಕಾರ್ಯನಿರ್ವಹಿಸಿದೆಯೇ, ಚುನಾವಣಾ ಆಯೋಗದ ಮೇಲೆಯೇ ಬಂದ ಆರೋಪಗಳಿಗೆ ಈವರೆಗೆ ಏಕೆ ಉತ್ತರಿಸಿಲ್ಲ. ಮಲ್ಲಿಕಾರ್ಜುನ ಖರ್ಗೆಯವರು ದಲಿತರೆಂಬ ಕಾರಣಕ್ಕೆ ನೋಟಿಸ್ ಕೊಡಲಾಯಿತೇ ಎಂದು ಪ್ರಶ್ನಿಸಿರುವ ಭಾಸ್ಕರ್, ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಹೇಳಿಕೆಗಳಿಗೆ ಸ್ಪಷ್ಟನೆ ಕೊಟ್ಟಿದ್ದರೂ ಬಿಜೆಪಿ ಪರಿವಾರ ರಾಜಕಾರಣ ಮಾಡುತ್ತಿರುವುದು ನಾಚಿಕೆಗೇಡು ಎಂದು ಕಿಡಿಕಾರಿದ್ದಾರೆ.

ಒಳ ಮೀಸಲಾತಿ ಹಂಚಿಕೆಗೆ ಸ್ವಾಗತ

ಮೈಸೂರು,ಏ.26(ಜಿಎ)–ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ಸರ್ವರಿಗೂ ಸಮಪಾಲು, ಸಮಬಾಳು ಎಂಬ ತತ್ವದ ಅಡಿಯಲ್ಲಿ ಶೇ.17ರ ಬದಲಿಗೆ ಶೇ.15 ಶೈಕ್ಷಣಿಕ, ಔದ್ಯೋಗಿಕ ಒಳ ಮೀಸಲಾತಿ ಹಂಚಿಕೆ ಮಾಡಿರುವುದು ಸ್ವಾಗತಾರ್ಹವಾಗಿದೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಒಳ ಮೀಸಲಾತಿ ಜಾರಿಗೊಳಿಸುವಲ್ಲಿ ಸಿಎಂ ಸಿದ್ದರಾಮಯ್ಯ ಅವರು ದಲಿತ ಸಚಿವರು ಹಾಗೂ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾಗಮೋಹನ್ ದಾಸ್ ವರದಿ ಅನ್ವಯವಾಗುವಂತೆ ಮಾಡಿ, ಹೋರಾಟಗಾರರು ಹಾಗೂ ಅವಕಾಶ ವಂಚಿತರಾದವರ ಬಹು ದಿನಗಳ ಕನಸು ನನಸು ಮಾಡಿದ್ದಾರೆ. ಈ ರೀತಿ ಒಳ ಮೀಸಲಾತಿ ಜಾರಿಗೊಳಿಸಿದ ಯಶಸ್ಸು ಕಾಂಗ್ರೆಸ್ ಪಕ್ಷಕ್ಕೆ ಸಲ್ಲುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಶೋಕಪುರಂ ಮಹೇಶ್, ರಾಜಶೇಖರ್, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಅಶೋಕಪುರಂ ಪುಟ್ಟರಾಜು, ಶಿವಶಂಕರಮೂರ್ತಿ, ರಾಮು, ರವಿ ಉಪಸ್ಥಿತರಿದ್ದರು.



ನಟಸಾರ್ವಭೌಮ ಹುಟ್ಟುಹಬ್ಬ

ಡಾ.ರಾಜ್‌ಕುಮಾರ್ ಅವರ 98ನೇ ಜನ್ಮ ದಿನಾಚರಣೆ ಪ್ರಯುಕ್ತ ಬಿಜೆಪಿ ಮುಖಂಡ, ಚಲನಚಿತ್ರ ನಾಯಕ ನಟ ಎಸ್.ಜಯಪ್ರಕಾಶ್(ಜೆಪಿ) ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಡಾ.ರಾಜ್ ಸಂಘದ ಅಧ್ಯಕ್ಷ ಮಹಾದೇವಸ್ವಾಮಿ, ನಿರ್ಮಾಪಕರಾದ ಚೇತನ್ ಎಸ್.ರಮೇಶ್, ಹನುಮಂತ್‌ಗೌಡ, ಸೋಮೇಶ್, ನರಸಿಂಹ ಗೌಡ, ಸುರೇಶ್, ಧರ್ಮೇಗೌಡ ಇತರರಿದ್ದರು.

ಇಂದು ಪೂರ್ವಭಾವಿ ಸಭೆ

ಮೈಸೂರು: ಶಿವಯೋಗಿ ಶ್ರೀ ಸಿದ್ದರಾಮೇಶ್ವರ ಜಯಂತಿಯನ್ನು ಹಾಗೂ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ರಾಜ್ಯ ಮಟ್ಟದಲ್ಲಿ ಆಯೋಜಿಸುವ ಸಂಬಂಧ ಎಡಿಸಿ ಅಧ್ಯಕ್ಷತೆಯಲ್ಲಿ ಏ.27ರಂದು ಬೆಳಗ್ಗೆ 11ಕ್ಕೆ ಡಿಸಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.4.2026 ಸೋಮವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್:** ನಂಜನಗೂಡು ತಾಲೂಕು ನಗರ್ಲೆ ಗ್ರಾಮದ ಅಂಗನವಾಡಿ ಕೇಂದ್ರಗಳಿಗೆ ಪಿಠೋಪಕರಣ ವಿತರಣಾ ಕಾರ್ಯಕ್ರಮ, ಉದ್ಘಾಟನೆ: ಜಿಲ್ಲಾ ಗವರ್ನರ್, ಮೇಜರ್ ಡೋನರ್ ರೊಟೇರಿಯನ್ ಪಿ.ಕೆ.ರಾಮಕೃಷ್ಣ, ಅಧ್ಯಕ್ಷತೆ: ರೋಟರಿ ಕ್ಲಬ್ ಆಫ್ ಮೈಸೂರು ಅಧ್ಯಕ್ಷರಾದ ಎನ್.ಎಸ್.ಮಹದೇವಸ್ವಾಮಿ, ಸ್ಥಳ: ವಾಲ್ಮೀಕಿ ಸಮುದಾಯ ಭವನ ನಗರ್ಲೆ ಗ್ರಾಮ, ನಂಜನಗೂಡು ತಾಲೂಕು, ಬೆಳಗ್ಗೆ 11 ಕ್ಕೆ.

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾದಿ ಮಠಾಧೀಶರಾದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ ಸರ್ವಮೂಲ, ವೇದ ಪಾರಾಯಣ, ಸಂಜೆ ಕುಮಾರಿ ಕೌಸಲ್ಯ ಮತ್ತು ಅಪ್ರಮೇಯ ಅವರಿಂದ ಹರಿಕೀರ್ತನ ಗಾಯನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ.

■ **ಶ್ರೀಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ–2026 ಪೂಜಾ ಕಾರ್ಯಕ್ರಮ, ಚತುಸ್ಥಾನಾರ್ಚನೆ, ನಿತ್ಯಹೋಮ, ಅಷ್ಟಲಕ್ಷ್ಮಿ ಹೋಮ, ಡೋಲೋತ್ಸವ ಬೆಳಗ್ಗೆ 9ಕ್ಕೆ, ರಾಮತಾರಕ ಹೋಮ, ಪಂಚಮುಖಿ ಹನುಮಾನ್ ಮಂತ್ರಹೋಮ, ಹನುಮಂತೋತ್ಸವ, ಸ್ಥಳ: ದೇವಾಲಯದ ಪ್ರಾಂಗಣ, ಗೋಕುಲಂ, 3ನೇ ಹಂತ ಸಂಜೆ 6ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಮಂದ ದೃಷ್ಟಿ, ಕಣ್ಣಿನ ನೋವು ಹಾಗೂ ಕಣ್ಣಿನಲ್ಲಿ ನೀರು ಬರುವುದು, ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸೆ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಗೀತಾರಾಧನ, 6.30 ಚಿಂತನ–ವಿ.ಎ.ಉಮೇಶ ಕಾರಂತ, 6.35 ಮತ್ತು ಸಂಜೆ 6.10: ಸಸ್ಯ ಸಿರಿಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಎ.ಶೋಭಾ, ಪಿ.ಸುರಭಿ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶುಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 9.00 ನೆನಪಿನಂಗಳ–ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ, ಪ್ರೊ.ಎಸ್.ವಿ.ರಂಗಣ್ಣನವರ ಬದುಕು ಬರಹ ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಪ್ರೊ.ಸಿ.ಪಿ.ಕೆ ಅವರು ನೀಡಿದ್ದ ಉಪನ್ಯಾಸದ ಆಯ್ದ ಭಾಗದ ಧ್ವನಿ ಮುದ್ರಣ. ನಂತರ ಪ್ರೊ.ಸಿ.ಪಿ.ಕೆ ಅವರಿಂದ ಸ್ವರಚಿತ ಕವನ ವಾಚನ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿ.ಶ್ರೀಕಾಂತ್–ವಯೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ–ಚಿನ್ಮಯಿ.ಕೆ.ಎಸ್ ಹಾಗೂ ಕೀರ್ತನಾ.ವಿ, **ಮಧ್ಯಾಹ್ನ** 12.05 ವನಿತಾ ವಿಹಾರ–ಯೋಗ ಮಿತ್ರ ಮಹಿಳಾ ಮಂಡಳದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ. ಪ್ರಸ್ತುತಿ : ಮಂಜುಳಾ ಪುರಾಣಿಕ, 12.35 ದೇವರನಾಮ, 12.45 ನಮ್ಮ ಆರೋಗ್ಯ–ಗರ್ಭಿಣಿ ಹಾಗೂ ಮಗುವಿನ ಆರೋಗ್ಯಕ್ಕಾಗಿ ಅಗತ್ಯ ಪೋಷಕಾಂಶಗಳು ಈ ಕುರಿತು ಮೈಸೂರಿನ ಜೆ.ಎಸ್.ಎಸ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಸಂಸ್ಥೆಯ ಪೋಷಣೆ ಮತ್ತು ಪಥ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಸುಧಾ ಸಾಯಿರಾಂ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಅವಾಸ್ ಯೋಜನೆ ಅಡಿಯಲ್ಲಿ ಸರ್ವರಿಗೂ ವಸತಿ ಯೋಜನೆ. ಮಾತನಾಡುತ್ತಾರೆ: ಯೋಗೀಶ್ .ಎಂ.ಎಸ್ ಹಿರಿಯ ಪತ್ರಕರ್ತರು. 1.20 ಭಾವಗೀತೆಗಳು, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ವಿ.ಸಹನಾ –ವೀಣಾ ವಾದನ, 4.00 ಮಹಿಳಾರಂಗ–ನಾಟಕ–ಪೋನಾಯಣ, ರಚನೆ: ಬಿ.ಆರ್.ನಾಗರತ್ನ, ನಿರ್ದೇಶನ ಹಾಗೂ ನಿರ್ಮಾಣ–ದಿಗ್ವಿಜಯ್.ಬಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ : ಶಾಂತಾ.ಡಿ.ಕಿಣಿ, 5.00 ಮಾರ್ವಲ್ ಪಿ.ಯು ಕಾಲೇಜು ಪ್ರಾಯೋಜಿತ ಕಾರ್ಯಕ್ರಮ –ಮಾರ್ವಲ್ ಪಿ.ಯು ಕಾಲೇಜಿನಲ್ಲಿರುವ ಕೋರ್ಸ್‌ಗಳ ಕುರಿತು ಮಾತನಾಡಲಿದ್ದಾರೆ ಪ್ರಾಂಶುಪಾಲರಾದ ಸುಮತಿ ಬಾಯಿ.ಡಿ, ಕಾರ್ಯದರ್ಶಿಗಳಾದ ಡಾ.ಗಿಣಿಸ್ವಾಮಿ ಹಾಗೂ ಸಂಯೋಜಕರಾದ ಸಾಗರ ಗೌಡ ಪ್ರಾಯೋಜಕರು–ಮಾರ್ವಲ್ ಪಬ್ಲಿಕ್ ಸ್ಕೂಲ್ ಮತ್ತು ಪಿ.ಯು ಕಾಲೇಜು, ಲಲಿತಾದ್ರಿನಗರ, ಮೈಸೂರು. ಪ್ರಸ್ತುತಿ–ಚಿನ್ಮಯಿ.ಕೆ.ಎಸ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಹೆಸರು ಮತ್ತು ಉದ್ದು ಬೆಳೆಯ ಉತ್ಪಾದನಾ ತಾಂತ್ರಿಕತೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಎಂ.ಕೆ.ಶ್ರುತಿ ಮತ್ತು ಚಾಮರಾಜನಗರ ತಾಲೂಕು ಸಂತೇಮರಳ್ಳಿ ಹೋಬಳಿ ಕೋಟಂಬಳ್ಳಿಯ ಎಂ.ನಾಗೇಂದ್ರಸ್ವಾಮಿ.ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಯುವನಟಿ ಮಿಸ್ಸೆಸ್ ಇಂಡಿಯಾ ಅಲ್ಯೂರಿಂಗ್ ಕಿರೀಟವನ್ನು ಮುಡಿಗೇರಿಸಿಕೊಂಡ ಸ್ವಾತಿ ಲಿಂಗರಾಜು ಅವರೊಂದಿಗೆ ಮಾತುಕತೆ–ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್ .ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಆಲತ್ತೂರು ಸಹೋದರರು–ಯುಗಳ ಹಾಡುಗಾರಿಕೆ, 10.00 –ಶ್ರೀ ವಿದ್ಯಾವಿಶಾರದಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ –ವಿದ್ವಾನ್ ವಿ.ನಂಜುಂಡಸ್ವಾಮಿ, 10.30–ಸವಿನೆನಪು.

ಪರಿಶ್ರಮ, ಬುದ್ಧಿವಂತಿಕೆಯಿಂದ ಗುರಿ ಮುಟ್ಟಲು ಸಾಧ್ಯ

ನಿರಂತರ ಶ್ರಮ, ಉತ್ತಮ ಶಿಕ್ಷಣದಿಂದ ಸೇನೆಯಲ್ಲಿ 34 ವರ್ಷಗಳ ಕಾಲ ಸೇವೆ; ಜಿ.ಕೇಶವಮೂರ್ತಿ

ಮೈಸೂರು, ಏ.26(ವಿವಿಹೆಚ್)– ನಿರಂತರ ಶ್ರಮ ಮತ್ತು ಉತ್ತಮ ಶಿಕ್ಷಣದ ಸಹಾಯದಿಂದ 34 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿತು. ಈ ಸಾಧನೆಗೆ ಪರಿಶ್ರಮವೇ ಮದ್ದು ಎಂದು ಹಿರಿಯ ಇಂಟರ್ವೆನ್ಷನಲ್ ಹೃದಯರೋಗ ತಜ್ಞ ಡಾ. (ಬ್ರಿಗೇಡಿಯರ್) ಕೇಶವ್‌ಮೂರ್ತಿ.ಜಿ ತಿಳಿಸಿದರು.

ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ದಿ ಅನಾಥಾಲಯದ ಅನ್ನಪೂರ್ಣ ನಿಲಯದಲ್ಲಿ ಭಾನುವಾರ ಆಯೋಜಿಸಿದ್ದ ವಿ.ನಾರಾಯಣ್ ರಾವ್ ಸ್ಮಾರಕ 30ನೇ ರಾಜ್ಯ ಮಟ್ಟದ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಗುರಿ ಸಾಧಿಸಲು ಪರಿಶ್ರಮ ಪಟ್ಟು ಕೆಲಸ ಮಾಡುವುದು ಮತ್ತು ಬುದ್ಧಿವಂತಿಕೆಯಿಂದ ಕೆಲಸ ಮಾಡುವುದು ಬಹಳ ಮುಖ್ಯವಾಗಿರುತ್ತದೆ. ವೈದ್ಯ ವೃತ್ತಿಯಲ್ಲಿ ಸತತ 36 ಗಂಟೆಗಳ ಕಾಲವೂ ಕೆಲಸ ಮಾಡಲೇ ಬೇಕಾಗುತ್ತದೆ. ಆದೇ ರೀತಿ ಗುರಿ ಸಾಧನೆಗೆ ಶ್ರಮ ಹಾಕಬೇಕು. ಹಾಗೆಯೇ ಬುದ್ಧಿವಂತಿಕೆಯಿಂದ ಕೆಲಸ ಮಾಡಲು ಯಾವುದನ್ನು ಎಷ್ಟು ಓದಬೇಕು, ಯಾವುದಕ್ಕೆ ಎಷ್ಟು ಮಹತ್ವ ನೀಡಬೇಕು ಎಂಬುದನ್ನು ತಿಳಿಯಬೇಕು. ಆಗಿದ್ದಾಗ ಮಾತ್ರ ಗುರಿ ಸಾಧನೆ ಸಾಧ್ಯ ಎಂದರು.


ಕಾರ್ಯಕ್ರಮದಲ್ಲಿ ಹಿರಿಯ ಇಂಟರ್ವೆನ್ಷನಲ್ ಹೃದಯರೋಗ ತಜ್ಞ ಡಾ. (ಬ್ರಿಗೇಡಿಯರ್) ಕೇಶವ್‌ಮೂರ್ತಿ.ಜಿ ಮಾತನಾಡಿದರು.

> ವೈದ್ಯನಾಗಿ ಭಾರತೀಯ ವಾಯು ಸೇನೆ ಮತ್ತು ಭೂ ಸೇನೆಯಲ್ಲಿ 34 ವರ್ಷಗಳ ಕಾಲ ಸೇವೆ ಮಾಡಿದೆ. ಅದರಲ್ಲೂ ಕಾರ್ಗಿಲ್ ಯುದ್ಧ, ಆಪರೇಷನ್ ಪರಾಕ್ರಮ್ ಹಾಗೂ ಆಪರೇಷನ್ ಸಿಂಧೂರ್ ಯುದ್ಧಗಳಲ್ಲಿ ಅಂಡರ್ ಗ್ರೌಂಡ್ ಹಾಸ್ಪಿಟಲ್ಸ್ ಡಾಕ್ಟರ್ ಆಗಿ ಸೇವೆ ಸಲ್ಲಿಸಿರುವುದು ಜೀವನದ ಅವಿಸ್ಮರಣೀಯ ಸಂಗತಿ.
> -ಡಾ. (ಬ್ರಿಗೇಡಿಯರ್) ಕೇಶವ್‌ಮೂರ್ತಿ.ಜಿ, ಹೃದಯರೋಗ ತಜ್ಞ

'ಅತಿಯಾದ ತಂತ್ರಜ್ಞಾನಗಳ ಆವಿಷ್ಕಾರವೇ ಪ್ರಸ್ತುತ ಜಾಗತಿಕ ಸಂಘರ್ಷಕ್ಕೆ ಕಾರಣ' ಎಂಬ ವಿಷಯದಡಿ ನಡೆದ ಚರ್ಚಾ ಸ್ಪರ್ಧೆಯಲ್ಲಿ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಿ.ಆರ್.ಜೀವಿತ ಪ್ರಥಮ ಸ್ಥಾನ ಪಡೆದುಕೊಂಡರು. ಮೈಸೂರು ವಿವಿ ಸ್ನಾತಕೋತ್ತರ ವಿಭಾಗದ ಕುಸುಮ ಬಾಯಿ.ಆರ್ ದ್ವಿತೀಯ ಸ್ಥಾನ, ಪ್ರಥಮ ದರ್ಜೆ ಕಾಲೇಜಿನ ಮೇಧಿನಿ ಭಟ್ ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು. ಇದೇ ವೇಳೆ ವಿದ್ಯಾವಿಕಾಸ್ ಕಾನೂನು ಕಾಲೇಜಿಗೆ ಪರ್ಯಾಯ ಪಾರಿತೋಷಕವನ್ನು ನೀಡಲಾಯಿತು. ತೀರ್ಪುಗಾರರಾಗಿ ರಾಮಚಂದ್ರ ಭಟ್, ಲೇಖಕ ರಾಘವೇಂದ್ರ, ಇತಿಹಾಸ ಶಿಕ್ಷಕಿ ಮಂಜುಳಾ ಸ್ಪರ್ಧೆ ನಡೆಸಿಕೊಟ್ಟರು.

ಮತ್ತೊಂದು ಬಹು ಮುಖ್ಯ ಅಂಶ, ವಿದ್ಯಾರ್ಥಿಗಳಾದವರು ಸುಖವನ್ನು ತ್ಯಜಿಸಬೇಕು. ವಿದ್ಯಾರ್ಥಿ ದೆಸೆಯಲ್ಲಿ ಸುಖಕ್ಕೆ ಮಣೆ ಹಾಕಿದವರಿಗೆ ವಿದ್ಯೆ ಬರಲಾರದು. ಆಲೋಚನಾತ್ಮಕವಾಗಿ ನೀವು ಆಯ್ದುಕೊಳ್ಳುವ ಹಾದಿ ನಿಮ್ಮ ಭವಿಷ್ಯವನ್ನೇ ನಿರ್ಧರಿಸಲಿದೆ ಎಂದು ಸಲಹೆ ನೀಡಿದರು.

ಓದುವ ಹಂತದಲ್ಲಿ ವಿದ್ಯಾರ್ಥಿಗಳು ಚೇತರಿಸಿಕೊಳ್ಳುವಿಕೆಯನ್ನು ಕಲಿಯಬೇಕು. ಕಠಿಣ ಶ್ರಮದ ಹೊರತಾಗಿಯೂ ನಿರೀಕ್ಷಿತ ಗೆಲುವು ಸಿಗದೇ ಇದ್ದಾಗ ಒತ್ತಡಕ್ಕೆ ಮಣಿಯಬಾರದು. ನಿರೀಕ್ಷಿತ ಅಂಕಗಳು ಸಿಗದೇ ಇದ್ದಾಗ ಕೆಲವರು ಆತ್ಮಹತ್ಯೆಗೆ ಶರಣಾಗುವ ಸಂಗತಿಗಳು ನಡೆಯುತ್ತಿರುವುದು ಬೇಸರದ ಸಂಗತಿ. ವಿದ್ಯಾರ್ಥಿ ದೆಸೆಯಲ್ಲಿಯೇ ಇಂತಹವುಗಳನ್ನು ಮೆಟ್ಟಿನಿಲ್ಲುವ ಮನಸ್ಥಿತಿಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು ಎಂದರು.

ಇದರೊಂದಿಗೆ ಸಮಯ ಪಾಲನೆ, ಆತ್ಮವಿಶ್ವಾಸ, ನಾಗರಿಕ ಪ್ರಜ್ಞೆ, ದೈನಂದಿನ ವ್ಯಾಯಾಮ, ಭವಿಷ್ಯದ ಜೀವನದ ಬಗ್ಗೆ ಅತ್ಯಂತ ಕಾಳಜಿ ವಹಿಸಬೇಕು ಎಂದೂ ಸಲಹೆ ನೀಡಿದರು. ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್, ಉಪಾಧ್ಯಕ್ಷ ಎನ್.ವಿ.ದಿನೇಶ್, ಕಾರ್ಯದರ್ಶಿ ಅಶ್ವಥ್ ನಾರಾಯಣ ಉಪಸ್ಥಿತರಿದ್ದರು.

ಕಾಂಗ್ರೆಸ್ ಯುವ ಸಂಘಟನೆ ಬಲಿಷ್ಠ

• ಶಾಸಕ ಕೆ.ಹರೀಶ್‌ಗೌಡ ಅಭಿಮತ • ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಮನೋಜ್ ಪದಗ್ರಹಣ



ಶಾಸಕ ಕೆ.ಹರೀಶ್‌ಗೌಡ ಅವರ ಸಮ್ಮುಖದಲ್ಲಿ ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಘಟಕದ ಉಪಾಧ್ಯಕ್ಷರಾಗಿ ಮನೋಜ್ ಪದಗ್ರಹಣ ಮಾಡಿದರು.

ಮೈಸೂರು,ಏ.26(ಪಿಎಂ)– ಕಾಂಗ್ರೆಸ್‌ನ ಎಸ್‌ಎಸ್‌ಯುಐ ಹಾಗೂ ಯುವ ಘಟಕಗಳಲ್ಲಿ ಸಂಘಟನೆ ಬಲಿಷ್ಠವಾಗಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಮಂಜುನಾಥಪುರ ಮುಖ್ಯ ರಸ್ತೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಘಟಕದ ಉಪಾಧ್ಯಕ್ಷರಾಗಿ ಮನೋಜ್ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುವ ಕಾಂಗ್ರೆಸ್‌ನಲ್ಲಿ ಸೇವೆ ಸಲ್ಲಿಸಿದ ಅನೇಕ ಮಹನೀಯರು ರಾಜ್ಯದ ಮಂತ್ರಿ, ಮುಖ್ಯಮಂತ್ರಿಗಳಾಗಿದ್ದಾರೆ. ರಾಷ್ಟ್ರ ಮಟ್ಟದ ನಾಯಕರಾಗಿ ಹೊರಹೊಮ್ಮಿದ್ದಾರೆ. ಕಾಂಗ್ರೆಸ್‌ನಲ್ಲಿರುವ ಯುವ ಕಾರ್ಯಕರ್ತರು ಸಮಾಜಮುಖಿ ಕೆಲಸದೊಂದಿಗೆ ಜನ ಸಂಪರ್ಕ ಹೊಂದುವ ಮೂಲಕ ಪಕ್ಷ ಸಂಘಟನೆಗೆ ಶ್ರಮಿಸಬೇಕು. ಯಾವುದೇ ಗೊಂದಲಗಳಿಗೆ ಅವಕಾಶ ನೀಡದೇ ಸ್ನೇಹ ಪ್ರೀತಿ–ವಿಶ್ವಾಸಗಳನ್ನು ಗಳಿಸಿ ಜನರ ಮನಸ್ಸನ್ನು ಗೆಲ್ಲಬೇಕು ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರದಲ್ಲಿ ಪದವಿ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಪದವೀಧರರು ಹೆಚ್ಚಿದ್ದಾರೆ. ಪಕ್ಷದ ಯುವ ಕಾರ್ಯಕರ್ತರು ಅವರ ಒಡನಾಟ ಹೊಂದಬೇಕು. ಯುವ ಜನರಿಗೆ ಪಕ್ಷದ ಸದಸ್ಯತ್ವ ಕೊಡಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಮಂಜುನಾಥಪುರದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್‌ನ ಅಧ್ಯಕ್ಷ ನಿಶಾಂತ್ ಪಟೇಲ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಚಾಮರಾಜ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ನಾಗಭೂಷಣ್ ಭಾಗವಹಿಸಿದ್ದರು.


ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಶಶಾಂಕಗೌಡ, ಪದಾಧಿಕಾರಿಗಳಾದ ಹೊಯ್ಸಳ, ಕಿರಣ್, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ದೇವರಾಜ ಬ್ಲಾಕ್ ಪದಾಧಿಕಾರಿಗಳಾದ ಪವನ್, ವಿನಯ್, ಗ್ಯಾರಂಟಿ ಅನುಷ್ಠಾನ ಸಮಿತಿಯ ಸದಸ್ಯರಾದ ವೆಂಕಟೇಶ್, ವಾರ್ಡ್ ನಂಬರ್ 18ರ ಕಾಂಗ್ರೆಸ್ ಅಧ್ಯಕ್ಷ ಕುಮಾರ್, ಪಕ್ಷದ ಮುಖಂಡರಾದ ಡೆಲ್ಲಿ ರವಿ, ಚಂದ್ರು ಮತ್ತಿತರರು ಹಾಜರಿದ್ದರು.

ಶ್ರೀ ಭಂಡಾರ ಕೇರಿ ಮಠ ಉಡುಪಿಯ ರಾಷ್ಟ್ರೀಯ ಪ್ರಶಸ್ತಿಗೆ

ಮೈಸೂರಿನ ಬೆಮ್ಮತ್ತಿ ವಿಜಯೇಂದ್ರ ಆಚಾರ್ಯ ಆಯ್ಕೆ

ರಾಯಚೂರಿನಲ್ಲಿ ಏ.28ರಂದು ಪ್ರಶಸ್ತಿ ಪ್ರದಾನ

ಮೈಸೂರು,ಏ.26(ಪಿಎಂ)– ಉಡುಪಿ ಶ್ರೀ ಭಂಡಾರಕೇರಿ ಮಠದ ವಾರ್ಷಿಕ ರಾಷ್ಟ್ರೀಯ ಪ್ರಶಸ್ತಿಗೆ ಮೈಸೂರಿನ ಅಭ್ಯಂಣೀ ಗುರುಕುಲದ ವಿದ್ವಾನ್ ಬೆಮ್ಮತ್ತಿ ವಿಜಯೇಂದ್ರ ಆಚಾರ್ಯ ಸೇರಿದಂತೆ ಮೂವರು ವಿದ್ವಾಂಸರು ಆಯ್ಕೆಯಾಗಿದ್ದಾರೆ.



ಹಿರಿಯ ವಿದ್ವಾಂಸರಾದ ಹೈದರಾಬಾದ್‌ನ ಪಂಡಿತ ಚಿಟಗುಪ್ಪ ಪದ್ಮನಾಭ ಆಚಾರ್ಯ, ಬಾಗಲಕೋಟೆಯ ವಿದ್ವಾನ್ ನಾಗ ಸಂಪಿಗೆ ರಘೂತ್ತಮ ಆಚಾರ್ಯರಿಗೂ ಪ್ರಶಸ್ತಿ ಘೋಷಣೆಯಾಗಿದೆ.

ಕಿರು ಪರಿಚಯ: ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಅಧ್ಯಯನ ನಡೆಸಿ, ಶ್ರೀ ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿಯವರ ತತ್ವ, ಸಂದೇಶ ಮತ್ತು ಸಾಮಾಜಿಕ ಕಳಕಳಿಗಳನ್ನು ಜಾರಿಗೊಳಿಸಲು ಪತ್ನಿ ಸಮೇತ ಕಂಕಣಬದ್ಧರಾಗಿರುವ ವಿದ್ವಾನ್ ಬೆಮ್ಮತ್ತಿ ವಿಜಯೇಂದ್ರ ಆಚಾರ್ಯ, ಮೈಸೂರಿನಲ್ಲಿ ಹೆಣ್ಣುಮಕ್ಕಳ ವೈದಿಕ ಮತ್ತು ಸಾಂಸ್ಕೃತಿಕ ಶಿಕ್ಷಣಕ್ಕಾಗಿ ಜೀವನ ಪರ್ಯಂತ ಸಾಧನೆ ಮಾಡುವ ಪಣ ತೊಟ್ಟಿದ್ದಾರೆ.

ಇವರು ಸಂಶೋಧನಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿ, ಗ್ರಂಥಕರ್ತ, ಪ್ರವಚನಕಾರರಾಗಿ ಖ್ಯಾತರಾಗಿದ್ದಾರೆ. ಸ್ತ್ರೀ ಧರ್ಮ– ಸಂಸ್ಕೃತಿ ಪಾಲನೆಗಾಗಿ 30 ಜನ ಹೆಣ್ಣು ಮಕ್ಕಳಿಗೆ ಅಭ್ಯಂಣೀ ಗುರುಕುಲವನ್ನು ಮೈಸೂರಿನ ಜಯನಗರದಲ್ಲಿ ನಡೆಸುತ್ತಿದ್ದಾರೆ. ಇವರಿಗೆ ಶ್ರೀಮಠವು 'ಶ್ರೀ ರಾಜವಿದ್ಯಾಮಾನ್ಯ ಪ್ರಶಸ್ತಿ' (50 ಸಾವಿರ ರೂ. ನಗದು ಮತ್ತು ಸನ್ಮಾನ ಪತ್ರ) ಘೋಷಣೆ ಮಾಡಿರುವುದು ಮೈಸೂರಿಗೆ ಹೆಮ್ಮೆ ತಂದಿದೆ.

ರಾಯಚೂರಿನ ಕೋಟೆ ಮುಖ್ಯಪ್ರಾಣ ದೇವರ ಗುಡಿ ಸಭಾಂಗಣದಲ್ಲಿ ಏ.28ರ ಸಂಜೆ 5ಕ್ಕೆ ಶ್ರೀ ಮಠ, ಶ್ರೀ ಮಾಧ್ವ ರಾದ್ಧಾಂತ ಸಂವರ್ಧಕಸಭಾ, ರಾಷ್ಟ್ರಗುರು ಶ್ರೀ ವೇದವ್ಯಾಸ ಜಯಂತಿ ಸಂದರ್ಭ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಭಂಡಾರಕೇರಿ ಶ್ರೀಗಳಾದ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಲ್ಲಿ ವೈಜ್ಞಾನಿಕ ಪ್ರಜ್ಞೆ ಮೂಡಿಸಿದ ಹುಲಿಕಲ್ ನಟರಾಜ್

ಬಸವಮಾರ್ಗ ಫೌಂಡೇಶನ್‌ನಿಂದ ಉಚಿತ ವಸತಿ ಸಹಿತ ಬೇಸಿಗೆ ಶಿಬಿರ

ಮೈಸೂರು, ಏ.26– ನಗರದ ಹೆಬ್ಬಾಳಿನಲ್ಲಿರುವ ಬಸವಮಾರ್ಗ ಫೌಂಡೇಶನ್ ವತಿಯಿಂದ ಆಯೋಜಿಸಿರುವ ಉಚಿತ ವಸತಿ ಸಹಿತ ಬೇಸಿಗೆ ಶಿಬಿರಕ್ಕೆ ಪವಾಡ ಬಯಲು ತಜ್ಞ ಡಾ.ಹುಲಿಕಲ್ ನಟರಾಜು ಬೇಟಿ ನೀಡಿ ಮಕ್ಕಳಲ್ಲಿ ವೈಜ್ಞಾನಿಕ ಪ್ರಜ್ಞೆ ಮೂಡಿಸಿದರು.

ಬಳಿಕ ಮಾತನಾಡಿ, ಮಕ್ಕಳು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವ ಜೊತೆಗೆ ಪ್ರಜ್ಞಾವಂತಿಕೆಯನ್ನು ಬೆಳೆಸಿಕೊಳ್ಳಬೇಕು. ಕಣ್ಣುಕಟ್ಟುವ ಪ್ರದರ್ಶನಗಳನ್ನು ಪವಾಡಗಳೆಂದು ನಂಬುವಂತೆ ಜನರನ್ನು ಮೋಸಗೊಳಿಸುವ ಬಗ್ಗೆ ಎಚ್ಚರ ವಹಿಸಬೇಕು ಎಂದರು.

ಯಾವುದೇ ದೆವ್ವ, ಭೂತಗಳು ಇಲ್ಲ. ದೆವ್ವ ಹಿಡಿದಿದೆ ಎಂದು ಜನರನ್ನು ಯಾಮಾರಿಸುವ ವರ್ಗವೇ ಇದೆ. ನಾಲಿಗೆ ಮೇಲೆ ಕರ್ಪೂರ ಹಚ್ಚಿಕೊಳ್ಳುವುದು, ಅಕ್ಕಿ ತುಂಬಿದ ಬಿಂದಿಗೆಯಿಂದ ಚಾಕು ಚುಚ್ಚಿ ತೆಗೆಯುವುದು. ಮಡಿಕೆಯಿಂದ ನೊರೆ ಬರಿಸುವುದು, ತೆಂಗಿನ ಕಾಯಿಯಿಂದ ಬೋರ್‌ವೆಲ್ ಪಾಯಿಂಟ್ ಗುರುತಿಸುವ ಮೋಸದ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು.

ಮೂಢ ನಂಬಿಕೆ ನಮ್ಮಲ್ಲಿ ಹಾಸು ಹೊಕ್ಕಾಗಿದೆ. ಇದು ನಗರ ಪ್ರದೇಶಗಳಲ್ಲಿ ಕಡಿಮೆ, ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಎಂದು ಹೇಳಲು ಬರುವುದಿಲ್ಲ. ಎಲ್ಲೆಡೆಯೂ ಮೂಢನಂಬಿಕೆ ಇದೆ. ಆದರೆ ಜಗತ್ತು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವೇಗವಾಗಿ ಓಡುತ್ತಿದೆ ಆದರೆ ನಮ್ಮ ಜನರು ಇನ್ನೂ ಮೂಢನಂಬಿಕೆಗಳಲ್ಲಿ ಇದ್ದಾರೆ ಎಂದರು.


ನಗರದ ಹೆಬ್ಬಾಳಿನಲ್ಲಿ ಇರುವ ಬಸವಮಾರ್ಗ ಫೌಂಡೇಶನ್ ಆಯೋಜಿಸಿರುವ ಬೇಸಿಗೆ ಶಿಬಿರದಲ್ಲಿ ಡಾ.ಹುಲಿಕಲ್ ನಟರಾಜು ಪವಾಡ ಬಯಲು ಕುರಿತು ಜಾಗೃತಿ ಮೂಡಿಸಿದರು. ಎಸ್.ಬಸವರಾಜು ಇದ್ದಾರೆ.

ಮೂಢನಂಬಿಕೆಗಳು ಮಾನವೀಯತೆಯ ಮೇಲೆ ಹಿಡಿತ ಸಾಧಿಸುವ ಉದ್ವಿಗ್ನತೆ ಮತ್ತು ಆತಂಕಗಳ ಅಭಿವ್ಯಕ್ತಿಗಳಾಗಿವೆ. ಅದು ಹುಟ್ಟಿನಿಂದ ಸಾವಿನವರೆಗೆ ಜೀವನದ ಕತ್ತಲೆಯಲ್ಲಿ ಹೋರಾಡುತ್ತ ಶೈಕ್ಷಣಿಕ ಸ್ಥಾನಮಾನ ಮತ್ತು ಸಂಪತ್ತನ್ನು ಲೆಕ್ಕಿಸದೆ ಜನರನ್ನು ಕಾಡುತ್ತದೆ. ಈ ನಿಟ್ಟಿನಲ್ಲಿ ಮಕ್ಕಳು ಎಚ್ಚೆತ್ತುಕೊಳ್ಳಬೇಕು. ವೈಜ್ಞಾನಿಕ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಬಸವಮಾರ್ಗ ಫೌಂಡೇಶನ್ ಅಧ್ಯಕ್ಷ ಎಸ್.ಬಸವರಾಜು ಮಾತನಾಡಿ, ಮಕ್ಕಳಿಗೆ ಮೌಢ್ಯತೆ ಮನೆಯಿಂದಲೇ ಪ್ರಾರಂಭವಾಗುತ್ತದೆ. ಪರಿಣಾಮ ದೆವ್ವ, ಭೂತ, ಮಾಟ, ಮಂತ್ರಗಳು ಮಕ್ಕಳನ್ನು ಅಂಧಕಾರವನ್ನು ಹೆಚ್ಚಿಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ಬೇಸಿಗೆ ಶಿಬಿರದ ಮಕ್ಕಳಿಗೆ ವೈಜ್ಞಾನಿಕ ಪ್ರಜ್ಞೆ ಮೂಡಿಸುವ ಸಲುವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇಂದಿನ ಈ ಕಾರ್ಯಕ್ರಮದಿಂದ ಮಕ್ಕಳಲ್ಲಿ ಅರಿವು ಮೂಡಿಸಿದೆ ಎಂದರು.

ಡಾ.ಅಂಬೇಡ್ಕರ್ ಜಯಂತಿ


ಮೈಸೂರಿನ ಬೆಳವಾಡಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಈ ವೇಳೆ ಯುವ ಮುಖಂಡರಾದ ನಿತಿನ್ ಪುಟ್ಟಸ್ವಾಮಿ, ಗೌತಮ್ ಹೇಮಂತ್, ಗಂಗಾಧರ್, ವಿನೋದ್ ಕಿರಣ್, ಕಾರ್ತಿಕ್ ಮತ್ತಿತರರಿದ್ದರು.

ಎನ್.ದರ್ಶಿನಿಗೌಡಗೆ ಉನ್ನತ ಶ್ರೇಣಿ



ಮೈಸೂರು,ಏ.26(ಪಿಎಂ)– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಭಾರತೀಯ ವಿದ್ಯಾ ಭವನದ (ಬಿವಿಬಿ) ಶಾಲೆಯ ವಿದ್ಯಾರ್ಥಿನಿ ಎನ್.ದರ್ಶಿನಿಗೌಡ 625ಕ್ಕೆ 591 (ಶೇ.94) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ಉತೀರ್ಣರಾಗಿದ್ದಾರೆ. ಇವರು ಪಡುವಾರಹಳ್ಳಿಯ ನಾರಾಯಣ ಮತ್ತು ಮಂಜುಳಾ ದಂಪತಿ ಪುತ್ರಿ.

ಗುಣಶ್ರೀಗೆ 598 ಅಂಕ



ಮೈಸೂರು, ಏ.26– ಮೈಸೂರಿನ ಬೃಂದಾವನ್ ಎಕ್ಸ್‌ಟೆಂಷನ್‌ನಲ್ಲಿರುವ ರೋಟರಿ ಬೃಂದಾವನ್ ಶಾಲೆ ವಿದ್ಯಾರ್ಥಿನಿ ಎನ್.ಗುಣಶ್ರೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 598 ಅಂಕ ಗಳಿಸಿದ್ದಾಳೆ.

ಕನ್ನಡದಲ್ಲಿ 124, ಇಂಗ್ಲಿಷ್ 94, ಹಿಂದಿ 97, ಗಣಿತ 95, ವಿಜ್ಞಾನ 93, ಸಮಾಜ ವಿಜ್ಞಾನ 95 ಅಂಕ ಪಡೆದಿದ್ದಾಳೆ. ಈಕೆ ಸಮಾಜ ಕಾರ್ಯಕರ್ತ ಬಿ.ಎನ್.ನಾಗೇಂದ್ರ ಹಾಗೂ ಎಸ್.ಶಾಂತಕುಮಾರಿ ದಂಪತಿ ಪುತ್ರಿ

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.26– ಮೈಸೂರು ನಗರದ ರಾಘವೇಂದ್ರ ನಗರದಲ್ಲಿರುವ ಭಾಗ್ಯ ಜ್ಯೋತಿ ಎಂಬ ಖಾಸಗಿ ಪ್ರೌಢ ಶಾಲೆ ವಿದ್ಯಾರ್ಥಿನಿ ವಿ.ಸೌಜನ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 597 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ವೆಂಕಟೇಶ್ ಮತ್ತು ಲಕ್ಷ್ಮಿ ದಂಪತಿ ಪುತ್ರಿ

ಕಾರಿಗೆ ಆಂಬ್ಯುಲೆನ್ಸ್ ಡಿಕ್ಕಿ ; ಕಾರಿನಲ್ಲಿದ್ದ ಮಹಿಳೆ ಸೇರಿ ಹಲವರಿಗೆ ಗಾಯ

ಮೈಸೂರು,ಏ.26(ಪಿಎಂ)– ಕಾರಿಗೆ ಆಂಬ್ಯುಲೆನ್ಸ್ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಮಹಿಳೆಯ ಎಡ ಭುಜಕ್ಕೆ ಪೆಟ್ಟು ಬಿದ್ದು ಮೂಳೆ ಮುರಿದಿದ್ದು, ಅವರ ಜೊತೆಯಲ್ಲಿದ್ದ ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ವೃತ್ತಿಯಲ್ಲಿ ಇಂಜಿನಿಯರ್ ಆದ ಶ್ರೀರಂಗಪಟ್ಟಣದ ಧಾತ್ರಿನಗರದ ನಿವಾಸಿ ಸಿ.ಜಿ.ಅನನ್ಯಾ (26) ಮೂಳೆ ಮುರಿತದಿಂದ ಗಾಯಗೊಂಡವರು. ನಗರದ ಕೆಆರ್‌ಎಸ್ ರಸ್ತೆಯ ಬಿ.ಸಿ.ಲಿಂಗಯ್ಯ ವೃತ್ತದ ಬಳಿ ಶುಕ್ರವಾರ ಸಂಜೆ ಈ ಘಟನೆ ನಡೆದಿದೆ.

ಬನ್ನಿಮಂಟಪದ ನಮ್ಮ ಸಂಬಂಧಿಕರ ಮನೆಯಿಂದ ನಾನು ಮತ್ತು ನನ್ನ ಅಣ್ಣ ಅಭಿನವ್ ಹಾಗೂ ನಮ್ಮ ಸಂಬಂಧಿಕರು ನಮ್ಮ ಕಾರಿನಲ್ಲಿ (ಕೆಎ–09, ಎಂಸಿ–9534) ಬರುವಾಗ ಆಂಬ್ಯುಲೆನ್ಸ್ (ಕೆಎ–53, ಎ–2206) ಚಾಲಕ, ಅಜಾಗರೂಕತೆಯಿಂದ ಚಾಲನೆ ಮಾಡಿ ಈ ಅಪಘಾತ ಮಾಡಿದ್ದಾರೆ ಎಂದು ಅನನ್ಯಾ ನೀಡಿದ ದೂರಿನನ್ವಯ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನನ್ನ ಅಣ್ಣ ಅಭಿನವ್ ಕಾರು ಚಾಲನೆ ಮಾಡುತ್ತಿದ್ದು, ನಗರದಿಂದ ಬಿಸಿ ಲಿಂಗಯ್ಯ ವೃತ್ತಕ್ಕೆ ಬಂದಾಗ ಕೆಆರ್‌ಎಸ್ ಮುಖ್ಯ ರಸ್ತೆಯಲ್ಲಿ ಆಕಾಶವಾಣಿ ವೃತ್ತದ ಕಡೆಯಿಂದ ಬಂದ ಆಂಬ್ಯುಲೆನ್ಸ್ ನಮ್ಮ ಕಾರಿಗೆ ಡಿಕ್ಕಿ ಹೊಡೆಯಿತು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ವಕೀಲಿ ವೃತ್ತಿ ಉದ್ಯೋಗ ಮಾತ್ರವಲ್ಲ, ಸಮುದಾಯದ ಹೊಣೆಗಾರಿಕೆಯೂ ಹೌದು

ಹೈಕೋರ್ಟ್ ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅಭಿಮತ



23ನೇ ಸುರಾನ & ಸುರಾನ ಜೆಎಸ್‌ಎಸ್ ಕಾರ್ಪೊರೇಟ್ ಲಾ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ವಿಜೇತ ತಂಡದೊಂದಿಗೆ ಗಣ್ಯರು

ಮೈಸೂರು,ಏ.26(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ವಕೀಲಿ ವೃತ್ತಿಯೂ ಗಮನಾರ್ಹವಾಗಿ ರೂಪಾಂತರಗೊಂಡಿದೆ. ಒಂದು ಕಾಲಕ್ಕೆ ಯುವಕರಿಗೆ ಬೇರೆ ಕ್ಷೇತ್ರದಲ್ಲಿ ಆಯ್ಕೆ ಇಲ್ಲದಿದ್ದಾಗ ಮಾತ್ರ ವಕೀಲಿ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇದೀಗ ಪರಿಸ್ಥಿತಿ, ವಾತಾವರಣ ಬದಲಾಗಿದೆ ಎಂದು ತಿಳಿಸಿದ ಹೈಕೋರ್ಟ್ ನ್ಯಾಯಮೂರ್ತಿ ಕೆ.ವಿ.ಅರವಿಂದ್, ವಕೀಲ ವೃತ್ತಿ ಉದ್ಯೋಗ ಮಾತ್ರವಲ್ಲ. ಸಮುದಾಯದ ಹೊಣೆಗಾರಿಕೆಯೂ ಹೌದು ಎಂದರು.

ಮೈಸೂರು ಕುವೆಂಪುನಗರ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಅಂತರ ರಾಷ್ಟ್ರೀಯ ವಕೀಲ ಸುರಾನ ಅಂಡ್ ಸುರಾನ ಅಂತರರಾಷ್ಟ್ರೀಯ ಅಟಾರ್ನಿಸ್ ಹಾಗೂ ಜೆಎಸ್‌ಎಸ್ ಕಾನೂನು ಕಾಲೇಜು ಸಹಯೋಗದೊಂದಿಗೆ ಏರ್ಪಡಿಸಿದ್ದ 23ನೇ ಕಾರ್ಪೊರೇಟ್ ಲಾ ಮೂಟ್ ಕೋರ್ಟ್ ಸ್ಪರ್ಧಾ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ಕಕ್ಷಿದಾರರು ಕೇವಲ ಸಮಸ್ಯೆಯೊಂದಿಗೆ ಪರಿಹಾರಕ್ಕಾಗಿ ವಕೀಲರನ್ನು ಸಂಪರ್ಕಿಸುತ್ತಿದ್ದರು. ಈಗ ತಂತ್ರಜ್ಞಾನ, ಕಾನೂನು ಜಾಗೃತಿ ಮತ್ತು ಮಾಹಿತಿ ಲಭ್ಯತೆಯ ಹೆಚ್ಚಳದಿಂದ ಕಕ್ಷಿದಾರರು ಸಮಸ್ಯೆ ಹಾಗೂ ಮುಂದಿನ ಪರಿಹಾರಗಳೊಂದಿಗೆ ಬರುತ್ತಾರೆ. ಇದು ವಕೀಲರಿಗೆ ಪ್ರಮುಖ ಅಂಶಗಳಲ್ಲೊಂದು ಎಂದರು.

ಪ್ರಸ್ತುತ ಸಮಾಜದಲ್ಲಿ ವಕೀಲಿ ವೃತ್ತಿಯನ್ನು ಉನ್ನತ ವೃತ್ತಿ ಎಂದು ಭಾವಿಸಬಹುದಾಗಿದೆ. ಇದು ಕೇವಲ ಉದ್ಯೋಗ ಮಾತ್ರವಲ್ಲ. ಸಮುದಾಯದ ಹೊಣೆಗಾರಿಕೆಯೂ ಹೌದು. ವಕೀಲರು ಸಮಾಜದಲ್ಲಿ ದನಿ ಇಲ್ಲದವರ ಧ್ವನಿಯಾಗಬೇಕು. ಸಂವಿಧಾನಾತ್ಮಕ ಹಾಗೂ ಕಾನೂನು ಹಕ್ಕುಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಹಾಗಾಗಿ ಕಕ್ಷಿದಾರರ ಹಿತಾಸಕ್ತಿಯನ್ನು ಕಾಪಾಡಬೇಕು ಎಂದು ಯುವ ವಕೀಲರಿಗೆ ಕಿವಿಮಾತು ಹೇಳಿದರು.

ಬೆಂಗಳೂರಿನ ಹಿರಿಯ ವಕೀಲ ಟಿ.ಸೂರ್ಯ ನಾರಾಯಣ, ಚೆನ್ನೈನ ಸುರಾನ ಮತ್ತು ಸುರಾನ ಅಂತರಾಷ್ಟ್ರೀಯ ಅಟಾರ್ನಿಸ್ ಸಂಸ್ಥೆಯ ಪ್ರೀತಂ ಸುರಾನಾ, ಸಿಜಿಎಸ್‌ಟಿ ಉಪ ಆಯುಕ್ತೆ ಎನ್.ಮಂಜುಳಾ, ಜೆಎಸ್.ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್.ವಾಣಿಶ್ರೀ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್ ಹಾಜರಿದ್ದರು.

ಜೆಎಸ್‌ಎಸ್ ಕಾರ್ಪೊರೇಟ್ ಲಾ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ

ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನಡೆದ 2025–26ನೇ ಸಾಲಿನ 23ನೇ ಸುರಾನ & ಸುರಾನ ಜೆಎಸ್‌ಎಸ್ ಕಾರ್ಪೊರೇಟ್ ಲಾ ಮೂಟ್ ಕೋರ್ಟ್ ಸ್ಪರ್ಧೆ ನಡೆಯಿತು. ಕಾನೂನು ವಿದ್ಯಾರ್ಥಿಗಳಲ್ಲಿ ವಾದ ಕೌಶಲ್ಯ, ಸಂಶೋಧನಾ ಸಾಮರ್ಥ್ಯ ಹಾಗೂ ನ್ಯಾಯಾಂಗ ಅರಿವು ಹೆಚ್ಚಿಸುವ ಉದ್ದೇಶದಿಂದ ಆಯೋಜಿಸಲಾದ ಈ ರಾಷ್ಟ್ರಮಟ್ಟದ ಸ್ಪರ್ಧೆಗೆ ವಿವಿಧ ವಿಶ್ವವಿದ್ಯಾಲಯಗಳ ತಂಡಗಳು ಭಾಗವಹಿಸಿದ್ದವು.

ಸ್ಪರ್ಧೆಯಲ್ಲಿ ತಂಜಾವೂರಿನ ಸಾಸ್ತ್ರಾ ಡೀಮ್ಡ್ ವಿಶ್ವವಿದ್ಯಾಲಯದ ಕಾನೂನು ಶಾಲೆಯ ತಂಡ ಪ್ರಥಮ ಸ್ಥಾನ ಪಡೆದು 30 ಸಾವಿರ ರೂ. ನಗದು ಬಹುಮಾನವನ್ನು ತನ್ನದಾಗಿಸಿಕೊಂಡಿತು. ಲಕ್ನೋದ ಡಾ. ರಾಮ ಮನೋಹರ್ ಲೋಹಿಯಾ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ತಂಡ ದ್ವಿತೀಯ ಸ್ಥಾನ ಪಡೆದು 15 ಸಾವಿರ ರೂ. ಬಹುಮಾನವನ್ನು ಗಳಿಸಿತು.


ಉತ್ತಮ ವಕ್ತಾರ (ಬೆಸ್ಟ್ ಸ್ಟೂಡೆಂಟ್ ಅಡ್ವೋಕೇಟ್) ಪ್ರಶಸ್ತಿಯನ್ನು ಸಾಗರಿಕಾ ನಾಯರ್ ರೂ.10, ಸಾವಿರ ರೂ. ಬಹುಮಾನ ಸಮೇತ ಪಡೆದರು. ದ್ವಿತೀಯ ಉತ್ತಮ ವಕ್ತಾರ ಪ್ರಶಸ್ತಿಯನ್ನು ನಿಧಿರಾವ್ ಅವರಿಗೆ ದೊರೆಯಿತು. ಅಂತಿಮ ಸುತ್ತಿನ ಅತ್ಯುತ್ತಮ ವಕ್ತಾರ ಪ್ರಶಸ್ತಿಯನ್ನು ಅಕ್ಷಿತ್ ಪಡೆದರು. ಅತ್ಯುತ್ತಮ ಮೆಮೋರಿಯಲ್ ವಿಭಾಗದಲ್ಲಿ ಕಾವ್ಯಾ ಚೌಧರಿ ಹಾಗೂ ತಂಡಕ್ಕೆ 10 ಸಾವಿರ ರೂ. ಬಹುಮಾನ ದೊರೆಯಿತು.

ಇದೇ ವೇಳೆ ಬಿಎಂಎಸ್ ಕಾನೂನು ಕಾಲೇಜಿನ ಆಶಿಕಾ ಎಂ ಅವರಿಗೆ 'ಸ್ಪಿರಿಟ್ ಆಫ್ ಸುರಾನ್'ಪ್ರಶಸ್ತಿ ಪ್ರದಾನ ಮಾಡಲಾಯಿತು. ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸಿದ ಜೆಎಸ್‌ಎಸ್ ಕಾನೂನು ಕಾಲೇಜಿಗೆ ಸುರಾನ & ಸುರಾನ ಸಂಸ್ಥೆಯಿಂದ ವಿಶೇಷ ಅಭಿನಂದನಾ ಪ್ರಮಾಣಪತ್ರ ನೀಡಲಾಯಿತು.

23ನೇ ಸುರಾನ ಮತ್ತು ಸುರಾನ ಹಾಗೂ ಜೆಎಸ್‌ಎಸ್ ಕಾನೂನು ಕಾಲೇಜು ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾರ್ಪೊರೇಟ್ ಲಾ ಮೂಟ್ ಕೋರ್ಟ್ ಸ್ಪರ್ಧೆಗೆ ಶುಕ್ರವಾರ ಹೈಕೋರ್ಟ್ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಚಾಲನೆ ನೀಡಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್ ಮಠ, ಹಿರಿಯ ವಕೀಲ ಪ್ರೀತಮ್ ಸುರಾನ ಸೇರಿದಂತೆ ಇತರರಿದ್ದರು.

ಸಾವಿರ ದಿನಗಳಲ್ಲಿ ಮೈಸೂರು ತಂಬಾಕು ಮುಕ್ತ ಗುರಿ

ಇದಕ್ಕೆ ಕಾನೂನು ಜಾರಿ, ಸಾರ್ವಜನಿಕರ ಸಹಭಾಗಿತ್ವ, ಆರೋಗ್ಯ ಯೋಜನೆಯಲ್ಲಿ ಸಮನ್ವಯ ಅಗತ್ಯ ; ಭಾರತ್ ಹಾಸ್ಪಿಟಲ್ ಅಧ್ಯಕ್ಷ ಡಾ.ಬಿ.ಎಸ್.ಅಜಯ್ ಕುಮಾರ್ ಅಭಿಮತ



ಭಾರತ್ ಹಾಸ್ಪಿಟಲ್‌ನಲ್ಲಿ ಶನಿವಾರ ತಂಬಾಕು ನಿಯಂತ್ರಣ ಸಂಬಂಧ ವಿಚಾರಗೋಷ್ಠಿ ನಡೆಯಿತು.

ಮೈಸೂರು,ಏ.26(ಪಿಎಂ)– ಮುಂದಿನ ಸಾವಿರ ದಿನಗಳಲ್ಲಿ ಮೈಸೂರನ್ನು ತಂಬಾಕು ಮುಕ್ತ ನಗರವನ್ನಾಗಿ ರೂಪಿಸುವ ಮಹತ್ವಾಕಾಂಕ್ಷೆಯ ಗುರಿ ಹೊಂದಿದ್ದು, ಇದಕ್ಕೆ ಕಟ್ಟುನಿಟ್ಟಿನ ಕಾನೂನು ಜಾರಿ, ಸಾರ್ವಜನಿಕ ಭಾಗವಹಿಸುವಿಕೆ ಮತ್ತು ದೀರ್ಘಕಾಲೀನ ಆರೋಗ್ಯ ಯೋಜನೆಗಳ ಸಮನ್ವಯ ಅಗತ್ಯವೆಂದು ಖ್ಯಾತ ಕ್ಯಾನ್ಸರ್ ತಜ್ಞರೂ ಆದ ಭಾರತ್ ಹಾಸ್ಪಿಟಲ್ ಅಂಡ್ ಇನ್ಸಿಟಿಟ್ಯೂಟ್ ಆಫ್ ಆಂಕಾಲಜಿ (ಬಿಎಚ್‌ಐಓ) ಸಂಸ್ಥಾಪಕ ಅಧ್ಯಕ್ಷ ಡಾ.ಬಿ.ಎಸ್.ಅಜಯ್ ಕುಮಾರ್ ಹೇಳಿದರು.

ಹೆಬ್ಬಾಳದ ಭಾರತ್ ಹಾಸ್ಪಿಟಲ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಹೊಗೆ ಮುಕ್ತ ಮೈಸೂರು; ಆರೋಗ್ಯಕರ ಮೈಸೂರು' ಕುರಿತ ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾನೂನುಗಳು ಕೇವಲ ಕಾಗದದಲ್ಲೇ ಉಳಿಯದೇ, ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕು ಎಂದು ತಿಳಿಸಿದರು.

ತಂಬಾಕು ಬಳಕೆ ದೇಶದ ಅತ್ಯಂತ ಗಂಭೀರ ಸಾರ್ವಜನಿಕ ಆರೋಗ್ಯ ಸವಾಲು. ತಂಬಾಕು ನಿರ್ಮೂಲನೆಯಿಂದ ಶೇ.40ರಷ್ಟು ಅನಾರೋಗ್ಯ ಸಮಸ್ಯೆಗಳನ್ನು ತಡೆಯಲು ಸಾಧ್ಯವಿದೆ. ಭಾರತದಲ್ಲಿ ವರ್ಷಕ್ಕೆ ಸುಮಾರು 23 ಲಕ್ಷ ಜನ ಮತ್ತು ಜಾಗತಿಕವಾಗಿ 80 ಲಕ್ಷಕ್ಕೂ ಹೆಚ್ಚು ಜನ ತಂಬಾಕು ಸಂಬಂಧಿತ ಕಾರಣಗಳಿಂದ ಸಾವನ್ನಪ್ಪುತ್ತಿದ್ದಾರೆ. ಪ್ರತಿ 9 ಮಂದಿ ಪೈಕಿ ಒಬ್ಬರಿಗೆ ಕ್ಯಾನ್ಸರ್ ಕಾಣಿಸಿಕೊಳ್ಳಲು ತಂಬಾಕು ಬಳಕೆಯೇ ಪ್ರಮುಖ ಕಾರಣ. ಜೊತೆಗೆ, ಪರೋಕ್ಷ ಧೂಮಪಾನವು ಭಾರತದಲ್ಲಿ ಮೂರನೇ ಭಾಗದಷ್ಟು ವಯಸ್ಕರನ್ನು ಪ್ರಭಾವಿತಗೊಳಿಸುತ್ತಿದ್ದು, ಜಾಗತಿಕವಾಗಿ 12 ಲಕ್ಷ ಸಾವುಗಳಿಗೆ ಕಾರಣವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪೋಲಿಯೋ ನಿರ್ಮೂಲನೆಯಂತೆಯೇ ತಂಬಾಕು ನಿರ್ಮೂಲನೆ ಸಾಧ್ಯ. ನಿಯಮಿತ ತಪಾಸಣೆ, ಕಠಿಣ ದಂಡ ಹಾಗೂ ಸಾರ್ವಜನಿಕ ದೂರು ವ್ಯವಸ್ಥೆಗಳನ್ನು ಬಲಪಡಿಸುವ ಅಗತ್ಯವಿದೆ. ವ್ಯಾಪಾರ ಪರವಾನಗಿಗಳನ್ನು ಧೂಮಪಾನ ನಿಯಮ ಪಾಲನೆಗೆ ಕಡ್ಡಾಯವಾಗಿ ಜೋಡಿಸುವ ಹೊಸ ಪ್ರಸ್ತಾಪವನ್ನೂ ಮುಂದಿಟ್ಟರಲ್ಲದೆ, ನೀತಿಗಳ ಕೊರತೆಯಿಲ್ಲ, ಅವುಗಳ ಜಾರಿಯಲ್ಲಿಯೇ ಸಮಸ್ಯೆ ಇದೆ ಎಂದರು.

ತಂಬಾಕು ನಿಯಂತ್ರಣದ ಜೊತೆಗೆ ಸಮಗ್ರ ನಗರ ಆರೋಗ್ಯ ದೃಷ್ಟಿಕೋನ ಅಗತ್ಯ. ಶಾಲಾ ಮಟ್ಟದಲ್ಲಿ ಆರೋಗ್ಯ ಶಿಕ್ಷಣ ನೀಡಿ ಮಕ್ಕಳ ಮೂಲಕ ಕುಟುಂಬಗಳಲ್ಲಿ ಬದಲಾವಣೆ ತರಬಹುದು. ಈ ನಿಟ್ಟಿನಲ್ಲಿ ಬಿಎಚ್‌ಐಓ ಸಂಸ್ಥೆಯ ಬದ್ಧತೆ ಪುನರುಚ್ಚರಿಸಿ, ಕೊಳೆಗೇರಿ ಪ್ರದೇಶಗಳಲ್ಲಿ ಕ್ಯಾನ್ಸರ್ ತಪಾಸಣಾ ಶಿಬಿರಗಳು, ವಾಯು ಗುಣಮಟ್ಟ ಸುಧಾರಣೆ ಮತ್ತು ಮೈಸೂರಿನ ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಐದು ವರ್ಷದ ಸಮಗ್ರ ಮಾರ್ಗಸೂಚಿ ರೂಪಿಸುವುದಾಗಿ ಘೋಷಿಸಿದರು.

ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ರೈತ ಮುಖಂಡರಾದ ರಾಮೇಗೌಡ, ಮಂಜು ಕಿರಣ್, ಕ್ಯಾನ್ಸರ್‌ನಿಂದ ಚೇತರಿಸಿಕೊಂಡ ಮಹದೇವ್, ನಾಗರಾಜ್, ಜಿಲ್ಲಾ ತಂಬಾಕು ನಿಯಂತ್ರಣಾಧಿಕಾರಿ ಡಾ.ಎಸ್.ಗೋಪಿನಾಥ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ಹಿರಿಯ ಪತ್ರಕರ್ತರಾದ ಲೈಕ್ ಖಾನ್, ಸಿ.ಜೆ.ರಾಜೀವ್ ಸಿ.ಜೆ. ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಹಿರಿಯ ವಿಕಿರಣ ಕ್ಯಾನ್ಸರ್ ತಜ್ಞ ಡಾ.ವಿನಯ್ ಕುಮಾರ್ ಮುತ್ತಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿಎಚ್‌ಐಓ ಸಿಒಒ ಗೌತಮ್ ಧಮೇಲಾ, ಅಂತರ್ಧ್ವನಿ ಸಂಸ್ಥೆಯ ರಾಹುಲ್ ನಂದನ್, ಎಸ್.ಸೀತಾಲಕ್ಷ್ಮಿ, ಐಎಚ್‌ಡಿಯುಎ ಕಾರ್ಯಕ್ರಮ ಮುಖ್ಯಸ್ಥ ಎನ್.ಮಧು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ತಂದೆ : ಇಲ್ಲಿಯವರೆಗೂ ಒಮ್ಮೆಯಾದರೂ ನೀನು ನನ್ನ ತಲೆ ಎತ್ತಿ ನೋಡುವ ಹಾಗೆ ಮಾಡಿದ್ದೀಯೇನೋ ಮೂರ್ಖ?

ಮಗ : ಮೊನ್ನೆ ತಾನೇ ನೀವು ಮಲಗಿದ್ದಾಗ ನಿಮ್ ತಲೆ ಕೆಳಗಡೆ ದಿಂಬು ಇಟ್ಟು ತಲೆ ಎತ್ತುವಂತೆ ಮಾಡಿದ್ನಲ್ಲ ಅಪ್ಪ.

ಮೈಸೂರು ಮಿತ್ರ

ಸೋಮವಾರ, ಏಪ್ರಿಲ್ 27, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೆಮ್ಮದಿ ಹುಡುಕಿಕೊಳ್ಳಿ, ಮಿಕ್ಕಿದ್ದೆಲ್ಲ ಸಂತೇಲಿ ಸಿಗುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಖಾಲಿ ಕೈಯಲ್ಲಿ ಇರುವುದಕ್ಕಿಂತ ಹಿತ್ತಾಳೆ ಕಡಗ ಲೇಸು

ನಿಮ್ಮ ಪತ್ರಗಳು

ಮಹಿಳಾ ಮೀಸಲು ಮಸೂದೆ ಅಂಗೀಕಾರವಾಗಲಿ!

ಮಾನ್ಯರೆ,

ಇತ್ತೀಚೆಗೆ ಲೋಕಸಭೆಯಲ್ಲಿ ಮಂಡಿಸಲಾಗಿದ್ದ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಸೋಲುಂಟಾಗಿರುವ ಬಗ್ಗೆ ನಾನಾ ರೀತಿಯ ವ್ಯಾಖ್ಯಾನಗಳು ಕೇಳಿ ಬರುತ್ತಿವೆ. ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟವನ್ನು ಮಹಿಳಾ ವಿರೋಧಿ ಎಂದು ಬಿಂಬಿಸುತ್ತಿದ್ದರೆ, ಕಾಂಗ್ರೆಸ್ ಕೂಡ ಬಿಜೆಪಿ ಹಾಗೂ ಮಿತ್ರ ಪಕ್ಷಗಳನ್ನು ತನ್ನದೇ ಆದ ರೀತಿಯಲ್ಲಿ ಟೀಕಿಸುತ್ತಿದೆ.

ಈ ಸಂವಿಧಾನ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಪಡೆಯಲು ಸಂಸತ್ತಿನಲ್ಲಿ 2/3ರಷ್ಟು ಬಹುಮತ ಬೇಕಾಗಿತ್ತು. ಆದರೆ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಬಳಿ ಈ ಮ್ಯಾಜಿಕ್ ಸಂಖ್ಯೆ ಇರಲಿಲ್ಲ. ಆದರೂ ಮೊಂಡು ಧೈರ್ಯದಿಂದ ಸಂಸತ್ತಿನಲ್ಲಿ ವಿಧೇಯಕವನ್ನು ಮಂಡಿಸಿತ್ತು. ವಿಧೇಯಕ ಮಂಡಿಸುವುದಕ್ಕಿಂತ ಮುಂಚಿತವಾಗಿ ವಿರೋಧ ಪಕ್ಷಗಳನ್ನು ಸಂಪರ್ಕಿಸಿ, ಅವುಗಳ ಮನ ಒಲಿಸಿದ್ದರೆ, ಅಥವಾ ಅವು ಸೂಚಿಸಬಹುದಾಗಿದ್ದ ತಿದ್ದುಪಡಿಗಳನ್ನು ಮಸೂದೆಯಲ್ಲಿ ಅಳವಡಿಸುವ ಪ್ರಯತ್ನ ಮಾಡಿದ್ದರೆ, ಸರ್ಕಾರಕ್ಕೆ ಈ ರೀತಿಯ ಮುಖಭಂಗವಾಗುತ್ತಿರಲಿಲ್ಲ.


ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಧಿಕಾರ ವಹಿಸಿಕೊಂಡ ಮೇಲೆ ಲೋಕಸಭೆಯಲ್ಲಿ ಮಸೂದೆಯೊಂದಕ್ಕೆ ಸೋಲುಂಟಾಗಿರುವುದು ಇದೇ ಪ್ರಥಮ ಎಂದು ಹೇಳಲಾಗುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯನ್ನು ದೇವೇಗೌಡರು 90ರ ದಶಕದಲ್ಲಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಪ್ರಥಮವಾಗಿ ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ಸದರಿ ಮಸೂದೆಯ ಅಂಗೀಕಾರಕ್ಕೆ ಹಲವಾರು ಬಾರಿ ಪ್ರಯತ್ನಗಳು ನಡೆದಿವೆಯಾದರೂ ಇದುವರೆಗೆ ಸದರಿ ಮಸೂದೆ ಒಂದಲ್ಲಾ ಒಂದು ರೀತಿಯಲ್ಲಿ ಅಡಚಣೆ ಉಂಟಾಗಿ ಸದರಿ ಮಸೂದೆ ಅತಂತ್ರ ಸ್ಥಿತಿಯಲ್ಲಿ ಇದೆ.

ಆಡಳಿತ ಮತ್ತು ವಿರೋಧ ಪಕ್ಷಗಳು ಇನ್ನು ಮುಂದಾದರೂ ತಮ್ಮ ಒಣ ಪ್ರತಿಷ್ಠೆಗಳನ್ನು ಮರೆತು, ಈ ಮಸೂದೆಯ ಅಂಗೀಕಾರಕ್ಕೆ ಪ್ರಯತ್ನಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಆದಷ್ಟು ಬೇಗ ಸರ್ವ ಪಕ್ಷಗಳ ಸಭೆ ಕರೆಯುವುದು ಅಗತ್ಯವಾಗಿದೆ. –ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು.

ಉರಿ ಬೇಸಿಗೆಗೆ ತಂಪು ಉಪಾಯಗಳು

ಮಾನ್ಯರೆ,

ಬೇಸಿಗೆಯ ಬಿರು ಬಿಸಿಲಿಗೆ ಬಸವಳಿದು ಬವಣೆ ಪಡುವವರಿಗೆ ತಂಪಾಗಲು ಕೆಲವು ಸರಳ ಸುಲಭ ಉಪಾಯಗಳಿವೆ;



■ ಮನೆಯ ಮಾಳಿಗೆ (ಒಂದೇ ಮಾಳಿಗೆಯ ಮನೆಗಳು) ಬಿಸಿಲಿನಿಂದ ಕಾದು ಒಳಗಿನ ಕೋಣೆಗಳ ವಾತಾವರಣವು ಸಹ ಬಿಸಿಯಾಗುತ್ತದೆ. ಮಲಗುವ ಹಾಸಿಗೆಯೂ ಬಿಸಿಯಾಗಿ ನಿದ್ರೆ ಬಾರದು. ಫ್ಯಾನ್ ಹಾಕಿದರೆ ಬಿಸಿ ಬಿಸಿ ಗಾಳಿ ಬೀಸಿ ಮೈ ಮೇಲೆ ರಾಚಿ ಮತ್ತೂ ಹಿಂಸೆ ಆಗುತ್ತದೆ. ಫ್ಯಾನ್ ಬಳಸಿದರೆ ಬಿಸಿ ಗಾಳಿ, ಬಳಸದೆ ಇದ್ದರೆ ತಡೆಯಲಾಗದ ಸೆಖೆ. ಈ ಸಂಕಟಕ್ಕೆ ಒಂದು ಪರಿಹಾರವೆಂದರೆ ಮಲಗುವ ಹಾಸಿಗೆಯ ಮೇಲೆ, ಅಥವಾ ಚಾಪೆಯ ಮೇಲೆ ಒಂದು ದಪ್ಪನಾದ ಬೆಡ್ ಶೀಟ್ (ತೆಳ್ಳಗಿನ ಬೆಡ್ ಶೀಟ್ ಆದರೆ ನಾಲ್ಕು ಪದರ ಮಡಚಿ) ಹಾಕಿ ಅದರ ಮೇಲೆ ಚೆನ್ನಾಗಿ ತಣ್ಣೀರನ್ನು ಸಿಂಪಡಿಸಿ ಬೆನ್ನು ಹಾಕಿ ಮಲಗಿದರೆ ತಂಪಾಗಿ, ಹಾಯೆನಿಸಿ ನಿದ್ರೆ ಮಾಡಬಹುದು. ಉತ್ತರ ಕರ್ನಾಟಕದ ಕೆಲವೆಡೆ ಜನರು ಈ ಉಪಾಯವನ್ನು ಅನುಸರಿಸುತ್ತಾರೆ. ಒಂದೆರಡು ಗಂಟೆಗಳ ನಂತರ ಆ ಬೆಡ್ ಶೀಟ್ ಒಣಗಿ ಮತ್ತೆ ಸೆಖೆ ಎನಿಸಿದರೆ ಅದರ ಮೇಲೆ ಮತ್ತೊಂದು ಸಲ ನೀರು ಸಿಂಪಡಿಸಿ ಮಲಗಬಹುದು.

■ ಮನೆಯ ಮೇಲಿನ ನೀರಿನ ಟ್ಯಾಂಕ್‌ಗಳು ಬಿಸಿಲಿನಿಂದ ಬಿಸಿಯಾಗುತ್ತವೆ. ಅವುಗಳ ಒಳಗಿನ ನೀರು ಸಹ ಬಿಸಿಯಾಗಿ ನಲ್ಲಿ ತಿರುಗಿಸಿದಾಗ ಬಿಸಿ ನೀರು ಬಂದು ಸ್ನಾನಕ್ಕೆ ಬಳಸಲು ಸಾಧ್ಯವಾಗುವುದಿಲ್ಲ. ಬೆಳಗಿನ ಸಮಯದಲ್ಲಿ ಬಿಸಿಲು ಏರಿ ಟ್ಯಾಂಕಿನ ನೀರು ಬಿಸಿ ಆಗುವ ಮುನ್ನ ಬೇಕಾದಷ್ಟು ನೀರನ್ನು ಬಕೆಟ್‌ಗಳಲ್ಲಿ ಸಂಗ್ರಹಿಸಿ ಇಟ್ಟುಕೊಂಡರೆ ಓವರ್ ಹೆಡ್ ಟ್ಯಾಂಕಿನ ಬಿಸಿ ನೀರಿನ ಬವಣೆ ತಪ್ಪುತ್ತದೆ.

■ ಮಧ್ಯಾಹ್ನ ಅಥವಾ ರಾತ್ರಿ ವೇಳೆಯಲ್ಲಿ ಮಲಗುವಾಗ ಒಂದು ಕರ ವಸ್ತ್ರವನ್ನು ತಣ್ಣೀರಿನಲ್ಲಿ ಅದ್ದಿ ಅದನ್ನು ಕಣ್ಣುಗಳ ಹಣೆಯ ಮೇಲೆ ಇಟ್ಟುಕೊಳ್ಳುವುದರಿಂದ ಕಣ್ಣು ತಲೆ ತಂಪಾಗಿ ಹಾಯೆನಿಸುತ್ತದೆ. ಕಣ್ಣುಗಳಿಗೆ ವಿಶ್ರಾಂತಿ ದೊರೆಯುತ್ತದೆ.

■ ಆಗಾಗ ಕೈ ಕಾಲು ಮುಖಗಳನ್ನು ತಣ್ಣೀರಿನಿಂದ ತೊಳೆಯುವುದು ದೇಹವನ್ನು ತಂಪಾಗಿಸಲು ಸರಳ ಉಪಾಯ. ಕೈಗಳನ್ನು ತೋಳಿನಿಂದ ಹಿಡಿದು ಹಸ್ತದವರೆಗೆ, ಕಾಲುಗಳನ್ನು ಮಂಡಿಯಿಂದ ಪಾದದ ತನಕ ತಣ್ಣೀರಿನಲ್ಲಿ ತೊಳೆದರೆ ದೇಹದ ಉಷ್ಣತೆ ತಗ್ಗುತ್ತದೆ.

■ ಸಂಜೆಯ ಸಮಯ ಮತ್ತೊಮ್ಮೆ ಸ್ನಾನ ಮಾಡಿದರೆ ತ್ವಚೆ ತಂಪಾಗುವುದು. ಮೇಲಿನ ಉಪಾಯಗಳನ್ನು ಅನುಸರಿಸಿ ನೋಡಿ.

–ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು.

ಕನ್ನಡ ಭಾಷಾ ನಿರ್ಲಕ್ಷ್ಯ ಸಲ್ಲ

ಮಾನ್ಯರೆ,

ಇತ್ತೀಚಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಸುಮಾರು 19,000 ವಿದ್ಯಾರ್ಥಿಗಳು ಕನ್ನಡದಲ್ಲೇ ಅನುತ್ತೀರ್ಣರಾಗಿರುವುದು ರಾಜ್ಯ ಶಿಕ್ಷಣ ಇಲಾಖೆ ದಿವ್ಯ ನಿರ್ಲಕ್ಷ್ಯ ತೋರಿಸುತ್ತದೆ. ನಮ್ಮ ರಾಜ್ಯದ ಮಾತೃಭಾಷೆ ಕನ್ನಡದ ವಿಷಯದಲ್ಲೇ ಇಷ್ಟೊಂದು ವಿದ್ಯಾರ್ಥಿಗಳು ವಿಫಲರಾಗಿರುವುದು ನಿಜಕ್ಕೂ ಕಳವಳಕಾರಿ ಸಂಗತಿ. ಕನ್ನಡ ಮಾಧ್ಯಮದ ಶಾಲೆಗಳನ್ನು ಮುಚ್ಚುವುದು, ಕಡ್ಡಾಯ ಶಿಕ್ಷಣದ ಹಕ್ಕಿನ ಅಡಿಯಲ್ಲಿ ಖಾಸಗಿ ಶಾಲೆಗಳಲ್ಲಿ ಕನ್ನಡವನ್ನು ಪ್ರಮುಖ ವಿಷಯವಾಗಿ ಅನುಷ್ಠಾನಗೊಳಿಸದಿರುವುದು, ಕನ್ನಡ ಶಿಕ್ಷಕರ ಕೊರತೆಯು ಈ ಸಮಸ್ಯೆಗೆ ಕಾರಣವಾಗಿದೆ.

ಇದು ಕೇವಲ ಕಳವಳಕಾರಿ ಸಂಗತಿಯಲ್ಲ. ಬದಲಾಗಿ ನಮ್ಮ ರಾಜ್ಯ ಸರ್ಕಾರದ ಮೇಲೆ ಇರುವ ಅಪಾರ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ನಮ್ಮ ರಾಜ್ಯದ ಮಾತೃಭಾಷೆಯನ್ನು ರಕ್ಷಿಸಲು ಸರ್ಕಾರ ಯಾವುದೇ ಮಹತ್ವದ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ಕನ್ನಡದ ವಿಷಯದಲ್ಲಿ ಇರುವ ಈ ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ಹುಡುಕದಿದ್ದರೆ ಕನ್ನಡದ ಭವಿಷ್ಯ ಅನಿಶ್ಚಿತವಾಗಬಹುದು.

–ಡಾ.ವಿಜಯಕುಮಾರ ಎಚ್.ಕೆ.



ಜಿ. ಎಲ್. ತ್ರಿಪುರಾಂತಕ

ಮೊ: 96866–77284

ಅರಿವು

ಭಕ್ತಿ ಶಕ್ತಿಯಾಗಲಿ; ಕುಯುಕ್ತಿಗೆ ಬಲಿಯಾಗದಿರಲಿ...!

ನಂಬಿಕೆಯೇ ದೇವರು. ಭಕ್ತಿ ಎಂಬುದು ಭಗವಂತನನ್ನು ಕಾಣುವ ಒಂದು ಮಾಧ್ಯಮ. ಭಕ್ತಿಯು ಮನುಷ್ಯನಿಗೆ ಅಗಾಧ ಶಕ್ತಿಯನ್ನು ನೀಡಿ, ಇಚ್ಛಾಶಕ್ತಿಯನ್ನು ವೃದ್ಧಿಸಿ ಅಸಾಮಾನ್ಯವಾದ ಸಾಧನೆಗೆ ನಾಂದಿ ಹಾಡಬಹುದು. ಹಾಗೆಯೇ ಕೇವಲ ಭಕ್ತಿಯನ್ನೇ ನಂಬಿ ದೇವರೇ ಎಲ್ಲವನ್ನೂ ಮಾಡಿಬಿಡುತ್ತಾನೆ ಎಂಬ ಕುರುಡು ನಂಬಿಕೆ ಇದ್ದರೆ ಅದು ಒಂದು ದೊಡ್ಡ ದೌರ್ಬಲ್ಯವಾಗಿ ಬಿಡುತ್ತದೆ. ಭಕ್ತಿಯನ್ನು ಶಕ್ತಿಯಾಗಿ ಕಂಡು ಸಾಧನೆಯ ಹಾದಿಯಲ್ಲಿ ಯಶಸ್ಸನ್ನು ಗಳಿಸಿರುವವರಷ್ಟೇ ಭಕ್ತಿಯನ್ನು ಒಂದು ಗೀಳಾಗಿ ಸ್ವೀಕರಿಸಿ, ಯಾವುದೇ ಕೆಲಸಕಾರ್ಯ ಮಾಡದೇ ಕಾಲಹರಣ ಮಾಡುವ ಮಾನಸಿಕ ಖಾಯಿಲೆಯಿಂದ ನರಳುವವರು ಸಹ ಇದ್ದಾರೆ. ಕನಸೊಂದನ್ನು ನನಸು ಮಾಡಿಕೊಳ್ಳಲು ಭಕ್ತಿ ಒಂದು ಟೂಲ್ ಅಷ್ಟೇ, ಪ್ರಯತ್ನವಿಲ್ಲದೇ ಕೇವಲ ಭಕ್ತಿಯನ್ನು ನೆಚ್ಚಿಕೊಂಡು ಕುಳಿತವನು ಮೂರ್ಖನಾಗುತ್ತಾನೆ. ಭಕ್ತಿ ಎಂಬದು ಮನುಷ್ಯನನ್ನು ಯಶಸ್ಸಿನ ಶಿಖರದ ತುತ್ತತುದಿಗೆ ತಲುಪಲು ಶಕ್ತಿ ನೀಡುವಂತೆ ಪಾತಾಳ ಮುಟ್ಟುವಂತೆಯೂ ಮಾಡಿಬಿಡುತ್ತದೆ. ಹಾಗಾಗಿ ಭಕ್ತಿಯನ್ನು ಸರಿಯಾದ ರೀತಿಯಲ್ಲಿ ಪರಿಭಾವಿಸುವುದು ಅವಶ್ಯ.

ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ಅನೇಕ ರಾಜ ಮಹಾರಾಜರು ಊಹೆಗೂ ನಿಲುಕದ ದೇವಸ್ಥಾನಗಳು, ಅರಮನೆಗಳು, ಕೋಟೆಕೊತ್ತಲೆಗಳು, ಕೆರೆಕಟ್ಟೆಗಳನ್ನು ನಿರ್ಮಿಸಿದ್ದಾರೆ. ಅವರ ಈ ಸಾಧನೆಗಳ ಹಿಂದೆ ಭಕ್ತಿಯು ಸಮರ್ಥವಾಗಿ ಕೆಲಸ ಮಾಡಿರುತ್ತದೆ. ಕೇವಲ ಆರ್ಥಿಕ ಶಕ್ತಿ ಇದ್ದರಷ್ಟೇ ಸಂಕಲ್ಪ ಮಾಡಿದ ಕೆಲಸ ಈಡೇರುವುದಿಲ್ಲ. ಭಕ್ತಿಯ ಪರಾಕಾಷ್ಠೆಯಿಂದ, ಶಿಲ್ಪಿಗಳ ಕೈಚಳಕದಲ್ಲಿ, ಕೂಲಿಕಾರ್ಮಿಕರ ಶ್ರಮ ಹಾಗೂ ತ್ಯಾಗದಿಂದ ಕಲ್ಲಿನ ಗುಡಿಗಳು ನಿರ್ಮಾಣವಾಗಿವೆ. ದೈವಿಕ ಶಕ್ತಿಯಿದ್ದರೆ ಎಲ್ಲವೂ ಸಾಧ್ಯ ಎಂಬುದನ್ನು ನಿರೂಪಿಸಲಾಗಿದೆ.

ಅಂತಹ ಭಕ್ತಿ ಇಂದು ನಾನಾ ರೂಪವನ್ನು ತಳೆಯುತ್ತಿದೆ. ಭಕ್ತಿಯ ಹೆಸರಿನಲ್ಲಿ ಜನರಿಗೆ ಸೂಕ್ತ ಮಾರ್ಗದರ್ಶನ ಮಾಡಿ ಬದುಕಿನಲ್ಲಿ ಅಭಿವೃದ್ಧಿ ಹೊಂದಿದ್ದಾರೆ. ಹಾಗೆಯೇ ಭಕ್ತಿಯ ಹೆಸರಿನಲ್ಲಿ ಜನರಿಗೆ ಮಂಕುಬೂದಿ ಎರಚಿ ಕುಯುಕ್ತಿಯಿಂದ ಜನರ ಯುಕ್ತಿಯನ್ನು ಕಸಿದು ನಿಶ್ಯಕ್ತರನ್ನಾಗಿ ಮಾಡುವ ಅನೇಕ ಮೋಸಗಾರರು ಸಹ ಇದ್ದಾರೆ. ಭಕ್ತಿ ಎಂಬುದು ಒಂದು ನಂಬಿಕೆ. ಅಂತಹ ನಂಬಿಕೆಗೆ ದ್ರೋಹ ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಕಳ್ಳರು ವಿವಿಧ ವಿವಿಧ ವೇಷ ಧರಿಸಿ ನಮ್ಮ ನಿಮ್ಮ ನಡುವೆ ಓಡಾಡುತ್ತಲೇ ಇದ್ದಾರೆ. ಆದ್ದರಿಂದ ಭಕ್ತಿ ಎಂಬುದು ಶಕ್ತಿಯಾಗದೆ ದೌರ್ಬಲ್ಯವಾದರೆ ಅಂತಹ ಜನರನ್ನು ದುರುಪಯೋಗಪಡಿಸಿಕೊಂಡು ಹುಚ್ಚಿ ಮದುವೇಲಿ ಉಂಡವನೇ ಜಾಣ ಎಂಬ ಮಾತಿನಂತೆ ಭಕ್ತಿ ಮೇಲೆ ಅತಿಯಾದ ನಂಬಿಕೆ ಇಟ್ಟವರ ನಂಬಿಕೆಗೆ ಕೊಳ್ಳಿ ಇಟ್ಟು ತಿಂದು ತೇಗುವ ದುರುಳರು ಅನೇಕರಿದ್ದಾರೆ.

ಜ್ಯೋತಿಷ್ಯ ಶಾಸ್ತ್ರಕ್ಕೆ ವೈಜ್ಞಾನಿಕ ತಳಹದಿ ಇಲ್ಲದಿದ್ದರೂ, ಬಹುಪಾಲು ನಂಬಿಕೆಗೆ ಅರ್ಹವಾದ ಶಾಸ್ತ್ರ. ಭಕ್ತಿಯಿಂದ ಜ್ಯೋತಿಷ್ಯ ಶಾಸ್ತ್ರವನ್ನು ವಿದ್ಯಾವಂತರಷ್ಟೇ ಅಲ್ಲ ವಿಜ್ಞಾನಿಗಳು ಸಹ ಅನೇಕರು ನಂಬುತ್ತಾರೆ. ಜ್ಯೋತಿಷ್ಯ ಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನ ಮಾಡಿ ಸತ್ಯವಾದ ಸಂಗತಿಗಳನ್ನು ಜನರಿಗೆ ತಿಳಿಸುವ ಜ್ಯೋತಿಷಿಗಳು ಸಹ ಇದ್ದಾರೆ. ಆದರೆ ಜ್ಯೋತಿಷ್ಯದ ಹೆಸರಿನಲ್ಲಿ ಅನೇಕರು ಮೋಸ ಮಾಡುತ್ತಿದ್ದಾರೆ. ರಾಜಕಾರಣಿಗಳು ಅಧಿಕಾರ ಗಿಟ್ಟಿಸಲು, ಗಿಟ್ಟಿಸಿದ ಅಧಿಕಾರ ಉಳಿಸಿಕೊಳ್ಳಲು ಜ್ಯೋತಿಷಿಗಳ ಮೊರೆ ಹೋಗುತ್ತಾರೆ. ಹಾಗೆಯೇ ಸಂಪತ್ತು ಗಳಿಸಿರುವವರು ಸಂಪತ್ತು ಕರಗಿ ಹೋಗುವ ಭಯದಿಂದ ಜ್ಯೋತಿಷಿಗಳನ್ನು ಸಂಪರ್ಕಿಸಿ ಪರಿಹಾರ ಪಡೆಯುತ್ತಲೇ ಇರುತ್ತಾರೆ. ಇವರುಗಳಿಗೆ ಅನೇಕ ರೀತಿ ಪೂಜೆ, ಹೋಮ, ಹವನ ಮಾಡಿಸುವುದು ಸಹಜ.

ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳಿಗೆ ನೀವು ಗೆಲ್ಲುತ್ತೀರಿ ಎಂದು ಭವಿಷ್ಯ ನುಡಿದು ಲಕ್ಷಾಂತರ ರೂಪಾಯಿ ಕಾಣಿಕೆ ಪಡೆಯುತ್ತಾರೆ. ಗೆದ್ದರೆ ತಮ್ಮ ಜ್ಯೋತಿಷ್ಯ ನಿಜವಾಯಿತು ಎನ್ನುತ್ತಾರೆ, ಸೋತರೆ ಅದೃಷ್ಟ ಸ್ವಲ್ಪದರಲ್ಲಿ ಕೈಕೊಟ್ಟಿತು ಎನ್ನುತ್ತಾರೆ. ಸಾಮಾನ್ಯ ಜನರು ಸಹ ಡೋಂಗಿ ಜ್ಯೋತಿಷಿಗಳ ಮಾತಿಗೆ ಮರುಳಾಗಿ ತಾವು ಬೆವರು ಸುರಿಸಿ ದುಡಿದ ಹಣ, ಕಷ್ಟಪಟ್ಟು ಮಾಡಿಸಿಕೊಂಡಿದ್ದ ಚಿನ್ನದ ಆಭರಣ ಎಲ್ಲವನ್ನು ಕಳೆದುಕೊಂಡ ಉದಾಹರಣಗಳು ಇವೆ.

ಭಾರತದಲ್ಲಿ ಎಷ್ಟೇ ವಿದ್ಯಾವಂತರಾದರೂ ದೈವಶಕ್ತಿಯ ಮೇಲೆ ನಂಬಿಕೆ ಇಟ್ಟವರನ್ನು ದೌರ್ಬಲ್ಯ ಹೊಂದಿರುವವರು ಎಂದು ಕೆಲವು ಕಿಡಿಗೇಡಿಗಳು ಪರಿಗಣಿಸುತ್ತಾರೆ. ದೇವರ ಮೇಲೆ ನಂಬಿಕೆ ಎಷ್ಟೇ ಇದ್ದರೂ ಮೂಢನಂಬಿಕೆ ಹೊಂದಿರಬಾರದು. ಸ್ವಲ್ಪವಾದರೂ ವೈಚಾರಿಕ ಮನೋಭಾವ ಬೆಳೆಸಿಕೊಳ್ಳಬೇಕು. ಸಂಶೋಧನೆ ಮಾಡಿ ಪಿ.ಎಚ್.ಡಿ. ಪದವಿ ಪಡೆದಿರುವ ಅನೇಕರು ಮೂರನೇ ತರಗತಿ ಓದಿರುವ ಡೋಂಗಿ ಜ್ಯೋತಿಷಿಯ ಮಾತನ್ನು ಕುರಿಯ ರೀತಿ ಕೇಳುತ್ತಾ ತಲೆ ಆಡಿಸುತ್ತಾರೆ ಎಂದರೆ ಅದಕ್ಕಿಂತ ವಿಡಂಬನೆ ಇನ್ನೊಂದಿಲ್ಲ. ಜ್ಯೋತಿಷಿಗಳು ನಿಜವಾದ ಭವಿಷ್ಯ ತಿಳಿಸುವ ಬದಲು ಮಾತಿನ ಮೋಡಿಯಿಂದ ಬಲೆಗೆ ಬೀಳಿಸುತ್ತಾರೆ. ಮಹಿಳೆಯರನ್ನು ಹೆಚ್ಚು ಟಾರ್ಗೆಟ್ ಮಾಡುವುದು ಸಾಮಾನ್ಯವಾಗಿರುತ್ತದೆ. ಎಷ್ಟೋ ಜನ ಮಹಿಳೆಯರು ಬೆಳಗ್ಗೆ ಎದ್ದು ಟಿ.ವಿ.ಯಲ್ಲಿ ಬರುವ ಜ್ಯೋತಿಷಿಗಳ ಜ್ಯೋತಿಷ್ಯ ಕಾರ್ಯಕ್ರಮಕ್ಕೆ ಅಡಿಕ್ಟ್ ಆಗಿದ್ದಾರೆ. ಹಣ, ಅಂತಸ್ತು, ನೆಮ್ಮದಿ ಎಲ್ಲವೂ ಇದ್ದರೂ ಮತ್ತಷ್ಟಕ್ಕಾಗಿ ಆಸೆಪಟ್ಟು ಜ್ಯೋತಿಷಿಗಳು ಹೇಳುವ ಕ್ಷೇತ್ರ ದರ್ಶನ ಮಾಡುತ್ತಾರೆ. ಅವರು ಹೇಳುವ ಪೂಜೆಗಳನ್ನು ಮಾಡುತ್ತಾರೆ. ಅದರಿಂದ ಹಣ ಅಷ್ಟೇ ಅಲ್ಲ ಇದ್ದ ನೆಮ್ಮದಿ ಸಹ ಕಳೆದುಕೊಳ್ಳುತ್ತಾರೆ. ಜ್ಯೋತಿಷಿಗಳು ಎಷ್ಟೇ ನಂಬುವಂತೆ ಹೇಳಿದರು ಸ್ವಲ್ಪವಾದರೂ ವಿವೇಚನೆ ಬಳಸಿ ಯೋಚಿಸಬೇಕು. ಅವರು ಹೇಳಿದ್ದೆಲ್ಲಾ ಅಪ್ಪಟ ಸತ್ಯ ಎಂದು ನಂಬಬಾರದು.



> ಭಾರತದಲ್ಲಿ ಎಷ್ಟೇ ವಿದ್ಯಾವಂತರಾದರೂ ದೈವಶಕ್ತಿ ಮೇಲೆ ನಂಬಿಕೆ ಇಟ್ಟವರನ್ನು ದೌರ್ಬಲ್ಯ ಹೊಂದಿರುವವರು ಎಂದು ಕೆಲವು ಕಿಡಿಗೇಡಿಗಳು ಪರಿಗಣಿಸುತ್ತಾರೆ. ದೇವರ ಮೇಲೆ ನಂಬಿಕೆ ಎಷ್ಟೇ ಇದ್ದರೂ ಮೂಢನಂಬಿಕೆ ಹೊಂದಿರಬಾರದು. ಸ್ವಲ್ಪವಾದರೂ ವೈಚಾರಿಕ ಮನೋಭಾವ ಬೆಳೆಸಿಕೊಳ್ಳಬೇಕು. ಸಂಶೋಧನೆ ಮಾಡಿ ಪಿ.ಎಚ್.ಡಿ. ಪದವಿ ಪಡೆದಿರುವ ಅನೇಕರು ಮೂರನೇ ತರಗತಿ ಓದಿರುವ ಡೋಂಗಿ ಜ್ಯೋತಿಷಿಯ ಮಾತನ್ನು ಕುರಿಯ ರೀತಿ ಕೇಳುತ್ತಾ ತಲೆ ಆಡಿಸುತ್ತಾರೆ ಎಂದರೆ ಅದಕ್ಕಿಂತ ವಿಡಂಭನೆ ಇನ್ನೊಂದಿಲ್ಲ. ಜ್ಯೋತಿಷಿಗಳು ನಿಜವಾದ ಭವಿಷ್ಯ ತಿಳಿಸುವ ಬದಲು ಮಾತಿನ ಮೋಡಿಯಿಂದ ಬಲೆಗೆ ಬೀಳಿಸುತ್ತಾರೆ. ಮಹಿಳೆಯರನ್ನು ಹೆಚ್ಚು ಟಾರ್ಗೆಟ್ ಮಾಡುವುದು ಸಾಮಾನ್ಯವಾಗಿರುತ್ತದೆ. ಎಷ್ಟೋ ಜನ ಮಹಿಳೆಯರು ಬೆಳಗ್ಗೆ ಎದ್ದು ಟಿ.ವಿ.ಯಲ್ಲಿ ಬರುವ ಜ್ಯೋತಿಷಿಗಳ ಜ್ಯೋತಿಷ್ಯ ಕಾರ್ಯಕ್ರಮಕ್ಕೆ ಅಡಿಕ್ಟ್ ಆಗಿದ್ದಾರೆ. ಹಣ, ಅಂತಸ್ತು, ನೆಮ್ಮದಿ ಎಲ್ಲವೂ ಇದ್ದರೂ ಮತ್ತಷ್ಟಕ್ಕಾಗಿ ಆಸೆಪಟ್ಟು ಜೋತಿಷಿಗಳು ಹೇಳುವ ಕ್ಷೇತ್ರ ದರ್ಶನ ಮಾಡುತ್ತಾರೆ. ಅವರು ಹೇಳುವ ಪೂಜೆಗಳನ್ನು ಮಾಡುತ್ತಾರೆ. ಅದರಿಂದ ಹಣ ಅಷ್ಟೇ ಅಲ್ಲ ಇದ್ದ ನೆಮ್ಮದಿ ಸಹ ಕಳೆದುಕೊಳ್ಳುತ್ತಾರೆ. ಜ್ಯೋತಿಷಿಗಳು ಎಷ್ಟೇ ನಂಬುವಂತೆ ಹೇಳಿದರು ಸ್ವಲ್ಪವಾದರೂ ವಿವೇಚನೆ ಬಳಸಿ ಯೋಚಿಸಬೇಕು. ಅವರು ಹೇಳಿದ್ದೆಲ್ಲಾ ಅಪ್ಪಟ ಸತ್ಯ ಎಂದು ನಂಬಬಾರದು.

ತಮಾಷೆಯ ಸಂಗತಿಯೊಂದನ್ನು ಇತ್ತೀಚಿಗೆ ಸಾಮಾಜಿಕ ಜಾಲತಾಣದಲ್ಲಿ ನೋಡಿದೆ. ಭಕ್ತನೊಬ್ಬನ ಜೊತೆ ನಡೆದು ಹೋಗುತ್ತಿದ್ದ ಜ್ಯೋತಿಷಿಯ ಕಮಂಡಲ ಅಕಸ್ಮಾತಾಗಿ ನೆಲಕ್ಕೆ ಬೀಳುತ್ತದೆ. ಅದನ್ನು ಕಂಡ ಜ್ಯೋತಿಷಿಯು ಕ್ಷಣ ಕಾಲ ಯೋಚಿಸಿ, ಈ ಜಾಗದಲ್ಲಿ ನಿಧಿ ಇದೆ. ಈ ಜಾಗವನ್ನು ಅಗೆಯಿಸಿದಲ್ಲಿ ನಿಧಿ ಲಭ್ಯವಾಗುತ್ತದೆ ಎಂದು ಭವಿಷ್ಯ ನುಡಿಯತ್ತಾನೆ. ಅದರಿಂದ ಸಂತೃಪ್ತನಾದ ಭಕ್ತ ಖುಷಿಯಿಂದ ತನ್ನ ಮನೆಗೆ ಆಹ್ವಾನಿಸಿ ಜ್ಯೋತಿಷಿಗೆ ತಿಂಡಿ ವ್ಯವಸ್ಥೆ ಮಾಡುತ್ತಾನೆ. ತಟ್ಟೆಯಲ್ಲಿ ರೊಟ್ಟಿಯನ್ನು ತಂದು ಕೊಟ್ಟ ಭಕ್ತ ಜ್ಯೋತಿಷಿಗೆ ತಿನ್ನುವಂತೆ ಹೇಳುತ್ತಾನೆ. ರೊಟ್ಟಿಯನ್ನು ತಿನ್ನಲು ಪ್ರಾರಂಭಿಸಿದ ಜ್ಯೋತಿಷಿಯು ರೊಟ್ಟಿ ಏನೋ ಚೆನ್ನಾಗಿದೆ, ಇದರೊಂದಿಗೆ ಚಟ್ನಿ ಇದ್ದರೆ ಚೆನ್ನಾಗಿತ್ತು ಎನ್ನುತ್ತಾನೆ. ಆಗ ಭಕ್ತ ಚಟ್ನಿಯು ರೊಟ್ಟಿಯ ಕೆಳಗೆ ಇದೆಯೆಲ್ಲಾ, ನಿಮಗೆ ತಿಳಿಯಲಿಲ್ಲವೇ? ಎಂದು ಕೇಳುತ್ತಾನೆ. ಜ್ಯೋತಿಷಿಯು ತಿಳಿಯಲಿಲ್ಲವಲ್ಲಾ ಎಂದು ಉತ್ತರಿಸಿದಾಗ, ಭಕ್ತನು ಒಂದು ರೊಟ್ಟಿಯ ಕೆಳಗೆ ಇರುವ ಚಟ್ನಿ ಇರುವ ಸಂಗತಿಯೇ ನಿನಗೆ ತಿಳಿದಿಲ್ಲ, ಇನ್ನು ಭೂಮಿಯ ಒಳಗೆ ಹುದುಗಿರುವ ನಿಧಿಯ ಬಗ್ಗೆ ಹೇಗೆ ತಿಳಿಯುತ್ತದೆ. ನೀನೊಬ್ಬ ಡೋಂಗಿ ಎನ್ನುತ್ತಾ ಬಡಿಗೆ ತೆಗೆದುಕೊಂಡು ಜ್ಯೋತಿಷಿಗೆ ಹೊಡೆಯುತ್ತಾ ಮನೆಯಿಂದ ಓಡಿಸುತ್ತಾನೆ. ಡೋಂಗಿ ಜ್ಯೋತಿಷಿಗಳ ಮಾತು ಕೇಳಿ ನಿಧಿ ಆಸೆಗೆ ಎಷ್ಟೋ ಜನ ಇರುವ ಮನೆಯನ್ನೇ ಹಾಳು ಮಾಡಿಕೊಂಡಿದ್ದಾರೆ.

ಇನ್ನು ವಾಸ್ತು ಎಂಬ ವಿಷಯವು ಇದಕ್ಕೆ ಹೊರತಾಗಿಲ್ಲ. ವಾಸ್ತುವಿನ ಹೆಸರಿನಲ್ಲಿ ಏನೆಲ್ಲಾ ಮಾರ್ಕೆಟಿಂಗ್ ನಡೆಯುತ್ತದೆ ಎಂಬುದನ್ನು ತಿಳಿದರೆ ನಿಜಕ್ಕೂ ಆಶ್ಚರ್ಯವಾಗುತ್ತದೆ. ಇಲ್ಲಿಯೂ ಭಕ್ತಿಯೇ ಟ್ರಂಪ್‌ಕಾರ್ಡ್. ಮನೆ, ಕಛೇರಿ ಇತ್ಯಾದಿ ಕಟ್ಟಡಗಳಿಗೆ ವಾಸ್ತು ಮಾಡಿಸಿದರೆ ಆರ್ಥಿಕ ಅಭಿವೃದ್ಧಿ, ಆರೋಗ್ಯ ವೃದ್ಧಿ, ನೆಮ್ಮದಿ ವೃದ್ಧಿಸುತ್ತದೆ ಎಂದು ನಂಬಿಸಲಾಗುತ್ತದೆ. ಅದಕ್ಕಾಗಿ ಕಟ್ಟಡ ನವೀಕರಣ ಮಾಡಿಸಿ ಲಕ್ಷಾಂತರ ರೂಪಾಯಿ ವ್ಯರ್ಥ ಮಾಡಿಸುತ್ತಾರೆ. ಮನೆಯಲ್ಲಿನ ವಸ್ತುಗಳನ್ನೆಲ್ಲಾ ಸ್ಥಾನಪಲ್ಲಟ ಮಾಡಿಸಿ, ವಾಸ್ತುವಿಗೆ ಸಂಬಂಧಿಸಿದ ವಸ್ತುಗಳನ್ನು ಮನೆಯಲ್ಲಿ ಸ್ಥಾಪಿಸಿ, ಮನೆಯಲ್ಲಿ ಇದ್ದ ನೆಮ್ಮದಿಯನ್ನು ಮನೆಯಿಂದ ಓಡಿಸುತ್ತಾರೆ. ಜೊತೆಗೆ ಸಾವಿರ/ಲಕ್ಷಾಂತರ ರೂಪಾಯಿ ತಮ್ಮ ಜೇಬಿಗೆ ಹಾಕಿಕೊಂಡು ಓಡಿ ಹೋಗುತ್ತಾರೆ.

ಸರಳ ವಾಸ್ತು ಎಂಬ ಪರಿಕಲ್ಪನೆಯೊಂದಿಗೆ ಅತ್ಯಂತ ವೇಗವಾಗಿ ಜನಪ್ರಿಯರಾದವರು ಡಾ.ಚಂದ್ರಶೇಖರ ಗುರೂಜಿಯವರು. ಮೂಲತಃ ಇಂಜಿನಿಯರಿಂಗ್ ಪದವಿಧರರಾಗಿದ್ದ ಅವರು ವಾಸ್ತು ಕುರಿತಾಗಿ ಸಾವಿರಾರು ಸೆಮಿನಾರ್‌ಗಳನ್ನು ಮಾಡಿದ್ದರು, ಪುಸ್ತಕಗಳನ್ನು ರಚಿಸಿದ್ದರು. ಅವರದೇ ಆದ ಸರಳ ಜೀವನ ಎಂಬ ಟಿ.ವಿ.ಚಾನೆಲ್ ಒಂದನ್ನು ಪ್ರಾರಂಭಿಸಿದ್ದರು. ಇವರ ಸರಳವಾಸ್ತು ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಖ್ಯಾತಿ ಗಳಿಸಿ ಅವರು ಬಹುಬೇಗ ಕೋಟ್ಯಾಧಿಪತಿಗಳಾದರು. ಆದರೆ ಸರಳ ವಾಸ್ತು ತಜ್ಞರಾದ ಗುರೂಜಿಗೆ ತಮ್ಮ ಬದುಕು ಅಕಾಲದಲ್ಲಿ ಅಂತ್ಯವಾಗುತ್ತದೆ ಎಂಬ ಕನಿಷ್ಠ ಸುಳಿವು ಸಹ ಸಿಗಲಿಲ್ಲ. ಲಕ್ಷಾಂತರ ಮನೆಗಳಿಗೆ ವಾಸ್ತು ಸ್ಥಾಪಿಸಿದ್ದ ಅವರು 2022ರಲ್ಲಿ ಹುಬ್ಬಳ್ಳಿಯ ಹೋಟೆಲ್ ಒಂದರ ಲಾಬಿಯಲ್ಲಿ ಹಾಡು ಹಗಲೇ ತನ್ನ ಶಿಷ್ಯರಿಂದ ಅಮಾನುಷವಾಗಿ ಕೊಲೆಯಾಗಿಬಿಡುತ್ತಾರೆ. ಇದರಿಂದ ನಿಜವಾಗಿ ವಿಚಲಿತರಾದವರು ವಾಸ್ತು ಮಾಡಿಸಿದ್ದ ಮನೆಗಳವರು.

ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಒಂದು ವ್ಯವಸ್ಥಿತ ಜಾಲದ ಮುಖಾಂತರ ಜನರಲ್ಲಿ ಸಮೂಹ ಸನ್ನಿಯನ್ನು ಸೃಷ್ಟಿಸಿ ತಮ್ಮ ಬಲೆಯೊಳಗೆ ಕೆಡವಿ ಹಾಕುವ ದುರುಳರು ಅನೇಕರು ಇದ್ದಾರೆ. ಅವರಿಗೆ ಭಕ್ತಿಯನ್ನು ದೌರ್ಬಲ್ಯ ಮಾಡಿಕೊಂಡಿರುವ ಭಕ್ತರೇ ಮಿಕಗಳು. ಜನರಲ್ಲಿ ಇರುವ ಭಯವನ್ನೇ ಎನ್‌ಕ್ಯಾಶ್ ಮಾಡಿಕೊಂಡು ಅವರ ಮನೆ ತುಂಬಾ ಕ್ಯಾಶ್ ತುಂಬಿಕೊಳ್ಳುತ್ತಾರೆ. ಶ್ರೀಮಂತರಾಗಿದ್ದ ಭಕ್ತರು ಅವರ ಮಾತು ಕೇಳಿ ಬಡ ಭಕ್ತರಾಗಲು ಬಹುಕಾಲ ಬೇಕಾಗುವುದಿಲ್ಲ.

ಕಲ್ಲು, ಮರ, ಬೆಟ್ಟ, ನದಿ, ಸಮುದ್ರ, ವಾಯು, ಮೋಡ, ಮಳೆ ಎಲ್ಲವೂ ಭಾರತದ ಕೆಲವು ಧರ್ಮಗಳ ಪ್ರಕಾರ ದೇವರು. ಆದರೆ ಪ್ರಕೃತಿಯ ಪ್ರತಿ ವಸ್ತುವು ದೇವರಾದ ಮೇಲೆ ಪ್ರಕೃತಿಯನ್ನು ಮಲಿನಗೊಳಿಸಿ ವಿಕೃತಿ ಮೆರೆಯುವುದು ಎಷ್ಟು ಸರಿ? ಮನುಷ್ಯ ವಾಮಮಾರ್ಗದಲ್ಲಿ ಹಣ, ಕೀರ್ತಿ ಗಳಿಸಲು ಭಕ್ತಿಯನ್ನು ಬಳಸಿಕೊಳ್ಳುವುದು ಎಷ್ಟು ಸರಿ?. ಅನೇಕ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಹೆಸರಿನಲ್ಲಿ ಭಕ್ತರನ್ನು ಸುಲಿಗೆ ಮಾಡುತ್ತಿದ್ದಾರೆ. ಭಕ್ತಿ ಎಂಬುದು ಕಮರ್ಷಿಯಲ್ ವಸ್ತುವಾಗಿದೆ. ಆನ್‌ಲೈನ್‌ನಲ್ಲಿ ಚಕ್ರ, ಯಂತ್ರ, ರುದ್ರಾಕ್ಷಿ, ಏನೇನೋ ಮಾಲೆಗಳು ಇತ್ಯಾದಿ ವಸ್ತುಗಳನ್ನು ಭಕ್ತಿಯ ಹೆಸರಿನಲ್ಲಿ ಮಾರ್ಕೆಟ್ ಮಾಡಿ ದಿಢೀರನೆ ಸಿರಿವಂತರಾಗುತ್ತಿದ್ದಾರೆ ಜಾಣರು. ಅವುಗಳನ್ನು ಕೋಣರು ಖರೀದಿಸುತ್ತಿದ್ದಾರೆ ಅಷ್ಟೆ ಎಲ್ಲದಕ್ಕೂ ಒಂದು ಇತಿಮಿತಿ ಇರಬೇಕು. ಹಾಸ್ಯ ಸಾಹಿತಿ ಬೀಚಿಯವರು ಎಲ್ಲವನ್ನು ಕೊಡುವವನು ದೇವನೇ ಎನ್ನುವಂತೆ ನುಡಿ, ಎಲ್ಲವನ್ನು ಮಾಡುವವನು ನೀನೆ ಅನ್ನುವಂತೆ ದುಡಿ ಎಂದು ಹೇಳಿದ್ದಾರೆ. ಈ ಕುರಿತು ಚಿಂತನೆ ನಡೆಸುವ ಅಗತ್ಯವಿದೆ.

ಹೂರಣ: ಭಕ್ತಿಯ ಮಾರ್ಗ ಸರಳ,
ಅದನ್ನು ಅನುಸರಿಸುವವರು ವಿರಳ

ಪರಿಸರಕ್ಕೆ ಪೂರಕ ಜಲಾನಯನ ಪ್ರದೇಶ ನಿರ್ವಹಿಸಿದರೆ ರೈತರ ಆದಾಯ ದ್ವಿಗುಣ

ಇಂಜಿನಿಯರ್‌ಗಳ ಸಂಸ್ಥೆಯಲ್ಲಿ ವಿಶ್ವ ಭೂಮಿ ದಿನಾಚರಣೆಯಲ್ಲಿ ಹಿರಿಯ ವಿಜ್ಞಾನಿ ಟಿ.ವಿ.ರಾಮಚಂದ್ರ ಪ್ರತಿಪಾದನೆ

ಮೈಸೂರು,ಏ.26(ಪಿಎಂ)–ರೈತರ ಆದಾಯ ದ್ವಿಗುಣಗೊಳ್ಳಲು ಜಲಾ ನಯನ ಪ್ರದೇಶಗಳನ್ನು ಪರಿಸರಕ್ಕೆ ಪೂರಕವಾಗಿ ನಿರ್ವಹಿಸಿದರೆ ಸಾಕು. ಇದರಿಂದ ಬೆಳೆಯಲ್ಲಿ ಇಳುವರಿ ಹೆಚ್ಚಾಗುವ ಮೂಲಕ ರೈತರ ಆದಾಯ ದ್ವಿಗುಣಗೊಳ್ಳಲು ಪೂರಕ ವಾತಾವರಣ ಸೃಷ್ಟಿಯಾಗಲಿದೆ ಎಂದು ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಮಾಹಿತಿ ವ್ಯವಸ್ಥೆಯ ಸಂಚಾಲಕ, ಶಕ್ತಿ ಮತ್ತು ಜೌಗು ಪ್ರದೇಶ ಸಂಶೋಧನಾ ಸಮೂಹದ ಸಂಯೋಜಕ, ಹಿರಿಯ ವಿಜ್ಞಾನಿ ಟಿ.ವಿ.ರಾಮಚಂದ್ರ ಪ್ರತಿಪಾದಿಸಿದರು.



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಭೂಮಿ ದಿನಾಚರಣೆಯಲ್ಲಿ ಹಿರಿಯ ವಿಜ್ಞಾನಿ ಟಿ.ವಿ.ರಾಮಚಂದ್ರ ಮಾತನಾಡಿದರು.

> 12 ತಿಂಗಳು ನೀರು ದೊರೆಯುವಲ್ಲಿ ರೈತರು ಮೂರು ಬೆಳೆ ಬೆಳೆಯಬಹುದು. ಹಾಗಾಗಿ ಅವರ ಆದಾಯ ಒಂದು ಎಕರೆಗೆ ಲಕ್ಷದ 54 ಸಾವಿರ ರೂಪಾಯಿ ವರ್ಷಕ್ಕೆ ಇದ್ದರೆ, ಬೋಳಾಗಿರುವ ಪ್ರದೇಶದ ರೈತರಿಗೆ ನೀರು 6ರಿಂದ 8 ತಿಂಗಳು ಮಾತ್ರ ನೀರು ದೊರಕುವ ಕಾರಣ ಒಂದೇ ಬೆಳೆ ಬೆಳೆಯಲು ಸಾಧ್ಯವಾಗಲಿದೆ. ಹಾಗಾಗಿ ಇವರಿಗೆ 32 ಸಾವಿರ ರೂಪಾಯಿ ಒಂದು ಎಕರೆಗೆ ಒಂದು ವರ್ಷಕ್ಕೆ ಆದಾಯ ದೊರೆಯಲಿದೆ. ಅಷ್ಟೇ ಅಲ್ಲದೆ, ಇಳುವರಿ ಸಂಬಂಧ ಎಲ್ಲೆಲ್ಲಿ ಕಾಡು ಇದೆಯೋ ಅಂತಹ ಸುತ್ತಮುತ್ತಲ ಹಳ್ಳಿಗಳ ಜಮೀನಿನಲ್ಲಿ ಒಂದು ಎಕರೆ 14ರಿಂದ 18 ಕ್ವಿಂಟಾಲ್ ಭತ್ತ ಇಳುವರಿ ಇದೆ. ಕಾಡು ಇಲ್ಲದಿರುವ ಕಡೆಗಳಲ್ಲಿ 6ರಿಂದ 8 ಕ್ವಿಂಟಾಲ್ ಮಾತ್ರ ಇಳುವರಿ ಇದೆ. ಕಾಡು ಇರುವ ಕಡೆಗಳಲ್ಲಿ ಪರಾಗಸ್ಪರ್ಶ ಮಾಡುವ ಕ್ರಿಮಿಗಳು ಹೆಚ್ಚು ಇರುವ ಹಿನ್ನೆಲೆಯಲ್ಲಿ ಇಳುವರಿ ಹೆಚ್ಚಾಗಲಿದೆ. ಹಾಗಾಗಿ ನಮ್ಮ ಮಕ್ಕಳು ಹಾಗೂ ಮುಂದಿನ ಪೀಳಿಗೆಗೆ ಪರಿಸರದ ಬಗ್ಗೆ ಕಾಳಜಿ ಮೂಡಿಸಬೇಕು. –ಟಿ.ವಿ.ರಾಮಚಂದ್ರ

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆಯ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ ವಿಶ್ವ ಭೂಮಿ ದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಪಶ್ಚಿಮ ಘಟ್ಟಗಳಲ್ಲಿನ ಪರಿಸರ ಸೂಕ್ಷ್ಮ ಪ್ರದೇಶಗಳು ; ಸಂರಕ್ಷಣೆ' ಕುರಿತು ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿಯವರು ರೈತರ ಆದಾಯ ದ್ವಿಗುಣ ಮಾಡಬೇಕೆಂದು ಹೇಳುತ್ತಿರುತ್ತಾರೆ. ಹಾಗೆ ಆಗಬೇಕಾದರೆ ಜಲಾನಯನ ಪ್ರದೇಶದ ನಿರ್ವಹಣೆ ಮಾಡಿದರೆ ಸಾಕು. ಜಲಾನಯನ ಪ್ರದೇಶದಲ್ಲಿ ಸ್ಥಳೀಯ ಪ್ರಭೇಧ ಸಸ್ಯಗಳು ಇದ್ದರೆ ಅಲ್ಲಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚಾಗಲಿದೆ. ಇದರಿಂದ ರೈತರಿಗೆ ಬೇಕಾದ ಇಳುವರಿ ಸಹಜವಾಗಿಯೇ ದೊರೆಯಲಿದೆ. ಅವರಿಗೆ 10 ಸಾವಿರ ಕೊಡುವ ಪ್ರಮೇಯವೇ ಬರುವುದಿಲ್ಲ. ಇದರಿಂದ ಅವರ ಆದಾಯ ಮೂರಿಂದ ನಾಲ್ಕು ಪಟ್ಟು ಹೆಚ್ಚಾಗಲಿದ್ದು, ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕಿದೆ. ಇದನ್ನು ಸಾಕಷ್ಟು ವೇದಿಕೆಯಲ್ಲಿ ಹಾಗೂ ಕೇಂದ್ರ ಸರ್ಕಾರದ ಕಮಿಟಿಗಳಲ್ಲೂ ಸರ್ಕಾರದ ಮುಂದೆ ಆಗ್ರಹಿಸಿದ್ದೇನೆ. ಆದರೆ ಅಧಿಕಾರಿ ವರ್ಗದ ವಸಾಹತುಶಾಹಿ ಮನಸ್ಥಿತಿಯಿಂದ ಇದು ಕಾರ್ಯಗತ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ದೇಶಕ್ಕೆ ವಸಾಹತುಶಾಹಿ ಆಡಳಿತಗಾರರು ಬಂದು ಹೋದರು. ಅವರಿಗೆ ನಮ್ಮ ದೇಶದ ಮೇಲೆ ಅಭಿಮಾನ ಇರಲಿಲ್ಲ. ಹಾಗಾಗಿ ಲೂಟಿ ಮಾಡಿದರು. ಜೊತೆಗೆ ನಮ್ಮ ಅಧಿಕಾರಿ ವರ್ಗಕ್ಕೂ ಅದನ್ನೇ ತುಂಬಿ ಹೋದರು. ಹಾಗಾಗಿ ಅವರು ಸಮಾಜದ ಒಳಿತಿಗಾಗಿ ಮಾಡುವುದಿಲ್ಲ ಎಂದರು.

ಇಂದು ಭೂಮಿ ದಿನಾಚರಣೆ ಆಚರಿಸುತ್ತಿದ್ದು, ಅದನ್ನು ನಾವು ಕಾಪಾಡಿದರೆ, ಮುಂದಿನ ಪೀಳಿಗೆಗೆ ಬೇಕಾದ ನೀರು–ಗಾಳಿ ದೊರೆಯಲಿದೆ. ಪಶ್ಚಿಮ ಘಟ್ಟದಲ್ಲಿ ಬಹಳಷ್ಟು ಪ್ರದೇಶದಲ್ಲಿ ಕೆಲಸ ಮಾಡಿದ್ದೇನೆ. ನನ್ನ ಅಭ್ಯಾಸದ ಪ್ರಕಾರ ಯಾವ ಜಲಾನಯನ ಪ್ರದೇಶಕ್ಕೆ ಸ್ಥಳೀಯ ಕಾಡು ಇದ್ದರೆ ಝರಿ ಮತ್ತು ನದಿಗಳಲ್ಲಿ 12 ತಿಂಗಳು ನೀರು ಲಭ್ಯವಿರುವುದು ಕಂಡು ಬಂದಿದೆ. ಯಾವ ಜಲಾನಯನ ಪ್ರದೇಶದಲ್ಲಿ ಹೆಚ್ಚು ನಡುತೋಪು ಆಗಿದೆಯೋ ಅಲ್ಲಿ 6ರಿಂದ 8 ತಿಂಗಳವರೆಗೆ ನೀರು ದೊರೆಯುವುದು ಕಂಡುಬಂದಿದೆ. ಅಲ್ಲದೆ, ಶೇ.30ಕ್ಕಿಂತ ಕಡಿಮೆ ಕಾಡು ಹೊಂದಿರುವ ಕಡೆಗಳಲ್ಲಿ ಕೇವಲ ಮಳೆಗಾಲದಲ್ಲಿ ನೀರು ಲಭ್ಯವಿರುವುದು ಕಂಡುಬಂದಿದೆ ಎಂದರು. ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಕೇಂದ್ರದ ಅಧ್ಯಕ್ಷ ಹೆಚ್.ಎಸ್.ಸುರೇಶ್‌ಬಾಬು, ಕಮಿಟಿ ಸದಸ್ಯ ಕೃಷ್ಣಪ್ರಸಾದ್, ಕಾರ್ಯಕ್ರಮ ಸಂಚಾಲಕ ಎಸ್.ಶಿವಪ್ರಸಾದ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಐಟಿಎಫ್ ವರ್ಲ್ಡ್ ಜೂನಿಯರ್ಸ್ ಟೆನಿಸ್ ಟೂರ್ನಮೆಂಟ್

ಅರ್ಹತೆ ಪಡೆದ ಮೈಸೂರಿನ ಆಟಗಾರರಿರುವ ಭಾರತ ತಂಡ



14 ವರ್ಷದೊಳಗಿನ ಟೆನ್ನಿಸ್ 'ಐಟಿಎಫ್ ವರ್ಲ್ಡ್ ಜೂನಿಯರ್ಸ್ ಟೆನಿಸ್ ಟೂರ್ನಮೆಂಟ್ ಫೈನಲ್ಸ್ 2026' ಪಂದ್ಯಾವಳಿಗೆ ಅರ್ಹತೆ ಪಡೆದ ಭಾರತ ಬಾಲಕಿಯರ ತಂಡ.

ಮೈಸೂರು, ಏ.26(ಎಂಟಿವೈ)– ಜೆಕ್ ಗಣರಾಜ್ಯ(ಜೆಕ್ ರಿಪಬ್ಲಿಕ್) ದೇಶದ ಪ್ರೊಸ್ಟೆಜೋವ್‌ನಲ್ಲಿ ಆ.3ರಿಂದ 8ರವರೆಗೆ ನಡೆಯುವ 14 ವರ್ಷದೊಳಗಿನ 'ಐಟಿಎಫ್ ವರ್ಲ್ಡ್ ಜೂನಿಯರ್ಸ್ ಟೆನಿಸ್ ಟೂರ್ನಮೆಂಟ್ ಫೈನಲ್ಸ್ 2026' ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಮೈಸೂರಿನ ಟೆನಿಸ್ ಪಟು ಒಳಗೊಂಡ ಭಾರತದ ತಂಡ ನಾಲ್ಕನೇ ತಂಡವಾಗಿ ಅರ್ಹತೆ ಪಡೆದುಕೊಂಡಿದೆ.

ಮಲೇಷ್ಯಾದ ಕುಚಿಂಗ್‌ನಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆದ 'ಐಟಿಎಫ್ ವರ್ಲ್ಡ್ ಜೂನಿಯರ್ಸ್ ಏಷ್ಯಾ, ಓಷಿಯಾನಿಯಾ – ಫೈನಲ್ ಅರ್ಹತಾ ಸ್ಪರ್ಧೆ– 2026' ಯಲ್ಲಿ 14 ವರ್ಷದೊಳಗಿನ ಹಲವು ದೇಶಗಳ ಟೆನಿಸ್ ತಂಡಗಳು ಪಾಲ್ಗೊಂಡಿದ್ದವು. ತೀವ್ರ ಜಿದ್ದಾಜಿದ್ದಿನಿಂದ ಕೂಡಿದ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್ ಕುಮಾರ್, ಸೃಷ್ಟಿ ಕಿರಣ್ ಮತ್ತು ಜೋಹಾ ಖುರೇಷಿ ಅವರಿದ್ದ 14 ವರ್ಷದೊಳಗಿನ ಬಾಲಕಿಯರ ಭಾರತ ತಂಡ 4ನೇ ತಂಡವಾಗಿ ಪಂದ್ಯಾವಳಿಗೆ ಅರ್ಹತೆ ಪಡೆದುಕೊಂಡಿದೆ.

ಅರ್ಹತಾ ಪಂದ್ಯಾವಳಿಯಲ್ಲಿ ಜಪಾನ್ ತಂಡ ವಿಜೇತವಾದರೆ, ಕೊರಿಯಾ ರನ್ನರ್ಸ್–ಅಪ್, ಚೀನಾ 3ನೇ ಸ್ಥಾನ ಹಾಗೂ ಭಾರತ ತಂಡ 4ನೇ ಸ್ಥಾನದಲ್ಲಿ 'ಐಟಿಎಫ್ ವರ್ಲ್ಡ್ ಜೂನಿಯರ್ಸ್ ಟೆನಿಸ್ ಟೂರ್ನಮೆಂಟ್ ಫೈನಲ್ಸ್ 2026' ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದೆ.

ಆ.3ರಿಂದ 8ರವರೆಗೆ ಜೆಕ್ ಗಣರಾಜ್ಯದ ಪ್ರೊಸ್ಟೆಜೋವ್‌ನಲ್ಲಿ ನಡೆಯಲಿರುವ ಪಂದ್ಯಾವಳಿಯಲ್ಲಿ ಯುರೋಪ್, ಉತ್ತರ ಅಮೆರಿಕಾ, ದಕ್ಷಿಣ ಅಮೇರಿಕಾ, ಮಧ್ಯ ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾ – ಓಷಿಯಾನಿಯಾ ಪ್ರದೇಶಗಳಿಂದ ಒಟ್ಟು 16 ಬಾಲಕಿಯರ ತಂಡಗಳು ಮತ್ತು 16 ಬಾಲಕರ ತಂಡಗಳು ಭಾಗವಹಿಸಲಿವೆ. ಜೂನಿಯರ್ ಚಾಂಪಿಯನ್‌ಶಿಪ್ ಪ್ರಶಸ್ತಿಗಾಗಿ ಈ ತಂಡಗಳು ಸೆಣೆಸಾಡಲಿವೆ.

14 ವರ್ಷದೊಳಗಿನ ಭಾರತೀಯ ಬಾಲಕಿಯರ ತಂಡವು 'ಐಟಿಎಫ್ ವರ್ಲ್ಡ್ ಜೂನಿಯರ್ಸ್ ಟೆನಿಸ್ ಟೂರ್ನಮೆಂಟ್' ನಲ್ಲಿ 12 ವರ್ಷಗಳ ನಂತರ ಅರ್ಹತೆ ಪಡೆದಿದೆ. ಭಾರತೀಯ ಬಾಲಕಿಯರ ತಂಡ 2014ರಲ್ಲಿ ಈ ಪಂದ್ಯಾವಳಿಯಲ್ಲಿ ಪಾಲ್ಗೊಂಡಿತ್ತು. ಅದಾದ ಬಳಿಕ ಅರ್ಹತಾ ಸುತ್ತಿನ್ನಲ್ಲೇ ನಿರ್ಗಮಿಸಿತ್ತು.

ಭಾರತದ 14 ವರ್ಷದೊಳಗಿನ ಟೆನಿಸ್ ತಂಡವನ್ನು ಪದ್ಮಪ್ರಿಯಾ ರಮೇಶ್ ಕುಮಾರ್ ಪ್ರತಿನಿಧಿಸುತ್ತಿದ್ದು, ಮೈಸೂರು, ಕರ್ನಾಟಕ ಕೀರ್ತಿ ಹೆಚ್ಚಿಸಿದ್ದಾರೆ. ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಚಾಮರಾಜನಗರದ ಸಿಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ರಮೇಶ್ ಕುಮಾರ್ ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ. ಈಕೆ ತರಬೇತುದಾರ ರಘುವೀರ್ ಪೊನ್ನುಸಾಮಿ ಮತ್ತು ಫಿಟ್‌ನೆಸ್ ತರಬೇತುದಾರ ಸಾಗರ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ಮೈಸೂರು–ನಂಜನಗೂಡು ಭಾಗದ ವ್ಯಾಪಾರಕ್ಕೆ ಸಂಪೂರ್ಣ ಸಹಕಾರ

ಎನ್‌ಎಂಪಿಎ ಅಧ್ಯಕ್ಷ ಸುಶೀಲ್ ಕುಮಾರ್ ಸಿಂಗ್



ಕಾರ್ಯಕ್ರಮದಲ್ಲಿ ಎನ್‌ಎಂಪಿಎ ಕೈಪಿಡಿ ಬಿಡುಗಡೆ ಮಾಡಲಾಯಿತು.

ಮೈಸೂರು,ಏ.26(ಪಿಎಂ)– ಮೈಸೂರು ಮತ್ತು ನಂಜನಗೂಡು ಪ್ರದೇಶದ ಆಮದು, ರಫ್ತು ವ್ಯಾಪಾರ ವೃದ್ಧಿಸುವ ನಿಟ್ಟಿನಲ್ಲಿ ಶನಿವಾರ ವ್ಯಾಪಾರ ಕ್ಷೇತ್ರದವರು, ನ್ಯೂ ಮಂಗಳೂರು ಪೋರ್ಟ್ ಅಥಾರಿಟಿ (ಎನ್‌ಎಂಪಿಎ) ಮತ್ತು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಪ್ರತಿನಿಧಿಗಳ ಸಭೆ ನಡೆಯಿತು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಎನ್‌ಎಂಪಿಎ ಅಧ್ಯಕ್ಷ ಸುಶೀಲ್ ಕುಮಾರ್ ಸಿಂಗ್ ಮಾತನಾಡಿ, ಬಂದರಿನ ಮೂಲಸೌಕರ್ಯ ಅಭಿವೃದ್ಧಿ, ಭವಿಷ್ಯದ ವಿಸ್ತರಣಾ ಯೋಜನೆಗಳು ಮತ್ತು ಗ್ರಾಹಕ–ಕೇಂದ್ರಿತ ಉಪಕ್ರಮಗಳಿಗೆ ಆದ್ಯತೆ ನೀಡುವ ಜೊತೆಗೆ ಮೈಸೂರು–ನಂಜನಗೂಡು ಭಾಗದ ವ್ಯಾಪಾರಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಮಂಗಳೂರು ಬಂದರಿನ ಟ್ರಾಫಿಕ್ ಮ್ಯಾನೇಜರ್ ಕೆ.ರಾಜೇಂದ್ರ ಕುಮಾರ್ ಮಾತನಾಡಿ, ಕರ್ನಾಟಕ ಮತ್ತು ಇನ್ನಿತರ ಪ್ರದೇಶದ ವ್ಯಾಪಾರ ಹೆಚ್ಚಿಸುವಲ್ಲಿ ಬಂದರಿನ ಪಾತ್ರದ ಬಗ್ಗೆ ವಿವರಿಸಿದರು.

ಕಸ್ಟಮ್ಸ್ ಆಯುಕ್ತೆ ಪಿ.ವಿನೀತ ಶೇಖರ್ ಅವರು ವ್ಯಾಪಾರ ಸೌಲಭ್ಯ ಕ್ರಮಗಳು ಮತ್ತು ವ್ಯಾಪಾರ ಸುಲಭೀಕರಣಕ್ಕಾಗಿ ಸಮನ್ವಯ ಪ್ರಯತ್ನಗಳ ಮಹತ್ವ ತಿಳಿಸಿದರು. ಅಲ್ಲದೆ, ಮೈಸೂರು ಮತ್ತು ನಂಜನಗೂಡು ಪ್ರದೇಶದ ವ್ಯಾಪಾರ ಸಮುದಾಯದ ಪ್ರತಿನಿಧಿಗಳಿಗೆ ವ್ಯಾಪಾರ ವೃದ್ಧಿ, ಪಾಲುದಾರು ಸಹಭಾಗಿತ್ವ ಹೆಚ್ಚಿಸುವುದು, ಮಂಗಳೂರು ಬಂದರಿನ ಬೆಳೆಯುತ್ತಿರುವ ಲಾಜಿಸ್ಟಿಕ್ಸ್ ಹಾಗೂ ಸಮುದ್ರ ಸಾರಿಗೆ ಸಾಮರ್ಥ್ಯದ ಕುರಿತು ಮಾಹಿತಿ ನೀಡಲಾಯಿತು.

ಸಭೆಯಲ್ಲಿ ಉದ್ಯಮ ಪ್ರತಿನಿಧಿಗಳು ಅಧಿಕಾರಿಗಳೊಂದಿಗೆ ಸಂವಾದ ನಡೆಸಿ ವ್ಯಾಪಾರ ಸೌಲಭ್ಯ, ಸಂಪರ್ಕ ಮತ್ತು ಭವಿಷ್ಯದ ಸಹಕಾರದ ಬಗ್ಗೆ ಸಲಹೆ ನೀಡಿದರು. ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ಕೇಂದ್ರ ಬಂದರು, ನೌಕಾಯಾನ ಮತ್ತು ಜಲಮಾರ್ಗ ಸಚಿವಾಲಯದ ನಿರ್ದೇಶಕ ದಿನೇಶ್ ಕುಮಾರ್, ಎನ್‌ಎಂಪಿಎ ಉಪಾಧ್ಯಕ್ಷೆ ಎಸ್.ಶಾಂತಿ, ಕರ್ನಾಟಕ ಕಡಲ ಮಂಡಳಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಚ್.ಸಿ. ಬಾಲಚಂದ್ರ ಮತ್ತಿತರರು ಹಾಜರಿದ್ದರು.

ಬಂದರು ಆಧಾರಿತ ಕೈಗಾರಿಕಾ ಅಭಿವೃದ್ಧಿ ಮುಖ್ಯ

ಪ್ರಸ್ತುತ ಪೋರ್ಟ್ ಆಧಾರಿತ ಕೈಗಾರಿಕಾ ಅಭಿವೃದ್ಧಿ ಅತ್ಯಂತ ಮುಖ್ಯವಾಗಿದೆ ಎಂದು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ತಿಳಿಸಿದರು. ನೂತನ ಮಂಗಳೂರು ಬಂದರು ನಮ್ಮ ರಾಜ್ಯದ ಪ್ರಮುಖ ಬಂದರುಗಳಲ್ಲಿ ಒಂದಾಗಿದ್ದು, ಜಾಗತಿಕ ಮಾರುಕಟ್ಟೆಗೆ ಉದ್ಯಮಗಳನ್ನು ಸಂಪರ್ಕಿಸುವ ಪ್ರಬಲ ಶಕ್ತಿಯಾಗಿದೆ. ಮೈಸೂರು ನಗರವು ಐಟಿ, ಶಿಕ್ಷಣ ಮತ್ತು ಆಹಾರ ಸಂಸ್ಕರಣಾ ಕ್ಷೇತ್ರಗಳಲ್ಲಿ ಬೆಳೆಯುತ್ತಿರುವ ಪ್ರಮುಖ ಕೇಂದ್ರವಾಗಿದೆ. ಮೈಸೂರಿನ ನಂಜನಗೂಡು ಪ್ರದೇಶದಲ್ಲಿ ಫಾರ್ಮಾಸ್ಯೂಟಿಕಲ್ಸ್, ಆಹಾರ ಸಂಸ್ಕರಣೆ, ರಾಸಾಯನಿಕ ಮತ್ತು ಮ್ಯಾನುಫ್ಯಾಕ್ಚರಿಂಗ್ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಹೂಡಿಕೆಗಳು ಆಗುತ್ತಿವೆ. ಈ ಪ್ರದೇಶವನ್ನು ಕೈಗಾರಿಕೆ ಬೆಳವಣಿಗೆಗಳ ಎಂಜಿನ್ ಎಂದು ಕರೆಯಬಹುದು. ಈ ಕಾರ್ಯಕ್ರಮದಿಂದ ಈ ಭಾಗದ ವ್ಯಾಪಾರ ಮತ್ತಷ್ಟು ವೃದ್ಧಿಯಾಗಲಿದೆ. ಅಲ್ಲದೇ ರಫ್ತು ಪ್ರಮಾಣ ಹೆಚ್ಚಾಗಿ ಲಾಜಿಸ್ಟಿಕ್ಸ್ ವೆಚ್ಚ ಕಡಿಮೆಯಾಗುತ್ತದೆ. ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ ಎಂದು ತಿಳಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

FOR SALE
1. 20x30,20x35, 30x40 @ Bogadi,RainbowSchool
2. 40x60 Site@ Dattagalli 80ft Rd
3. 30x50 Sites@50ft Road, Nr Defence Apartments,Kote Rd
4. 2&3 BHK Apartments, With All Amenities @ Ramkrishna Nagar.
5. 30x40 Corner Semi-Commercial, Rental Income @ Police Layout
PRAKRUTHI PROPERTIES
95386 90359, 90359 90359

FOR RENT
• 2 BHK Flats- 2 Nos &
• 2 Shops - 2 Nos (12x27 Ft)
Next to Presentation Public School, Rajivnagar 3rd Stage.
Contact: 8050056100
WhatsApp: 7897775558

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 48 ವರ್ಷದೊಳಗೆ ಸಂಬಳ : ಸೆಕ್ಯೂರಿಟಿ ಸೂಪರ್‌ವೈಸರ್ : 24,000/- 8 ಗಂಟೆ ಸೆಕ್ಯೂರಿಟಿ ಗಾರ್ಡ್: 22,000/- 8 ಗಂಟೆ ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ಗೌರೀಶಂಕರ ಟ್ರಾವೆಲ್ಸ್
30–4–26 (6ದಿನ) : ದೆಹಲಿ, ಮಥುರ, ಬೃಂದಾವನ್, ಅಯೋಧ್ಯ, ಪ್ರಯಾಗ್‌ರಾಜ್, ಕಾಶಿ
29–5–26 (13ದಿನ): ಗಂಗೋತ್ರಿ, ಯಮುನೋತ್ರಿ, ಕೇದರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ, ಮಸ್ಸೂರಿ (ವಿಮಾನ, ಬಸ್, ಊಟ, ರೂಂ)
9620002114

ಬೇಕಾಗಿದ್ದಾರೆ
ಧಾರ್ಮಿಕ ಟ್ರಸ್ಟ್‌ಗೆ 300+ ಅರೆಕಾಲಿಕ (part time) SSLC/PUC/ ಪದವೀಧರರು Work From Home ವೇತನ: ಕಾರ್ಯಕ್ಷಮತೆ ಆಧಾರಿತ ಗೆ ಅರ್ಜಿಯನ್ನು ಕಳುಹಿಸಿ
gautamatrst@gmail.com
(ವಿವರಗಳು ಇಮೇಲ್ ಮೂಲಕ)

ಮನೆ ಬಾಡಿಗೆಗೆ
ವಸಂತನಗರ ದೇವೇಗೌಡ Circle (ಬನ್ನೂರು Ring Road ಹತ್ತಿರ) 2 BHK, 2 Floor, ಮೈಸೂರು
9480168137
8453308930

ADMISSION OPEN
Govt. of Karnataka - Dept. of Tourism
FOOD CRAFT INSTITUTE - MYSURU
EXHIBITION GROUND, ITTIGEGUDU
HOTEL MANAGEMENT
100% Job Placements | Govt. College | 80% Practical classes
www.fcimysuru.com
Mob: 6362018821

Impulse Job's
Age (18-24) Project Trainee ಗಳಾಗಿ 10th, PUC, ಮೇಲ್ಪಟ್ಟ ಯುವಕ ಯುವತಿಯರು, Earn(10800/- ರಿಂದ 20400/-) PM, ಹೊಸಬರಿಗೆ ಆದ್ಯತೆ ತಮ್ಮ ವಿವರಗಳೊಂದಿಗೆ ನೇರ ಸಂಪರ್ಕಿಸಿ. ಶುಲ್ಕವಿರುವುದಿಲ್ಲ. ಮೈಸೂರು
Call... (9AM to 5PM)
9342827788
6364219821

ಸೈಟು ಮಾರಾಟಕ್ಕಿದೆ
30x50(ರವಿನ್ಯೂ) ವಿಜಯನಗರ 2ನೇ ಹಂತ (ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು ಹಿಂಭಾಗ)
9886651605

ಕೆಲಸಕ್ಕೆ ಬೇಕಾಗಿದ್ದಾರೆ
ಹಾಸ್ಪಿಟಲ್ ಅಲ್ಲಿ ಹೌಸ್ಕೀಪಿಂಗ್ ಕೆಲಸ ಮಾಡಲು ಮಹಿಳೆಯರು ಹಾಗೂ ವಾರ್ಡ್ ಬಾಯ್ ಬೇಕಾಗಿದ್ದಾರೆ. ಸೆಕ್ಯೂರಿಟಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
9060106667, 9900663249, 9535296835, 9880116412

ಬೇಕಾಗಿದ್ದಾರೆ
ಫರ್ನಿಷಿಂಗ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಮಯ 10 AM TO 8 PM ಸಂಬಳ: 15000 TO 20000 ಸ್ಥಳ : Akbar road, Mysore NEAR HDFC BANK ASHOKA ROAD
8050744784

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ತಕ್ಷಣ ಬೇಕಾಗಿದ್ದಾರೆ
ಅನುಭವಿ ಹಾಸ್ಟಲ್ ವಾರ್ಡನ್ (Any Degree), ಡ್ರೈವರ್, ಆಫೀಸ್ ಅಟೆಂಡರ್ ಬೇಕಾಗಿದ್ದಾರೆ. ಶಿಕ್ಷಣ: SSLC/PUC - Age - 45ರ ಒಳಪಟ್ಟು ಇರುವವರು ಮತ್ತು ಉತ್ತಮ ವೇತನ ನೀಡಲಾಗುವುದು
7406235556

ತಕ್ಷಣ ಬೇಕಾಗಿದ್ದಾರೆ
ಎಲೆಕ್ಟ್ರಾನಿಕ್ಸ್ ಕಂಪನಿ, ಹೆಬ್ಬಾಳ ಕೈಗಾರಿಕಾ ಪ್ರದೇಶ, ಕೆಲಸಕ್ಕೆ ಬೇಕಾಗಿದ್ದಾರೆ. ಡಿಪ್ಲೊಮಾ / ITI / PUC / SSLC
ವೇತನ: 16720/-
Mob: 7829089831

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ: 18000 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಬೇಕಾಗಿದ್ದಾರೆ
ಮೈಸೂರಿನಲ್ಲಿ ಸೌತ್ ಇಂಡಿಯನ್ ವೆಜಿಟೆರಿಯನ್ ಕೆಫೆಯಲ್ಲಿ ಕಾರ್ಯನಿರ್ವಹಿಸಲು 1) ಸೌತ್ ಇಂಡಿಯನ್ ಹೆಡ್ ಕುಕ್ –02. 2) ದೋಸೆ ಮಾಸ್ಟರ್ – 01. 3) ಇಡ್ಲಿ ಮಾಸ್ಟರ್–01 . 4) ಕಾಫಿ ಟೀ ಮಾಸ್ಟರ್ – 02 5) ಅಸಿಸ್ಟೆಂಟ್–02
9513556615

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್‌ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
ಕುವೆಂಪುನಗರದಲ್ಲಿ
ಬೆಳಗ್ಗೆ 6 ರಿಂದ ಸಂಜೆ 3 ಮಧ್ಯಾಹ್ನ 1 ರಿಂದ ರಾತ್ರಿ 10
9986758555

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೇಕಾಗಿದ್ದಾರೆ
ಮಹಿಳೆಯರ ಉಡುಪು ಹೊಲೆಯುವ ಕೆಲಸಕ್ಕೆ ಅನುಭವ ಹೊಂದಿರುವ ಟೈಲರ್ಸ್ ಮತ್ತು ಕಟ್ಟಿಂಗ್ ಮಾಸ್ಟರ್ಸ್ ಅಗತ್ಯವಿದೆ. ಸಂಪರ್ಕಿಸಿ :
9742132988
7019371878

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಪರ್ಮನೆಂಟ್ ಉದ್ಯೋಗ
ಮೈಸೂರಿನಲ್ಲಿರುವ pvt.limited A.W.G ಕಂಪನಿಯಲ್ಲಿ ಖಾಲಿಯಿರುವ ಪರ್ಮನೆಂಟ್ 127 ಹುದ್ದೆಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, ITI, Diploma any Degree. ವಯೋಮಿತಿ: 18 ರಿಂದ 35 ವರ್ಷ. ತಿಂಗಳಿಗೆ 21,000–26500. (ಉಚಿತ ಊಟ + ವಸತಿ + promotions) ಸ್ಫೂರ್ತಿ
9886479489

ಬೇಕಾಗಿದ್ದಾರೆ
ಕೊರಿಯರ್ಸ್ ಸಂಸ್ಥೆಯಲ್ಲಿ ಈ ಕೆಳಕಂಡ ಶಾಖೆಗಳಲ್ಲಿ N.R ಮೊಹಲ್ಲಾ, ಉದಯಗಿರಿ ಹಾಗೂ ಶಾರದದೇವಿ ನಗರದಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಅಥವಾ ಮಹಿಳೆಯರು ಬೇಕಾಗಿದ್ದಾರೆ. ಶಾಖೆಗೆ ಹತ್ತಿರವಿರುವ ನಿವಾಸಿಗಳಿಗೆ ಮೊದಲ ಆದ್ಯತೆ (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು). ಸ್ಥಳ: ಮೈಸೂರು. ಸಮಯ: ಬೆಳಿಗ್ಗೆ :10 ರಿಂದ ಸಂಜೆ: 6ರವರೆಗೆ
9449871790

ಬೇಕಾಗಿದ್ದಾರೆ-Telecallers
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ Salary + Incentive ಜಗನ್ಮೋಹನ ಅರಮನೆ ಹತ್ತಿರ
7406998821

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

HOME LOANS
CORPORATION, MUDA, KHB GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಅಡಿಗೆಯವರು ಬೇಕಾಗಿದ್ದಾರೆ
ಮನೆಯಲ್ಲಿ ರುಚಿ–ಶುಚಿಯಾದ ಸಸ್ಯಹಾರಿ ಮತ್ತು ಮಾಂಸಹಾರಿ ಅಡುಗೆ ಮಾಡಲು ಮಧ್ಯ ವಯಸ್ಸಿನ ಮಹಿಳೆ ಬೇಕಾಗಿದ್ದಾರೆ. ಒಳ್ಳೆಯ ಸಂಬಳ ಕೊಡಲಾಗುವುದು
9148376464

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108048064

WANTED: OFFICE ASSISTANT (FEMALE-part-time) We are looking for an experienced female staff member for a firm in Mysore. (Duty timings-10am.to.2pm)
Handling National Apprenticeship Promotion Scheme (NAPS) paperwork.
- Managing ESIC, PF, and GST/tally documentation.
- roficiency in Hind, English, and Kannada (Speaking).
- Prior experience in administrative/ compliance rol
- email your CV & Photo to:
saikrupa15870@gmail.com;
Whatsapp: 8971460235 Only

SITE FOR SALE
40x60, W/F, MUDA Khata, High Tension Road, Suvarna Nagar, Bogadi. Price: 75 Lakhs.
Contact: 7019769205

WANTED
For Two Wheeler Service Centre
Promoters, Helpers Mechanics and Receptionist
Ph: 8050889993

ಅಡಿಗೆಯವರು ಬೇಕಾಗಿದ್ದಾರೆ
ಮೈಸೂರು ಕುವೆಂಪುನಗರದಲ್ಲಿ ವಾಸವಾಗಿರುವ ದಂಪತಿಗಳಿಗೆ ನುರಿತ ಅಡುಗೆ ಮಾಡುವ ಬ್ರಾಹ್ಮಣ ಮಹಿಳೆ ಬೇಕಾಗಿದ್ದಾರೆ. ಬೆಳಿಗ್ಗೆ 8:30 ರಿಂದ 12:30 ಗಂಟೆ ವರೆಗೆ. ಕೂಡಲೇ ಸಂಪರ್ಕಿಸಿ
9880643198 / 7349793811

WANTED
For Audit Firm in Kuvempunagar
1) Accounts cum Front Office
2) Field Executive
3)Trainee/Interns (Commerce Only)
4) Office Helpers/Attenders
Age: Below 32 years
Mysore & Mandya
Contact: 9482337454

WE ARE HIRING
BILLING EXECUTIVE
DUTY DOCTOR (MBBS/BAMS)
PHARMACIST
HOUSE KEEPING STAFF
SECURITY
Location: Bhanavi Hospital Kuvempunagar, Mysore
Contact: 9972982665

WANTED
Female Customer Care Executive
For a Reputed Matrimony Consultancy
Any Degree/Diploma/PUC, Computer Knowledge Must
9343175000

A leading MNC Company is HIRING
Profile: House wives, Insurance agent Retired persons/NRIs/Teachers, Self employed, Auto mobile distributor
Benifits: Flexible working hours, Earn minimum 50k pm ,Promotion, Reward and recognition, Foreign trips
Contact: Suryakala
9845543874

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತೀಯ ವಧುವರರು ವಿಧುರರು ವಿಧವೆಯರು ವಿಚ್ಛೇಧಿತರು ನೇರ ಸಂಪರ್ಕಿಸಿ
6361740552
9449408551

WANTED
1) BOLERO DRIVER
Age 20 to 35 years
2) SALES BOYS
Contact: SRI SAIRAM FURNITURE, Vijayanagar 2nd stage, Mysore.
PH: 6364697759, 0821-4286890

ತಕ್ಷಣ ಬೇಕಾಗಿದ್ದಾರೆ
ಉಪಗ್ರಹ ಆಧಾರಿತ ರೈತರ ಮಣ್ಣು ಪರೀಕ್ಷೆ ಮಾಡಿಸಲು 10 ಜನ ಫೀಲ್ಡ್ ಎಕ್ಸಿಕ್ಯೂಟಿವ್ಸ್ ಗಳು ಬೇಕಾಗಿದ್ದಾರೆ. ಸ್ಥಳ : ಮೈಸೂರು ಮಂಡ್ಯ ಚಾಮರಾಜನಗರ ಕೊಡಗು ಹಾಸನ. ವಿದ್ಯಾರ್ಹತೆ : PUC & Any Degree. ಸಂಬಳ : 15000 + Incentive 30000 ಗಳಿಸಬಹುದು. ಅನುಭವ ಇರುವವರಿಗೆ ಹೆಚ್ಚಿನ ಆದ್ಯತೆ.
Symcon Foundation Esylyf India Mysore.
9483383590
9591910005

ಕಳೆದಿದೆ
ಸಚಿನ್ ಮನೋಹರ್ ಎಂ, ನಂ.26 NGO ಕಾಲೋನಿ, ರಾಜೇಂದ್ರನಗರ, ಮೈಸೂರು ಇವರು ದಿನಾಂಕ 10–04–2026 ರಂದು ಮೈಸೂರಿನ ಎನ್.ಆರ್.ಮೊಹಲ್ಲಾ, ಎನ್.ಜಿ.ಓ ಕಾಲೋನಿ ಮನೆ ನಂ.26ರ ಸ್ವತ್ತಿಗೆ ಸಂಬಂಧಿಸಿದಂತೆ ಕೆಹೆಚ್‌ಬಿ ವತಿಯಿಂದ ವಿತರಿಸಲ್ಪಟ್ಟ ಮೂಲ ಮಂಜೂರಾತಿ ಪತ್ರವನ್ನು ಜೆರಾಕ್ಸ್ ಮಾಡಿಸಿ ಬರುವಾಗ ಕಳೆದು ಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ :
8147805852

ಹೆಲ್ತ್‌ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮೋಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಸೆಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜು ಪಕ್ಕ, ಮೈಸೂರು
9916908454

ತಕ್ಷಣ ಬೇಕಾಗಿದ್ದಾರೆ
ಹುದ್ದೆ: ಸೆಕ್ಯೂರಿಟಿ ಗಾರ್ಡ್‌ಗಳು (ಭದ್ರತಾ ಸಿಬ್ಬಂದಿ) ವಿದ್ಯಾರ್ಹತೆ: SSLC, ಕೆಲಸದ ಸಮಯ: 12 ಗಂಟೆಗಳ ಡ್ಯೂಟಿ, ಸಂಬಳ: ರೂ.16,000/- ಸೌಲಭ್ಯಗಳು: ESI ಮತ್ತು PF ಸೌಲಭ್ಯ ಲಭ್ಯವಿದೆ. ಕೆಲಸದ ಸ್ಥಳ: ಮೇಟಗಳ್ಳಿ, ಕೂರ್ಗಳ್ಳಿ ಮತ್ತು ಹೆಬ್ಬಾಳ್ ಕೈಗಾರಿಕಾ ಪ್ರದೇಶದ ಹತ್ತಿರ. ಸಂಪರ್ಕಿಸಿ:
9035367083 / 6361548626

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ. ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು. ಸಂಪರ್ಕಿಸಿ:
9916905188

ವಯಸ್ಸಾದವರನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು
ಅನುಭವ ಇರುವ ಹುಡುಗ ಹುಡುಗಿಯರು ಹಾಗು ANM GNM B.Sc Staff ಬೇಕಾಗಿದ್ದಾರೆ. ಸಂಪರ್ಕಿಸಿ:
8123630683

ಬೇಕಾಗಿದ್ದಾರೆ
ಹುಣಸೂರು ಮುಖ್ಯ ರಸ್ತೆ, ಜಡಗನ ಕೊಪ್ಪಲು ಪೆಟ್ರೋಲ್ ಬಂಕ್ ನಲ್ಲಿ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ. Freshers & Experienced, ಸಂಬಳ: ರೂ. 25,000/- ಊಟ ಉಚಿತ, ವಸತಿ ಉಚಿತ. ಸಂಪರ್ಕಿಸಿ:
9663993347 / 9916739611

ಬೇಕಾಗಿದ್ದಾರೆ
ನಮ್ಮ ಕಂಪನಿಗೆ ತಕ್ಷಣ ಅಗತ್ಯವಿರುವವರು: ಹುದ್ದೆ: ಹೆಲ್ಪರ್ (Helper), ವೇತನ: ರೂ. 15,000 – ರೂ. 17,000 ಲಿಂಗ: ಪುರುಷರು ಮಾತ್ರ, ವಿದ್ಯಾರ್ಹತೆ: ಓದಿದ್ದರೂ / ಓದಿಲ್ಲದವರೂ ಅರ್ಜಿ ಹಾಕಬಹುದು. ವಯಸ್ಸು: 20 ರಿಂದ 30 ವರ್ಷ ಕೆಲಸದ ಸ್ಥಳ: ಮೈಸೂರು
9036824741

WANTED
For Cafe
Security Guard cum House Keeping Manager (Min 3 yrs Exp)
Contact: 7022345675

ಬೇಕಾಗಿದ್ದಾರೆ
ಹೊಟೇಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಕಟ್ಟಿಂಗ್ /ಗ್ರೈಂಡಿಂಗ್ ಕೌಂಟರ್ ಮತ್ತು Cook Assistant ಬೇಕಾಗಿದ್ದಾರೆ. Cashier ಬೇಕಾಗಿದ್ದಾರೆ. Washing ಗೆ ಬೇಕಾಗಿದ್ದಾರೆ. ಸಂಪರ್ಕಿಸಿ:
8550074110

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪ್ ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
ಕೋರ್ ಕಟಿಂಗ್, ಸ್ಲಾಬ್ ವಾಲ್ ಕಟಿಂಗ್ ಗ್ಯಾಸ್ ಲೈನ್, ಫ್ಲಾಮಿಂಗ್ ವರ್ಕ್, ನಮ್ಮಲ್ಲಿ ಈ ಎಲ್ಲಾ ಕೆಲಸ ಒಂದೇ ಕಡೆ ಲಭ್ಯವಿದೆ.
6368150462

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು (ರಾತ್ರಿ ಪಾಳಿಗಾಗಿ) ಸ್ಥಳ : 1) ಹಿನಕಲ್, 2) ಪಂಪ್‌ಹೌಸ್, 3) ಹೂಟಗಳ್ಳಿ 4) ಜೆ.ಪಿ.ನಗರ, 5) ಮಂಡಕಳ್ಳಿ ಉಚಿತ ಊಟ/ವಸತಿ/ಇಎಸ್‌ಐ/ಪಿಎಫ್
9242406261/9686422400

SITE FOR SALE
ಬನ್ನೂರು ರಸ್ತೆ–ಲಲಿತಾದ್ರಿಪುರ ಪೊಲೀಸ್ ಬಡಾವಣೆ, ಸಾತಗಳ್ಳಿ ಬಡಾವಣೆಗಳಲ್ಲಿ 30x40, 30x50 ನಿವೇಶನಗಳು ಲಭ್ಯವಿದೆ.
9448447035

ತಕ್ಷಣ ಬೇಕಾಗಿದ್ದಾರೆ
ಬನ್ನೂರು ಹಾಗೂ ಕಿರಗಾವಲು ಈ ಮಧ್ಯದಲ್ಲಿ (ಪುಲಿಯೂರು) ಇರುವ ಕಾರ್ಖಾನೆಗೆ ಸೆಕ್ಯೂರಿಟಿ ಕೆಲಸ ಮಾಡಲು ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕೆಲಸದ ಸಮಯ 8 ಗಂಟೆಗಳು, ಸಂಬಳ : 19500/- ವಾರದ ರಜೆ (04) ಇಎಸ್‌ಐ+ಪಿಎಫ್ ವಾರ್ಷಿಕ ಬೋನಸ್, ಕ್ಯಾಂಟೀನ್ ಸೌಲಭ್ಯವಿರುತ್ತದೆ. (ಬನ್ನೂರು, ಕಿರಗಾವಲು, ಮಳವಳ್ಳಿ, ಮೈಸೂರು) ಗಳಿಗೆ ಹತ್ತಿರವಿರುತ್ತದೆ. ಸಂಪರ್ಕಿಸಿ:
7019378337

ಬೇಕಾಗಿದ್ದಾರೆ
ತೋಟದ ಕೆಲಸಕ್ಕೆ, ವ್ಯವಸಾಯ ತಿಳಿದಿರಬೇಕು, ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಬಿಳಿಕೆರೆ, ಕುಪ್ಪೆ ಹತ್ತಿರ
9448150408

ಬೇಕಾಗಿದ್ದಾರೆ
1. ಲಾರಿ ಡ್ರೈವರ್ (ವಯಸ್ಸು 25 ರಿಂದ 50) ಸಂಬಳ : 24000/– RMC ಲಾರಿಗೆ, ಮೈಸೂರು ಹಾಗೂ ಸುತ್ತಮುತ್ತ,
2. ಆಫೀಸ್ ಅಸಿಸ್ಟೆಂಟ್ (MS Word/Excel Kannada Nudi)
3. ಸೆಕ್ಯೂರಿಟಿ ಗಾರ್ಡ್. ಸಂಪರ್ಕಿಸಿ:
9900749104 / 9036745292

ತಕ್ಷಣ ಬೇಕಾಗಿದ್ದಾರೆ
ಇಸ್ಕಾನ್ ಮೈಸೂರಿಗೆ: ಮನೆ ಸ್ವಚ್ಛತೆ-2 ಶೌಚಾಲಯ (ಪುರುಷ)-3
ಮೈಸೂರು ಇಸ್ಕಾನ್ ಹತ್ತಿರದ ನಿವಾಸಿಗಳಿಗೆ ಆದ್ಯತೆ ಸೌಲಭ್ಯ : ಉಚಿತ ಅನ್ನದಾಸೋಹ ಉತ್ತಮ ಸಂಬಳ, ಇಎಸ್‌ಐ, ಪಿಎಫ್ ಇದೆ
ಗಣೇಶ್ : 8496915162
ರಕ್ಷಿತ್ : 6364554306

ಮೈಸೂರು ಮಿತ್ರ 47 – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 27 ಏಪ್ರಿಲ್ 2026

ಹವಾಮಾನ ವೈಪರೀತ್ಯದಿಂದ ನೀರಿಗೆ ಹಾಹಾಕಾರ: ಕೋಡಿ ಶ್ರೀ



ಮದ್ದೂರು, ಏ.26– ಇತ್ತೀಚಿನ ಹವಾಮಾನ ವೈಪರೀತ್ಯದಿಂದ ಮುಂದಿನ ದಿನಗಳಲ್ಲಿ ದೇಶದಲ್ಲಿ ಅನ್ನ, ನೀರಿನ ಹಾಹಾಕಾರದ ಸಮಸ್ಯೆ ಎದುರಾಗಲಿದೆ ಎಂದು ಶ್ರೀ ಕೋಡಿ ಮಠದ ಮಹಾಸಂಸ್ಥಾನದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದರು.

ತಾಲೂಕಿನ ಚಾಮನಹಳ್ಳಿ ಗ್ರಾಮದಲ್ಲಿ ನಡೆದ ಶ್ರೀ ಬಂಡೆ ಶನೇಶ್ವರಸ್ವಾಮಿಯ ಜಾತ್ರಾ ಮಹೋತ್ಸವ ಹಾಗೂ ಮಹಾ ರಾಜಗೋಪುರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ದಿನದಿಂದ ದಿನಕ್ಕೆ ಹವಾಮಾನ ವೈಪರೀತ್ಯದಿಂದ ಪ್ರಕೃತಿಯಲ್ಲಿ ಏರುಪೇರಾಗುತ್ತಿದ್ದು, ಅಪಮೃತ್ಯುಗಳು ಹೆಚ್ಚಾಗಲಿವೆ. ಹೀಗಾಗಿ, ಮುಂದಿನ ದಿನಗಳಲ್ಲಿ ದೇಶದಲ್ಲಿ ಅನ್ನ, ನೀರಿನ ಹಾಹಾಕಾರ ಎದುರಾಗಲಿದ್ದು, ಆದರೆ ಕರ್ನಾಟಕದಲ್ಲಿ ಯಾವುದೇ ರೀತಿಯ ಸಮಸ್ಯೆ ಎದುರಾಗುವುದಿಲ್ಲ ಎಂದರು.

ಚಾಮನಹಳ್ಳಿಯ ಶ್ರೀ ಬಂಡೆ ಶನೇಶ್ವರಸ್ವಾಮಿಯ ಕ್ಷೇತ್ರಕ್ಕೆ ಆಗಮಿಸಿರುವುದು ನನ್ನ ಪುಣ್ಯವಾಗಿದೆ. ಶನೇಶ್ವರಸ್ವಾಮಿಯೂ ಪ್ರತಿಯೊಬ್ಬ ಮನುಷ್ಯನಿಗೂ ಗುರು ಸ್ಥಾನದಲ್ಲಿದ್ದು, ಸರಿ ತಪ್ಪುಗಳನ್ನು ತಿದ್ದಿ ಬುದ್ದಿ ಸನ್ಮಾರ್ಗದಲ್ಲಿ ನಡೆಸಲಿದ್ದಾರೆ. ಈ ಕ್ಷೇತ್ರವು ಮತ್ತಷ್ಟು ಅಭಿವೃದ್ಧಿ ಹೊಂದಲು ದೇವರ ಅನುಗ್ರಹ ಮುಖ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಸಾಕಷ್ಟು ದೈವಾರಾಧನೆಗಳು ನಡೆಯುತ್ತಿರುವ ಪರಿಣಾಮ ಮಳೆ, ಬೆಳೆಯಿಂದ ರಾಜ್ಯದ ಜನರು ದೈವಾರಾಧನೆಯ ಮೂಲಕ ಸಮೃದ್ಧಿ ಜೀವನ ನಡೆಸಲಿದ್ದಾರೆ ಎಂದು ತಿಳಿಸಿದರು.

ಎಲ್ಲಾ ವರ್ಗಗಳ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಶ್ರಮಿಸುತ್ತಿದೆ

ಮದ್ದೂರು, ಏ.26–ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ ಮೂರು ವರ್ಷದ ಅವಧಿಯಲ್ಲಿ ಹೆಚ್ಚಿನ ಅನುದಾನವನ್ನು ಜಿಲ್ಲೆಗೆ ಬಿಡುಗಡೆಗೊಳಿಸುವ ಮೂಲಕ ಎಲ್ಲಾ ವರ್ಗದ ಜನರ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶಿವಪುರದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಪಕ್ಷದ ಕಾರ್ಯಕರ್ತರ, ಮುಖಂಡರ ಸಭೆಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದಿನ ಬಿ.ಜೆ.ಪಿ ಸರ್ಕಾರದ ಅವಧಿಯಲ್ಲಿ ಸ್ಥಗಿತಗೊಂಡಿದ್ದ ಮೈಷುಗರ್ ಸಕ್ಕರೆ ಕಾರ್ಖಾನೆ ಪುನರಾರಂಭ ಮತ್ತು ಪುನಶ್ಚೇತನ ಸಂಬಂಧ ಈಗಾಗಲೇ ನೂರಾರು ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿದ್ದು, ಮುಂದಿನ ದಿನಗಳಲ್ಲಿ ಯಾವುದೇ ತೊಡಕಿಲ್ಲದೇ ಕಾರ್ಖಾನೆ ಕಬ್ಬು ಅರೆಯುವ ಶಾಶ್ವತ ಯೋಜನೆ ರೂಪಿಸಿರುವುದಾಗಿ ಹೇಳಿದರು.

ಈ ಭೂಮಿ ಇರುವವರೆಗೂ ಶಾಶ್ವತವಾಗಿ ಉಳಿಯುವ ಕೃಷಿ ವಿಶ್ವವಿದ್ಯಾನಿಲಯವನ್ನು ಮಂಡ್ಯಕ್ಕೆ ಮಂಜೂರು ಮಾಡಿಸಿದ್ದು, ಇದರಲ್ಲೂ ವಿರೋಧ ಪಕ್ಷದವರು ತಪ್ಪು ಹುಡುಕುವ ಮೂಲಕ ಸಲ್ಲದ ಟೀಕೆಗೆ ಮುಂದಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರ ಸತತ ಪ್ರಯತ್ನದಿಂದಾಗಿ ಸಾಕಷ್ಟು ಯೋಜನೆಗಳನ್ನು ಜಿಲ್ಲೆಗೆ ಮತ್ತು ರಾಜ್ಯಕ್ಕೆ ನೀಡಿದ್ದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ ನೇತೃತ್ವದ ಸರ್ಕಾರ ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಲು ಮೀನಮೇಷ ಎಣಿಸುತ್ತಿರುವುದಾಗಿ ಆರೋಪಿಸಿದರು.

ಲೋಕಸಭೆ ಚುನಾವಣೆ ಸಂದರ್ಭದಲ್ಲಿ ತಾವು ಸಂಸದರಾದರೆ ಮೇಕೆದಾಟು ಯೋಜನೆಯನ್ನು ಕೇವಲ ಐದು ನಿಮಿಷದಲ್ಲಿ ಅನುಮತಿ ಕೊಡಿಸುವುದಾಗಿ ಹೇಳಿಕೆ ನೀಡಿದ್ದ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಎರಡು ವರ್ಷಗಳಾದರೂ ಯಾವುದೇ ಯೋಜನೆಗೆ ಮುಂದಾಗದೆ ಹಾಸನ ಜಿಲ್ಲೆಗೆ ಐ.ಐ.ಟಿ ಕೇಂದ್ರಕ್ಕೆ ಒತ್ತಾಯಿಸುವವರ ಪರ ನಿಂತಿದ್ದಾರೆ ಎಂದು ಮೂದಲಿಸಿದರು.

ಶಾಸಕ ಕೆ.ಎಂ.ಉದಯ ಮಾತನಾಡಿ, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಚಳಿಬಿಟ್ಟು ಕೆಲಸ ಮಾಡುವುದರ ಮೂಲಕ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡುವುದರ ಜತೆಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅಭ್ಯರ್ಥಿಗಳ ಗೆಲುವಿಗೆ ಶಕ್ತಿಮೀರಿ ಶ್ರಮಿಸುವಂತೆ ತಿಳಿಸಿದರೆ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ 1800 ಕೋಟಿ ರೂ.ಗಳ ಹೆಚ್ಚಿನ ಮೊತ್ತ ಅಭಿವೃದ್ಧಿ ಕಾರ್ಯಗಳಿಗೆ ಹರಿದುಬಂದಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಉಪಾಧ್ಯಕ್ಷ ಅಭಿಹಳ್ಳಿ ರಾಮಕೃಷ್ಣ, ಜಿಲ್ಲಾ ಕಿಸಾನ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಆರ್.ಮೋಹನ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚಲುವರಾಜು, ಅಣ್ಣೂರು ರಾಜೀವ್, ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಶಂಕರೇಗೌಡ, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ನಿರ್ದೇಶಕ ಹರೀಶ್‌ಬಾಬು, ಉದ್ಯಮಿ ಹಳ್ಳಿಕೆರೆ ಸತೀಶ್, ಜಿ.ಪಂ ಮಾಜಿ ಅಧ್ಯಕ್ಷ ಸುರೇಶ್‌ಕಂಠಿ, ನಗರಸಭೆ ಮಾಜಿ ಅಧ್ಯಕ್ಷೆ ಕೋಕಿಲಾ ಅರುಣ್ ಇತರರಿದ್ದರು.



ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ, ಮುಖಂಡರ ಸಭೆಗೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಚಾಲನೆ ನೀಡಿದರು.

ಮಾರೇನಹಳ್ಳಿ ಸುತ್ತಮುತ್ತ ಮಣ್ಣು ಮಾರಾಟ ದಂಧೆ : ಗ್ರಾಮಸ್ಥರ ಸಂಕಷ್ಟ





ಅಕ್ರಮವಾಗಿ ಮಣ್ಣು ಸಾಗಿಸುತ್ತಿರುವುದು (ಎಡಚಿತ್ರ) ಬಲಚಿತ್ರದಲ್ಲಿ ಮಣ್ಣನ್ನು ಸಾಗಿಸಿರುವ ಪರಿಣಾಮ ನೆಲ ಬರಡಾಗಿರುವುದನ್ನು ಕಾಣಬಹುದು.

ಕೆ.ಆರ್.ಪೇಟೆ: ತಾಲೂಕಿನಲ್ಲಿ ಬರಪೀಡಿತ ಹೋಬಳಿ ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಸಂತೇಬಾಚ ಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಕೃಷಿ ಭೂಮಿಯ ಮಣ್ಣು ಮಾರಾಟ ದಂಧೆ ವ್ಯಾಪಕವಾಗಿದೆ. ಹೋಬಳಿಯ ಮಾರೇನಹಳ್ಳಿ ಗ್ರಾಮದ ಜನವಸತಿ ಪ್ರದೇಶ ದಲ್ಲಿ ಇಟ್ಯಾಚಿ, ಜೆಸಿಬಿ, ಟಿಪ್ಪರ್‌ಗಳ ಸದ್ದು ಜೋರಾ ಗಿದ್ದು, ಊರಿನ ಜನರ ಮನೆಗಳಿಗೆ ಧೂಳಿನಿಂದ ಆರೋಗ್ಯ ಸಮಸ್ಯೆ ಉಂಟಾಗಿದ್ದು ಪರದಾಡುವಂತಾಗಿದೆ.

ಮಾರೇನಹಳ್ಳಿ ಗ್ರಾಮದಲ್ಲಿ ಮಣ್ಣು ತುಂಬಿಸುತ್ತಿರುವ ಕಾರಣ ಮನೆಯ ಅಡಿಪಾಯಗಳಿಗೆ ತೊಂದರೆಯಾಗಿದೆ. ಕೆಲವೇ ಇಂಚುಗಳ ಅಂತರದಲ್ಲಿ ಮಣ್ಣು ತೆಗೆಯಲಾಗಿದೆ. ಹಿಂಬದಿಯ ಕೊಟ್ಟಿಗೆ ಭಾಗಕ್ಕೆ ತೊಂದರೆಯಾಗಿದೆ. ಭಾರಿ ಟಿಪ್ಪರ್‌ಗಳು ಮಣ್ಣು ತುಂಬಿ ಕೊಂಡು ಓಡಾಡುತ್ತಿರುವ ಕಾರಣ ಪೈಪ್‌ಲೈನ್, ಜೆಜೆಎಂ ಪೈಪ್‌ಲೈನ್‌ಗಳೂ ಒಡೆದು ಹೋಗುತ್ತಿದ್ದು, ಕೃಷಿ ಪೈಪ್‌ಲೈನ್‌ಗಳಿಗೂ ತೊಂದರೆಯಾಗಿದೆ ಎಂದು ಗ್ರಾಮಸ್ಥರು ಆಕ್ರೋಶಿಸಿದರು.

ನಮ್ಮ ಊರಿನಲ್ಲಿ 3ನೇ ಬಾರಿಗೆ ಮಣ್ಣು ತೆಗೆಯುತ್ತಿದ್ದಾರೆ. ಕಳೆದೆರಡು ಬಾರಿ ನಾವು ಯಾರಿಗೂ ದೂರು ನೀಡದೆ ಸುಮ್ಮನಾಗಿದ್ದೆವು. ಗ್ರಾಮಸ್ಥರು ಧೂಳಿನಿಂದ ಪರದಾಡಿ ಆಸ್ಪತ್ರೆಗೆ ಖರ್ಚು ಮಾಡಬೇಕಾಯಿತು. ಈ ಬಾರಿ ನಾವು ತಹಸೀಲ್ದಾರ್‌ಗೆ ದೂರು ನೀಡಿದೆವು. ಆದರೂ ಮಣ್ಣು ತೆಗೆಯುತ್ತಿದ್ದಾರೆ. ಈ ಬಾರಿ ಬಹಳ ದೊಡ್ಡ ಮಟ್ಟದಲ್ಲಿ ತೆಗೆಯುತ್ತಿದ್ದಾರೆ ಎಂದು ಗ್ರಾಮಸ್ಥ ರಾಮೇಗೌಡ ಆರೋಪಿಸಿದರು.

ಕೃಷಿ ಭೂಮಿಯಾದರೂ ವಾಣಿಜ್ಯ ಉದ್ದೇಶಕ್ಕೆ ಮಣ್ಣು ಮಾರಾಟ ಮಾಡುವಂತಿಲ್ಲ ಎಂಬ ನಿಯಮವಿದೆ. ಆದರೂ ಈ ಗ್ರಾಮದಲ್ಲಿ ಜಮೀನು ಖರೀದಿ ಮಾಡಿರುವ ಹಾಸನ ಜಿಲ್ಲೆ ಡಿಂಕ ಗ್ರಾಮದ ಜಗದೀಶ್ ತಮ್ಮ 3 ಎಕರೆ ಜಮೀನಿನಲ್ಲಿ ಇಟ್ಟಿಗೆ ಕಾರ್ಖಾನೆಗೆ ಮಣ್ಣು ಮಾರಾಟ ಮಾಡಿದ್ದಾರೆ. ಅವರು ಮುಂಬೈನಲ್ಲಿ ನೆಲೆಸಿದ್ದು, ಇಲ್ಲಿ ಕೃಷಿಯನ್ನೂ ಮಾಡುತ್ತಿಲ್ಲ. ಹಣದ ಆಸೆಗಾಗಿ ಮಣ್ಣು ಮಾರಾಟ ಮಾಡಿ, ಊರಿನ ಜನರಿಗೆ ಸಂಕಷ್ಟ ತಂದೊಡ್ಡಿದ್ದಾರೆ. ಅವರು ಕೊನೇಪಕ್ಷ ಗುತ್ತಿಗೆಗಾದರೂ ಜಮೀನು ಕೊಟ್ಟು ವ್ಯವಸಾಯ ಮಾಡಿಸಬಹುದಾಗಿತ್ತು ಎಂದು ಗ್ರಾಮದ ಮಂಜೇಗೌಡ ಬೇಸರ ವ್ಯಕ್ತಪಡಿಸಿದರು.

ಕ್ರಮಕ್ಕೆ ಭರವಸೆ: ಜನರಿಗೆ ತೊಂದರೆ ಕೊಟ್ಟು ಮಣ್ಣು ತೆಗೆಯುವಂತಿಲ್ಲ. ನಾವು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಾಗಿ ತಹಶೀಲ್ದಾರ್ ಅಶೋಕ್ ಆಶ್ವಾಸನೆ ನೀಡಿದರು.

ನಾಳೆ ಪಾಂಡವಪುರದಲ್ಲಿ ಜಾ.ದಳ ಕಾರ್ಯಕರ್ತರ ಸಭೆ

ಪಾಂಡವಪುರ: ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ಜನರೊಂದಿಗೆ ಜನತಾದಳ ಕಾರ್ಯಕ್ರಮವು ಇದೇ ಮೇ.7ರಂದು ಪಟ್ಟಣದಲ್ಲಿ ನಡೆಯಲಿದ್ದು ಈ ಸಂಬಂಧ ಸಮಾಲೋಚಿಸುವುದಕ್ಕಾಗಿ ಏ.28ರಂದು ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಟಿಎಪಿಸಿಎಂಎಸ್ ರೈತಸಭಾಂಗಣದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆಯಲ್ಲಿ ಪಕ್ಷದ ಕಾರ್ಯಕರ್ತರ ಪೂರ್ವಭಾವಿ ಸಭೆ ಕರೆಯಾಗಿದೆ ಎಂದು ಜೆಡಿಎಸ್ ಪಕ್ಷದ ಅಧ್ಯಕ್ಷ ಎಸ್.ಎ.ಮಲ್ಲೇಶ್ ತಿಳಿಸಿದರು.



ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಮೇ.7ರಂದು ನಡೆಯಲಿರುವ ಜನರೊಂದಿಗೆ ಜನತಾದಳ ಕಾರ್ಯಕ್ರಮದ ಉದ್ದೇಶದ ಜನರ ವಿಶ್ವಾಸ ಗಳಿಸುವುದಾಗಿದೆ. ಏ.28ರಂದು ನಡೆಯಲಿರುವ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕೆಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಜನರೊಂದಿಗೆ ಜನತಾದಳ ಕಾರ್ಯಕ್ರಮವು ಮೇ.7ರಂದು ನಡೆಯಲಿರುವ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ಪಕ್ಷದ ಅಧ್ಯಕ್ಷರು, ಮುಖಂಡರು ಭಾಗವಹಿಸಲಿದ್ದಾರೆ. ನಮ್ಮ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲ, ಎಲ್ಲರು ಒಟ್ಟಾಗಿದ್ದು ಮುಂದೆ ಬರುವ ಚುನಾವಣೆಗಳನ್ನು ಸಹ ಎಲ್ಲರು ಒಟ್ಟಾಗಿ ಒಗ್ಗಟ್ಟಿನಿಂದ ಎದುರಿಸುತ್ತೇವೆ ಎಂದರು.

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಮಾತನಾಡಿದರು.

ಗೋಷ್ಠಿಯಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಾಡೆಗಿರೀಶ್, ಮಾಜಿ ಅಧ್ಯಕ್ಷ ರಾಮಕೃಷ್ಣೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಪುಟ್ಟಸ್ವಾಮೀಗೌಡ, ಮಾಜಿ ನಿರ್ದೇಶಕ ಪಿ.ಚಲುವರಾಜು, ಪುರಸಭೆ ಮಾಜಿ ಅಧ್ಯಕ್ಷರಾದ ಎಂ.ಗಿರೀಶ್, ಆರ್.ಸೋಮಶೇಖರ್, ಮಾಜಿ ಸದಸ್ಯ ಚಂದ್ರು, ಜಿಲ್ಲಾ ಸಹಕಾರಿ ಯೂನಿಯನ್ ಮಾಜಿ ಅಧ್ಯಕ್ಷ ವಿ.ಎಸ್.ನಿಂಗೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಕೋಡಾಲ ರಾಧಾಕೃಷ್ಣ, ಟಿಎಪಿಸಿಎಂಎಸ್ ನಿರ್ದೇಶಕರಾದ ಹಾರೋಹಳ್ಳಿ ಕೃಷ್ಣ, ಆದರ್ಶ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಲುವೇಗೌಡ, ತಾಪಂ ಮಾಜಿ ಸದಸ್ಯ ಅಲ್ಪಳ್ಳಿ ಗೋವಿಂದಯ್ಯ, ಕ್ಯಾತನಹಳ್ಳಿ ಗವಿಗೌಡ(ಪ್ರವೀಣ್), ಮುಖಂಡರಾದ ಪಟೇಲ್‌ಕೃಷ್ಣ, ರಾಜೇಶ್,ರಾಚಯ್ಯ, ಮಹೇಶ್ ಇದ್ದರು.

ಒಂದನೇ ಪುಟದಿಂದ

ಗುಂಡಿನ ದಾಳಿ

ನಿಯೋಜಿಸಲ್ಪಟ್ಟರು. ಹೊರಭಾಗದಲ್ಲೂ ಭದ್ರತೆ ಅತ್ಯಂತ ಕಠಿಣವಾಗಿತ್ತು. ಹೋಟೆಲ್ ಹೊರಭಾಗದಲ್ಲಿ ನ್ಯಾಷನಲ್ ಗಾರ್ಡ್ ಹಾಗೂ ಇತರ ಅಧಿಕಾರಿಗಳು ಆವರಿಸಿದ್ದರು. ಹೆಲಿಕಾಪ್ಟರ್‌ಗಳ ಮೂಲಕ ಹೆಚ್ಚಿನ ನಿಗಾ ವಹಿಸಲಾಗಿತ್ತು. ಜನಸ್ತೋಮದಲ್ಲಿದ್ದ ಕೆಲವರು ಐದರಿಂದ ಎಂಟು ಗುಂಡಿನ ಸದ್ದುಗಳನ್ನು ಕೇಳಿದ್ದಾಗಿ ತಿಳಿಸಿದರು. ಈ ಔತಣಕೂಟ ಆಯೋಜಿಸಿದ್ದ ಹಿಲ್ಟನ್ ಹೊಟೇಲ್, ಸಾಮಾನ್ಯ ಅತಿಥಿಗಳಿಗೆ ತೆರೆಯಲ್ಪಟ್ಟಿರುತ್ತದೆ. ಹಾಗಾಗಿ ಬಾಲ್‌ರೂಮ್ ಪ್ರದೇಶದ ಮೇಲಷ್ಟೇ ಭದ್ರತೆಯನ್ನು ಕೇಂದ್ರೀಕೃತವಾಗಿತ್ತು. ಹೊಟೇಲ್ ಇತರ ಭಾಗಗಳಲ್ಲಿ ಹೆಚ್ಚಿನ ತಪಾಸಣೆ ಇರಲಿಲ್ಲ. ಬಂಧಿತ ಶಂಕಿತನು ಕೆಲ ದಿನಗಳಿಂದ ಅದೇ ಹೋಟೆಲ್‌ನಲ್ಲಿ ತಂಗಿದ್ದ, ಆತ ಔತಣಕೋಟದ ಆಹ್ವಾನ ಪತ್ರಿಕೆಯನ್ನು ಹೊಂದಿದ್ದ ಎನ್ನಲಾಗಿದೆ. ಇದು ಪೂರ್ವ ಯೋಜಿತ ದಾಳಿಯೇ, ಆತನಿಗೆ ಆಹ್ವಾನ ಪತ್ರಿಕೆ ಸಿಕ್ಕಿದ್ದೇಗೆ ಎಂಬದು ತನಿಖೆಯಲ್ಲಿ ತಿಳಿಯಬೇಕಿದೆ

ಹಿಂದೆಯೂ ಟ್ರಂಪ್ ಹತ್ಯೆಗೆ ವಿಫಲ ಯತ್ನ

ಶ್ವೇತಭವನದ ವರದಿಗಾರರ ಔತಣಕೂಟ ಕಾರ್ಯಕ್ರಮದಲ್ಲಿ ಟ್ರಂಪ್ ಅವರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆಯೇ ಎಂಬುದು ಖಚಿತವಾಗಿಲ್ಲ. ಆದರೆ ಅತೀ ಹೆಚ್ಚು ಭದ್ರತಾ ಬೆದರಿಕೆ ಎದುರಿಸುತ್ತಿರುವ ನಾಯಕರಾಗಿರುವ ಇವರ ಹತ್ಯೆಗೆ ಹಿಂದೆಯೂ ವಿಫಲ ಯತ್ನ ನಡೆದಿದ್ದವು. 2024ರಲ್ಲಿ ಅಮೆರಿಕ ಅಧ್ಯಕ್ಷ ಸ್ಥಾನದ ಚುನಾವಣೆ ಸನಿಹದಲ್ಲಿ ಪೆನ್ಸಿಲ್ವೇನಿಯಾದ ಬಟ್ಲರ್ ಎಂಬಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಟ್ರಂಪ್ ಅವರ ಕಿವಿಗೆ ಗಾಯವಾಗಿ, ಸಾರ್ವಜನಿಕರೊಬ್ಬರು ಸಾವನ್ನಪ್ಪಿದ್ದರು. ದಾಳಿ ನಡೆಸಿದ್ದ ಥಾಮಸ್ ಮ್ಯಾಥ್ಯೂ ಕ್ರೂಕ್ ಎಂಬ 20 ವರ್ಷದ ಯುವಕನನ್ನು ಸೀಕ್ರೆಟ್ ಸರ್ವೀಸ್‌ನ ಭದ್ರತಾ ಸಿಬ್ಬಂದಿ ಸ್ಥಳದಲ್ಲೇ ಹತ್ಯೆ ಮಾಡಿದ್ದರು. ಇನ್ನು ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷರಾದ ಬಳಿಕ ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿ ಟ್ರಂಪ್ ಗಾಲ್ಫ್ ಆಡುವಾಗ ಪೊದೆಯೊಂದರಲ್ಲಿ ಅಡಗಿದ್ದ ಬಂದೂಕುಧಾರಿ ರಾನ್ ವೆಸ್ಲಿರೂತ್‌ನನ್ನು ದಾಳಿಗೂ ಮುನ್ನವೇ ಪತ್ತೆಹಚ್ಚಿ ಬಂಧಿಸುವ ಮೂಲಕ ಅಪಾಯ ತಪ್ಪಿಸಿದ್ದರು. ಇಂತಹ ದುರಂತಗಳಿಗೆ ಯಾವುದೇ ಕಟ್ಟುನಿಟ್ಟಿನ ನಿಯಮಗಳಿಲ್ಲದ ಬಂದೂಕು ನೀತಿಯೇ ಪ್ರಮುಖ ಕಾರಣ ಎನ್ನಲಾಗಿದೆ.

ಸೀಕ್ರೆಟ್ ಸರ್ವೀಸ್ ಅದ್ಭುತವಾಗಿ ಕಾರ್ಯ ನಿರ್ವಹಿಸಿವೆ; ಟ್ರಂಪ್ ಪ್ರಶಂಸೆ

ವಾಷಿಂಗ್ಟನ್: ಸೀಕ್ರೆಟ್ ಸರ್ವಿಸ್ ಮತ್ತು ಕಾನೂನು ಜಾರಿ ಸಂಸ್ಥೆಗಳು ಅದ್ಭುತವಾಗಿ ಕೆಲಸ ಮಾಡಿದ್ದು, ಶಂಕಿತ ದಾಳಿಕೋರನನ್ನು ಬಂಧಿಸಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಶ್ವೇತಭವನದ ಸಮೀಪ ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ವರದಿಗಾರರ ಔತಣಕೂಟದ ವೇಳೆ ನಡೆದ ಗುಂಡಿನ ದಾಳಿಯ ಬಗ್ಗೆ ಟ್ರಂಪ್ ತಮ್ಮ ಟ್ರೂಥ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮೂಲಕ ಪ್ರತಿಕ್ರಿಯಿಸಿ, ಇದು ವಿಭಿನ್ನವಾದ ಸಂಜೆ. ಸೀಕ್ರೆಟ್ ಸರ್ವಿಸ್ ಮತ್ತು ಕಾನೂನು ಜಾರಿ ಸಂಸ್ಥೆಗಳು ಅದ್ಭುತವಾಗಿ ಕೆಲಸ ಮಾಡಿವೆ. ಅತ್ಯಂತ ಧೈರ್ಯದಿಂದ ಹಾಗೂ ವೇಗವಾಗಿ ಪರಿಸ್ಥಿತಿಯನ್ನು ನಿಭಾಯಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಘಟನೆ ನಂತರ ಭದ್ರತಾ ಪ್ರೋಟೋಕಾಲ್ ಪ್ರಕಾರ ಸ್ಥಳವನ್ನು ಖಾಲಿ ಮಾಡಲು ಸೂಚನೆ ಬಂದ ಕಾರಣ ಎಲ್ಲರನ್ನು ಹೊರಗೆ ಕರೆದೊಯ್ಯಲಾಯಿತು. ಕಾರ್ಯಕ್ರಮದಲ್ಲಿದ್ದ ಪ್ರಥಮ ಮಹಿಳೆ, ಉಪಾಧ್ಯಕ್ಷರು ಮತ್ತು ಸಚಿವ ಸಂಪುಟದ ಎಲ್ಲ ಸದಸ್ಯರು ಸುರಕ್ಷಿತರಾಗಿದ್ದಾರೆ. ಶೂಟರ್‌ನನ್ನು ಈಗಾಗಲೇ ಬಂಧಿಸಲಾಗಿದೆ ನಾನು ಕಾರ್ಯಕ್ರಮವನ್ನು ಮುಂದುವರಿಸಲು ಸೂಚಿಸಿದ್ದೇನೆ. ಆದರೆ, ಭದ್ರತೆಯ ದೃಷ್ಟಿಯಿಂದ ಅಂತಿಮ ನಿರ್ಧಾರವನ್ನು ಅಧಿಕಾರಿಗಳ ವಿವೇಚನೆಗೆ ಬಿಟ್ಟಿದ್ದೇನೆ. ಈ ಅರ್ಧೂರಿ ಕಾರ್ಯಕ್ರಮವನ್ನು ಮುಂದಿನ 30 ದಿನಗಳೊಳಗೆ ಮತ್ತೆ ಆಯೋಜಿಸಲಾಗುವುದು ಎಂದು ತಿಳಿಸಿದ್ದಾರೆ.

ರಾಯಭಾರಿಗಳಿಗೆ ಟ್ರಂಪ್ ಕಟ್ಟಾಜ್ಞೆ

ತೆಗೆದುಹಾಕಬೇಕು ನಂತರವೇ ಹೊಸ ಸುತ್ತಿನ ಮಾತುಕತೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಶನಿವಾರ ಸಂಜೆ ಪಾಕಿಸ್ತಾನವನ್ನು ತೊರೆದಿದ್ದಾರೆ ಎಂದು ಇಬ್ಬರು ಪಾಕಿಸ್ತಾನ ಅಧಿಕಾರಿಗಳು ತಿಳಿಸಿದ್ದಾರೆ. ಇರಾನ್ ಸರ್ಕಾರಿ ಸ್ವಾಮ್ಯದ ಐಆರ್‌ಎನ್ಎ ಸುದ್ದಿ ಸಂಸ್ಥೆ ಅರಘ್ಚಿ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಿಂದ ಹಿಂತಿರುಗುವ ಸಾಧ್ಯತೆ ಇದೆ. ಒಟ್ಟಾರೆ ಪಶ್ಚಿಮ ಏಷ್ಯಾ ಸಂಘರ್ಷ ತಡೆಗೆ ನಡೆಯಬೇಕಿದ್ದ ಎರಡನೇ ಸುತ್ತಿನ ಮಾತುಕತೆ ಆರಂಭಕ್ಕೂ ಮುನ್ನವೇ ಮುರಿದು ಬಿದ್ದಂತಾಗಿದ್ದು, ಜಾಗತಿಕ ಬಿಕ್ಕಟ್ಟು ಮುಂದುವರಿಯುವ ಭೀತಿ ಹೆಚ್ಚಾಗಿದೆ.

ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಜಾಗವಿಲ್ಲ

ಸೀಕ್ರೆಟ್ ಸರ್ವಿಸ್ ಪಡೆಯ ಕಾರ್ಯ ಶ್ಲಾಘನೀಯ ಎಂದಿದ್ದಾರೆ. ಪ್ರಜಾಸತ್ತಾತ್ಮಕ ಸಂಸ್ಥೆಗಳು ಅಥವಾ ಮಾಧ್ಯಮ ಸ್ವಾತಂತ್ರ್ಯ ಮೇಲಿನ ಯಾವುದೇ ದಾಳಿಯನ್ನು ಬಲವಾಗಿ ಖಂಡಿಸಬೇಕು ಎಂದು ಬ್ರಿಟನ್ ಪ್ರಧಾನಿ ಕೈರ್ ಸ್ಟಾರ್ಮರ್ ಎಕ್ಸ್‌ನಲ್ಲಿ ತಿಳಿಸಿ ದ್ದಾರೆ. ಹಿಂಸಾಚಾರವು ಒಪ್ಪಲಾಗದ್ದು. ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಜಾಗವಿಲ್ಲ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ರಾಜಕೀಯ ಹಿಂಸಾಚಾರವನ್ನು ಖಂಡಿಸಿರುವ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ, ಎಲ್ಲಾ ಅತಿಥಿಗಳು ಸುರಕ್ಷಿತವಾಗಿರುವ ಸುದ್ದಿ ಕೇಳಿ ಸಮಾಧಾನವಾಯಿತು ಎಂದಿದ್ದಾರೆ. ಟ್ರಂಪ್ ಭಾಗವಹಿಸಿದ್ದ ಭೋಜನ ಕೂಟದಲ್ಲಿ ನಡೆದ ಗುಂಡಿನ ದಾಳಿ ಸುದ್ದಿ ಕೇಳಿ ತೀವ್ರ ಆಘಾತವಾಗಿದೆ. ಅಧ್ಯಕ್ಷ ಟ್ರಂಪ್, ಪ್ರಥಮ ಮಹಿಳೆ ಮತ್ತು ಇತರ ಸುರಕ್ಷಿತವಾಗಿದ್ದಾರೆ ಎಂದು ತಿಳಿದು ನಿರಾಳವಾಯಿತು. ನಾನು ಅವರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಬಯಸುತ್ತೇನೆ ಎಂದು ಪಾಕಿಸ್ತಾನ ಪ್ರಧಾನಿ ಮಂತ್ರಿ ಶೆಹಬಾಜ್ ಷರೀಫ್ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಅಂಚೆ ಮತ ಮರು ಎಣಿಕೆ

279 ಮತಗಳನ್ನು ತಿರಸ್ಕರಿಸಲಾಗಿತ್ತು. ಈ ತಿರಸ್ಕೃತ ಮತಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಮಾಜಿ ಶಾಸಕ ಜೀವರಾಜ್, ಮರು ಎಣಿಕೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ತಿರಸ್ಕೃತ ಅಂಚೆ ಮತಗಳನ್ನು ಮರು ಎಣಿಕೆ ಮಾಡುವಂತೆ ಏಪ್ರಿಲ್ 6 ರಂದು ಐತಿಹಾಸಿಕ ಆದೇಶ ನೀಡಿತ್ತು. ಶೃಂಗೇರಿ ಶಾಸಕರಾಗಿ ಟಿ.ಡಿ.ರಾಜೇಗೌಡ ಆಯ್ಕೆ ಅಸಿಂಧು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಡಿ.ಎನ್.ಜೀವರಾಜ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಹೈಕೋರ್ಟ್ ಪೀಠ, 279 ಅಂಚೆ ಮತಪತ್ರಗಳ ಮರುಪರಿಶೀಲನೆಗೆ ಆದೇಶ ಹೊರಡಿಸಿತ್ತು. ಅಲ್ಲದೆ 2 ವಾರಗಳಲ್ಲಿ ಮರುಪರಿಶೀಲನೆ ನಡೆಸಿ ಫಲಿತಾಂಶ ಪ್ರಕಟಿಸಲು ನಿರ್ದೇಶನ ನೀಡಿತ್ತು. ಆಕ್ಷೇಪ ಸಲ್ಲಿಸಲು ನೀಡಿದ್ದ ಗಡುವು ಏಪ್ರಿಲ್ 20ಕ್ಕೆ ಅಂತ್ಯಗೊಂಡಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮರು ಎಣಿಕೆ ಸಿದ್ಧತೆ ನಡೆಸಿದೆ.

ಏನು ಮಾಡಬೇಕೆಂದು ಅವರಿಗೆ ಗೊತ್ತಿದೆ

ಫ್ಲೆಕ್ಸ್, ಬ್ಯಾನರ್ ಬೇಡ: ಮೇ 15 ರಂದು ನಿಮ್ಮ ಹುಟ್ಟುಹಬ್ಬಕ್ಕೆ ಶುಭ ಸುದ್ದಿ ಸಿಗಬಹುದಾ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ನನ್ನ ಜನ್ಮದಿನದಂದು ಕಾರ್ಯಕರ್ತರು, ಅಭಿಮಾನಿಗಳು ಫ್ಲೆಕ್ಸ್ ಹಾಗೂ ಬ್ಯಾನರ್ ಹಾಕುವಂತಿಲ್ಲ. ಯಾರಾದರೂ ಹಾಕಿದರೆ ಅಂತಹವರ ವಿರುದ್ಧ ಪಾಲಿಕೆ ಮೂಲಕ ಕ್ರಮ ಜರುಗಿಸಲು ಸೂಚಿಸುತ್ತೇನೆ. ಇಷ್ಟವಿದ್ದರೆ ಹಣ ಪಾವತಿಸಿ ಜಾಹೀರಾತು ಕೊಡಬಹುದು. ಆದರೆ, ರಸ್ತೆಯಲ್ಲಿ ಫ್ಲೆಕ್ಸ್ ಹಾಕಿ ರಸ್ತೆಯ ಸೌಂದರ್ಯ ಹಾಳು ಮಾಡಬಾರದು. ಅನಧಿಕೃತವಾಗಿ ಫ್ಲೆಕ್ಸ್ ಹಾಕಿದರೆ ದುಬಾರಿ ದಂಡ ವಿಧಿಸುವಂತೆ ಆಯುಕ್ತರಿಗೆ ಸೂಚಿಸಿದ್ದೇನೆ ಎಂದರು.

ಮಾತುಕೊಟ್ಟಂತೆ ಒಳಮೀಸಲಾತಿ: ಒಳಮೀಸಲಾತಿ ವಿಚಾರವಾಗಿ ಬಿಜೆಪಿ ಟೀಕಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿಯವರ ಕೈಯ್ಯಲ್ಲಿ ಏನೂ ಮಾಡಲು ಆಗಿಲ್ಲ. ಆದರೆ ನಾವೇನು ಮಾತು ಕೊಟ್ಟಿದೆವೋ ಆ ಮಾತಿನ ಪ್ರಕಾರವೇ ನಡೆದಿದ್ದೇವೆ. ಹಿಂದೆ ಶೇ.17 ಮೀಸಲಾತಿ ಇದ್ದಾಗಲೂ ಕೂಡ ನಾವು ಸರಿಯಾಗಿಯೇ ಹಂಚಿಕೆ ಮಾಡಿದ್ದೆವು. ಈಗಲೂ ಯಾವುದೇ ಗೊಂದಲವಾಗದಂತೆ ಬಹಳ ಸರಳವಾಗಿ ಹಂಚಿಕೆ ಮಾಡಲಾಗಿದೆ. ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಬಲ ಹಾಗೂ ಎಡ ಪಂಗಡಗಳಲ್ಲಿತ್ತು. ಅದಕ್ಕೆ ಪರಿಹಾರದ ದಾರಿ ಕಂಡುಕೊಳ್ಳಲಾಗಿದೆ. ಬಲವಿರಲಿ, ಎಡವಿರಲಿ, ಲಂಬಾಣಿ ಇರಲಿ, ಬೋವಿ ಇರಲಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಮೂರ್ನಾಲ್ಕು ದಶಕಗಳ ಸೂಕ್ಷ್ಮ ವಿಚಾರವನ್ನು ನಾವು ಪರಿಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ, ಹಾಗೆಯೇ ಎಲ್ಲರೂ ಒಟ್ಟಾಗಿ ಹೋಗಬೇಕೆಂಬುದು ಆಶಯ ಎಂದು ಅವರು ಹೇಳಿದರು.

ಸೂಪರ್ ಓವರ್‌ನಲ್ಲಿ ನರೈನ್ ಕಮಾಲ್: ಲಕ್ನೋ ಎದುರು ಗೆದ್ದುಬೀಗಿದ ಕೆಕೆಆರ್

ಲಕ್ನೋ, ಏ.26(ವಿವಿಹೆಚ್)– 2026ರ ಐಪಿಎಲ್‌ನ ಮೊದಲ ಸೂಪರ್ ಓವರ್‌ನಲ್ಲಿ ಅತಿಥೇಯ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಪ್ರವಾಸಿ ಕೋಲ್ಕತ್ತಾ ನೈಟ್ ರೈಡರ್ಸ್ ವಿಜಯ ಸಾಧಿಸಿತು. ಲಕ್ನೋ ನೀಡಿದ್ದ 2 ರನ್ ಗುರಿಯನ್ನು ಸರಾಗವಾಗಿ ಬೆನ್ನತ್ತಿದ ಕೆಕೆಆರ್ ಟೂರ್ನಿಯಲ್ಲಿ 2ನೇ ಗೆಲುವು ದಾಖಲಿಸಿತು.



ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಆಟಗಾರರ ಸಂಭ್ರಮ.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ರಿಂಕು ಸಿಂಗ್ ಅವರ ಅರ್ಧಶತಕ (83 ರನ್, 51ಎ, 7ಬೌ, 5ಸಿ) ಬಲದಿಂದ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 155 ರನ್ ಕಲೆಹಾಕಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಲಕ್ನೋ ಕೊನೆಯ ಓವರ್‌ನಲ್ಲಿ 16ರನ್ ಬೇಕಿದ್ದ ವೇಳೆ, ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸುವ ಮೂಲಕ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿ ಪಂದ್ಯವನ್ನು ಟೈ ಮಾಡಿಕೊಂಡಿತು. ಇದರೊಂದಿಗೆ ಮೊದಲ ಸೂಪರ್ ಓವರ್ ಪಂದ್ಯಕ್ಕೆ ಸಾಕ್ಷಿಯಾಯಿತು. ಅದರಂತೆ ಚೇಸಿಂಗ್ ಮಾಡಿದ ಲಕ್ನೋ ಮೊದಲು ಬ್ಯಾಟಿಂಗ್ ಮಾಡಬೇಕಾಯಿತು. ಇತ್ತಂಡಗಳು 3ಜನ ಬ್ಯಾಟರ್ ಹಾಗೂ ತಲಾ ಒಬ್ಬೊಬ್ಬ ಬೌಲರ್‌ಗಳನ್ನು ಹೆಸರಿಸಿ, ಮ್ಯಾಚ್ ರೆಫ್ರಿಗೆ ಮಾಹಿತಿ ನೀಡಿದ ಬಳಿಕ ಸೂಪರ್ ಓವರ್ ನಡೆಯಿತು.

ಲಕ್ನೋ ಬ್ಯಾಟಿಂಗ್: ಸುನೀಲ್ ನರೈನ್ ಅವರ ಸೂಪರ್ ಓವರ್‌ನ ಮೊದಲ ಎಸೆತ ಎದುರಿಸಿದ ನಿಕೋಲಸ್ ಪೂರನ್ ಕ್ಲೀನ್ ಬೌಲ್ಡ್ ಆದರು. ಬಳಿಕ ಬಂದ ನಾಯಕ ಪಂತ್, ಎರಡನೇ ಎಸೆತವನ್ನು ಸಿಂಗಲ್ ಆಗಿ ಬದಲಾಯಿಸಿದರು. ಮೂರನೇ ಎಸೆತ ಎದುರಿಸಿದ ಏಡೆನ್ ಮಾರ್ಕ್ರಂ ಮಿಡ್ ಆನ್‌ಗೆ ಕ್ಯಾಚಿತ್ತು ಪವಿಲಿಯನ್ ಸೇರಿದರು. ಆ ಮೂಲಕ ಲಕ್ನೋ, ಕೆಕೆಆರ್‌ಗೆ 2 ರನ್‌ಗಳ ಗುರಿ ನೀಡಿತು.

ಕೆಕೆಆರ್ ಬ್ಯಾಟಿಂಗ್: ಸೂಪರ್ ಓವರ್‌ನಲ್ಲಿ ಕೆಕೆಆರ್ ಪರ ರಿಂಕು ಸಿಂಗ್ ಹಾಗೂ ರೋಮನ್ ಪೋವೆಲ್ ಬ್ಯಾಟಿಂಗ್ ಇಳಿದರು. ಪ್ರಿನ್ಸ್ ಯಾದವ್ ಅವರ ಮೊದಲ ಎಸೆತ ಎದುರಿಸಿದ ರಿಂಕು ಸಿಂಗ್ ಮಿಡ್ ಆಫ್‌ನ ಪಾಯಿಂಟ್ ಕಡೆಗೆ ಬೌಂಡರಿ ಬಾರಿಸುವ ಮೂಲಕ ಪಂದ್ಯ ಗೆಲ್ಲಿಸಿಕೊಟ್ಟರು.

ಬ್ಯಾಟಿಂಗ್‌ನಲ್ಲಿ 87 ರನ್, ಫೀಲ್ಡಿಂಗ್‌ನಲ್ಲಿ 5 ರೋಮಾಂಚಕ ಕ್ಯಾಚ್ ಹಿಡಿದು ಪಂದ್ಯ ಗೆಲ್ಲಲ್ಲು ಪ್ರಮುಖ ಪಾತ್ರ ವಹಿಸಿದ ರಿಂಕು ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಚಿವ ಡಿ.ಸುಧಾಕರ್ ಸ್ಥಿತಿ ಗಂಭೀರ; ಸತ್ಯ ಮುಚ್ಚಿಡಲಾಗುತ್ತಿದೆ ಎಂದು ಕುಮಾರಸ್ವಾಮಿ ಅನುಮಾನ

ಚಿತ್ರದುರ್ಗ: ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಕೆಲವರು ಇಂತಹ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್ ಇದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾರ್ಮಿಕವಾಗಿ ಹೇಳಿದ್ದಾರೆ. ಚಿತ್ರದುರ್ಗದಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾಗ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಸಚಿವ ಸುಧಾಕರ್ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಆದರೆ ಆಸ್ಪತ್ರೆಯ ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು. ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾರೋ ಪಾಪ. ಯಾವ ಕಾರಣಕ್ಕೆ ಕೆಲ ವಿಷಯ ಮುಚ್ಚಿಟ್ಟಿದ್ದಾರೋ ಗೊತ್ತಿಲ್ಲ. ಆ ವ್ಯಕ್ತಿಯಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಮುಚ್ಚಿಡಲಾಗಿದೆಯೇ ಎಂದು ಅನುಮಾನ ವ್ಯಕ್ತಪಡಿಸಿದರು.



ನಾವು ಇತಿಹಾಸ ನೋಡಿದ್ದೇವೆ ಯಾವ ಕಾರಣಕ್ಕೆ ಮುಂದೂಡುತ್ತಿದ್ದಾರೆ. ಇಂಥಹ ವಿಚಾರಗಳಲ್ಲಿ ನಾನು ಹೆಚ್ಚು ಚರ್ಚೆ ಮಾಡುವುದಿಲ್ಲ. ಆದರೆ ಕೆಲ ವ್ಯಕ್ತಿಗಳು ಇಂತಹ ಸಮಯವನ್ನು ದುರ್ಬಳಕೆ ಮಾಡಿಕೊಳ್ಳುವಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ ಎಂದು ಹೇಳಿದರು. ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಅಹಿಂದ ಸಮಾವೇಶ ನಡೆಸುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕೈ ನಾಯಕರು ಕುರ್ಚಿ ಉಳಿಸಿಕೊಳ್ಳಲು ಅಹಿಂದ ಸಮಾವೇಶ ನಡೆಸುತ್ತಿದ್ದಾರೆ. ಅಹಿಂದ ಸಮುದಾಯದ ಜನ ಏನು ಹೇಳುತ್ತಿದ್ದಾರೆ. ನಮ್ಮ ಭಿಕ್ಷೆಯಿಂದ ಕಾಂಗ್ರೆಸ್‌ಗೆ ಅಧಿಕಾರ ಸಿಕ್ಕಿದೆ ಎನ್ನುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಮಾವೇಶ ಮಾಡುತ್ತಿದ್ದಾರೆ. ಸಮಾವೇಶಕ್ಕೆ ಸಾರ್ವಜನಿಕರ ಹಣವನ್ನೇ ಬಳಸಿ ಮಾಡಿ ಜನ ಸೇರಿಸುತ್ತಾರೆ ಎಂದು ಆರೋಪಿಸಿದರು.

ತವರಿನಲ್ಲೇ ಮುಖಭಂಗ; ಗುಜರಾತ್ ಎದುರು ಸೋತ ಚೆನ್ನೈ

ಚೆನ್ನೈ, ಏ.26(ವಿವಿಹೆಚ್)– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಾಂಘಿಕ ಪ್ರದರ್ಶನ ತೋರಿದ ಗುಜರಾತ್ ಟೈಟನ್ಸ್, ಆತಿಥೇಯ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತು.



ಊರ್ವಿಲ್ ಪಟೇಲ್ ವಿಕೆಟ್ ಕಿತ್ತ ರಬಾಡರನ್ನು ಸಹ ಆಟಗಾರರು ಅಭಿನಂದಿಸಿದರು.

ಇಲ್ಲಿನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಸಿಎಸ್‌ಕೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 158ರನ್ ಗಳಿಸಿತು. ಈ ಮೊತ್ತವನ್ನು ಲೀಲಾಜಾಲವಾಗಿ ಬೆನ್ನತ್ತಿದ ಜಿಟಿ 20 ಎಸೆತಗಳು ಬಾಕಿ ಇರುವಂತೆಯೇ 162 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಸಾಧಾರಣ ಗುರಿ ಬೆನ್ನತ್ತಿದ ಟೈಟನ್ಸ್‌ಗೆ ನಾಯಕ ಶುಭಮನ್ ಗಿಲ್ (33) ಹಾಗೂ ಸಾಯಿ ಸುದರ್ಶನ್ ಜೋಡಿ ಉತ್ತಮ ಆರಂಭ ನೀಡಿತು. ಗಿಲ್ ವಿಕೆಟ್ ಪತನದ ಬಳಿಕ ಸಾಯಿ ಹಾಗೂ ಜಾಸ್ ಬಟ್ಲರ್ ಅಜೇಯ (39) ರನ್ ಗಳಿಸಿದರು. ಇತ್ತ ಆಕರ್ಷಕ ಬ್ಯಾಟಿಂಗ್ ಮಾಡಿದ ಸಾಯಿ, 46 ಎಸೆತಗಳಲ್ಲಿ 7 ಸಿಕ್ಸರ್ ಹಾಗೂ 4 ಬೌಂಡರಿ ಸಹಿತ 87 ರನ್ ಬಾರಿಸಿದರು. ಸಿಎಸ್‌ಕೆ ಪರ ನೂರ್ ಅಹ್ಮದ್ ಹಾಗೂ ಅಕಿಲ್ ಹೊಸೇನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಇಳಿದ ಚೆನ್ನೈ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ತಂಡದ ಮೊತ್ತ 37 ರನ್ ಆಗುವಷ್ಟರಲ್ಲೇ ಅಗ್ರ ಕ್ರಮಾಂಕದ ನಾಲ್ಕು ಮಂದಿ ವಿಕೆಟ್ ಒಪ್ಪಿಸಿದರು.

ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಸಂಜು ಸ್ಯಾಮ್ಸನ್ (11), ಉರ್ವಿಲ್ ಪಟೇಲ್ (4), ಸರ್ಫರಾಜ್ ಖಾನ್ (0) ಹಾಗೂ ಡೆವಾಲ್ಡ್ ಬ್ರೆವಿಸ್ (2) ಬೇಗನೆ ಔಟಾದರು. ಈ ಹಂತದಲ್ಲಿ ನಾಯಕ ಋತುರಾಜ್ ಗಾಯಕವಾಡ್ ಮತ್ತು ಶಿವಂ ದುಬೆ (22 ರನ್) 5ನೇ ವಿಕೆಟ್ 59 ರನ್ ಜೊತೆಯಾಟವಾಡುವ ಮೂಲಕ ಆಸರೆಯಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ನಾಯಕ ಗಾಯಕ್ವಾಡ್ 60 ಎಸೆತಗಳಲ್ಲಿ 6 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 74 ರನ್ ಗಳಿಸಿ ಅಜೇಯರಾಗಿ ಉಳಿದರು. ಜಿಟಿ ಪರ ಕಗಿಸೋ ರಬಾಡ 3 ವಿಕೆಟ್, ಅರ್ಷದ್ ಖಾನ್ 2, ಮೊಹಮ್ಮದ್ ಸಿರಾಜ್, ಮಾನವ್ ಸುತಾರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಗುಂಡು ಹೊಡೆದುಕೊಂಡು ಶಿಕ್ಷಕಿ ಆತ್ಮಹತ್ಯೆ



ಮಡಿಕೇರಿ, ಏ.26–ಸರ್ಕಾರಿ ಶಾಲಾ ಶಿಕ್ಷಕಿಯೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಭಾಗಮಂಡಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಚೇರಂಬಾಣೆ ಸಮೀಪದ ಬೆಂಗೂರು ನಿವಾಸಿ ಅಂಜಪಂಡ ರೋಹಿಣಿ(51) ಎಂಬವರೇ ಆತ್ಮಹತ್ಯೆಗೆ ಶರಣಾದ ಶಿಕ್ಷಕಿ. ಮೃತ ಅಂಜಪಂಡ ರೋಹಿಣಿ ಅವರು ಚೇರಂಬಾಣೆ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು, ಭಾನುವಾರ ಬೆಳಿಗ್ಗೆ 5ಗಂಟೆ ಹೊತ್ತಿನಲ್ಲಿ ಮನೆಯಲ್ಲಿದ್ದ ಒಂಟಿ ನಳಿಕೆ ಬಂದೂಕಿನಿಂದ ಮುಖದ ಭಾಗಕ್ಕೆ ಗುಂಡು ಹೊಡೆದುಕೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗುಂಡಿನ ಶಬ್ದ ಕೇಳಿ ಪಕ್ಕದ ಕೋಣೆಯಲ್ಲಿ ಮಲಗಿದ್ದ ಪತಿ ಕರುಂಬಯ್ಯ ಅವರು ಬಂದು ನೋಡಿದ ಸಂದರ್ಭ ರೋಹಿಣಿ ರಕ್ತದ ಮಡುವಿನಲ್ಲಿ ಬಿದ್ದಿದ್ದು ಅಲ್ಲೇ ಮೃತಪಟ್ಟಿರುವುದು ಕಂಡು ಬಂದಿದೆ. ಮೃತರ ಪತಿ ಕರುಂಬಯ್ಯ ನೀಡಿದ ದೂರಿನ ಮೇರೆಗೆ ಭಾಗಮಂಡಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಸ್ಥಳಕ್ಕೆ ತೆರಳಿ ಕೃತ್ಯಕ್ಕೆ ಬಳಸಿದ್ದ ಒಂಟಿ ನಳಿಕೆ ಬಂದೂಕನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. ಜೀವನದಲ್ಲಿ ಜಿಗುಪ್ಸೆಯೇ ಆತ್ಮಹತ್ಯೆಗೆ ಕಾರಣ ಎನ್ನಲಾಗಿದೆ. ಕೆಲವರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎನ್ನುತ್ತಿದ್ದರೆ, ಜನಗಣತಿ ಕರ್ತವ್ಯದ ಒತ್ತಡದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಕ್ರೀಡೆಯನ್ನು ಸ್ಫೂರ್ತಿದಾಯಕವಾಗಿ ಆಸ್ವಾದಿಸಿ

ಮಡಿಕೇರಿ, ಏ.26–ಕ್ರೀಡೆಯನ್ನು ಅತ್ಯಂತ ಸ್ಫೂರ್ತಿದಾಯಕವಾಗಿ ಆಸ್ವಾದಿಸುತ್ತಾ ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಿ ಎಂದು ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ನಾಪೋಕ್ಲು ಸಮೀಪದ ಕಡಂಗ ಗ್ರಾಮದಲ್ಲಿ ಲಿಮ್ರಾ ಫ್ರೆಂಡ್ಸ್ ಆಯೋಜಿಸಿದ್ದ ದ್ವಿತೀಯ ವರ್ಷದ ಜಿಲ್ಲಾ ಮಟ್ಟದ ಟಿಟ್ಟು ಮೆಮೋರಿಯಲ್ ವಾಲಿಬಾಲ್ ಪಂದ್ಯಾಟದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಕ್ರೀಡಾ ಮನೋಭಾವದಿಂದ ಎಲ್ಲರೊಂದಿಗೆ ಬೆರೆತು, ಕೊಡಗಿನ ವೈಭವವನ್ನು ಎತ್ತಿ ಹಿಡಿಯಬೇಕೆಂದರು. ಕ್ರೀಡೆ ಮಾನಸಿಕ ಹಾಗೂ ದೈಹಿಕ ಸಮತೋಲನಕ್ಕೆ ಸಹಕಾರಿಯಾಗಿದ್ದು, ವಿಶೇಷವಾಗಿ ವಾಲಿಬಾಲ್ ಪಂದ್ಯಾಟ ಅತ್ಯಂತ ಚುರುಕಿನಿಂದ ಕೂಡಿದ ಕ್ರೀಡೆಯಾಗಿದೆ.



ಎಸ್‌ಎಸ್‌ಎಲ್‌ಸಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಶಾಸಕ ಪೊನ್ನಣ್ಣ ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು.

ಕ್ರೀಡೆಯನ್ನು ಕ್ರೀಡಾ ಮನೋಭಾವದಿಂದ ಆಸ್ವಾದಿಸುತ್ತ ಉತ್ತಮ ಬಾಂಧವ್ಯದೊಂದಿಗೆ ಎಲ್ಲರು ಕ್ರೀಡಾಸ್ಫೂರ್ತಿ ಮೆರೆಯಬೇಕೆಂದರು.

ಕಾರ್ಯಕ್ರಮದಲ್ಲಿ ಕಡಂಗ ಗ್ರಾಮದ ಅತೀ ಹೆಚ್ಚು ಅಂಕ ಪಡೆದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳನ್ನು ಲಿಮ್ರಾ ಫ್ರೆಂಡ್ಸ್ ವತಿಯಿಂದ ಶಾಸಕ ಎ.ಎಸ್. ಪೊನ್ನಣ್ಣ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ವಿಜಯ ಪ್ರೌಢಶಾಲಾ ಮೈದಾನದಲ್ಲಿ ನಡೆದ ಜಿದ್ದಾಜಿದ್ದಿಯ ಹೊನಲು ಬೆಳಕಿನ ಫೈನಲ್ ಪಂದ್ಯಾಟದಲ್ಲಿ ಫೋರ್ ಸ್ಟಾರ್ ಎಡಪಾಲ ತಂಡವನ್ನು ಮಣಿಸಿ ಟೀಮ್ ಅನ್ಸಾರಿ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು.

ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಸ್ಮಾಯಿಲ್, ವಿರಾಜಪೇಟೆ ತಾಲೂಕು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ರಫೀಕ್ ಕೊಳುಮಂಡ, ನಿವೃತ್ತ ಸೈನಿಕ ಅಬ್ದುಲ್ ಸಲಾಂ, ಗ್ರಾಪಂ ಮಾಜಿ ಸದಸ್ಯ ಸುಬೈರ್ ಸಿ.ಇ, ಶಾಫಿ ಎಡಪಾಲ, ಬದ್ರಿಯಾ ಮಸೀದಿಯ ಅಧ್ಯಕ್ಷ ಉಸ್ಮಾನ್, ಬಿ.ಕೆ.ಶಫೀಕ್, ಜುನೈದ್ ಸಿ.ಎ, ಅಂದುಜಿ ಮತ್ತಿತರರಿದ್ದರು.

ಮಡಿಕೇರಿಯಲ್ಲಿ ನಾಳೆ ಕೊಡಗು ಜಿಲ್ಲಾ ಬ್ಯಾರಿ ಸಾಹಿತ್ಯ ಸಮ್ಮೇಳನ

ಮಡಿಕೇರಿ, ಏ.26–ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಜಿಲ್ಲಾ 'ಬ್ಯಾರಿ ಸಾಹಿತ್ಯ ಸಮ್ಮೇಳನ'ವು ಕೊಡಗು ಬ್ಯಾರೀಸ್ ವೆಲ್‌ಫೇರ್ ಟ್ರಸ್ಟ್‌ನ ಸಹಯೋಗದೊಂದಿಗೆ ಏ.28ರಂದು ನಗರದಲ್ಲಿ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ಯು.ಹೆಚ್. ಉಮರ್ ತಿಳಿಸಿದರು.

ಬ್ಯಾರಿ ಭಾಷಾ ಹಿರಿಯ ಸಾಹಿತಿ ಬಿ.ಎ. ಷಂಶುದ್ದೀನ್ ಸರ್ವಾಧ್ಯಕ್ಷತೆಯಲ್ಲಿ ಜಿಲ್ಲಾ ಸಮ್ಮೇಳನ ನಡೆಯಲಿದ್ದು, ಬೆಳಗ್ಗೆ 9.30 ಗಂಟೆಗೆ ನಗರದ ಕ್ರೆಸೆಂಟ್ ಶಾಲೆಯಿಂದ ಸಮ್ಮೇಳನ ನಡೆಯುವ ಕಾವೇರಿ ಹಾಲ್ ವರೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಸಲಾಗುತ್ತದೆ. ಬಳಿಕ ಧ್ವಜಾರೋಹಣವನ್ನು ತಾವು ನಡೆಸಲಿರುವುದಾಗಿ ಸುದ್ದಿಗಾರರಿಗೆ ಹೇಳಿದರು.



ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು.ಹೆಚ್. ಉಮರ್ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನವನ್ನು ಬೆಳಿಗ್ಗೆ 10.30ಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ಎಂ.ಫಾರೂಕ್ ಉದ್ಘಾಟಿಸಲಿದ್ದು, ಬಿ.ಎ.ಷಂಶುದ್ದೀನ್ ಸಮ್ಮೇಳನಾಧ್ಯಕ್ಷ ಭಾಷಣದ ಬಳಿಕ ಹಿರಿಯ ಸಾಹಿತಿ ಮತ್ತು ಚಿಂತಕರಾದ ಎಸ್.ಜಿ.ಸಿದ್ದರಾಮಯ್ಯ ಮುಖ್ಯ ಭಾಷಣ ಮಾಡಲಿದ್ದು, ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಮಧ್ಯಾಹ್ನ 2ರಿಂದ 3 ಗಂಟೆಯವರೆಗೆ ಸಮ್ಮೇಳನಾಧ್ಯಕ್ಷರ ಭಾಷಣದ ಮೇಲೆ ನಡೆಯಲಿರುವ ಚರ್ಚಾಗೋಷ್ಠಿಯಲ್ಲಿ ಪತ್ರಕರ್ತ ಹಂಝ ಮಲಾರ್, ಶಾಹೀನ್ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ತೌಸೀಫ್ ಅಹ್ಮದ್, ಸೋಮವಾರಪೇಟೆ ಸರ್ಕಾರಿ ವೈದ್ಯ ಡಾ.ಆಫ್ರೀನ್ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 3ರಿಂದ 4 ಗಂಟೆಯವರೆಗೆ ಇ.ಸುಲೇಮಾನ್ ಅವರ ಅಧ್ಯಕ್ಷತೆಯಲ್ಲಿ ಬ್ಯಾರಿ ಕವಿಗೋಷ್ಠಿ ನಡೆಯಲಿದೆ ಎಂದು ವಿವರಿಸಿದರು.

ಸಂಜೆ 4.30 ಗಂಟೆಗೆ ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ಸಮಾರೋಪ ಸಮಾರಂಭವನ್ನು ಉದ್ಘಾಟಿಸುವರು. ಶಾಸಕ ಡಾ.ಮಂತರ್ ಗೌಡ ಸಮ್ಮೇಳನದ ಅಂಗವಾಗಿ ನಡೆದ ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಿದ್ದು, ಶಾಸಕ ಎ.ಎಸ್. ಪೊನ್ನಣ್ಣ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಇದೇ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 11 ಮಂದಿ ಸಾಧಕರನ್ನು ಸನ್ಮಾನಿಸಲಾಗುತ್ತದೆ. ಸಮ್ಮೇಳನದ ವಿಶೇಷ ಆಕರ್ಷಣೆಯಾಗಿ ದಫ್, ಒಪ್ಪನೆ ಪಾಟ್, ಕೋಲ್ಕಲಿ, ಬ್ಯಾರಿ ಹಾಡುಗಳ ಸಂಭ್ರಮ ಮತ್ತು ಬ್ಯಾರಿ ಪ್ರಹಸನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಐ. ಮುನೀರ್ ಅಹಮದ್ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ಸ್ವಾಗತ ಸಮಿತಿ ಉಪಾಧ್ಯಕ್ಷರಾದ ಎಂ.ಎ.ನಾಸಿರ್ ಅಹಮದ್, ಕಲೀಮ್ ಅಹಮದ್, ಕಾರ್ಯದರ್ಶಿ ಅಬ್ದುಲ್ಲಾ ಮಡಿಕೇರಿ ಉಪಸ್ಥಿತರಿದ್ದರು.

ಸೌದೆ ಕೊಟ್ಟಿಗೆಯಲ್ಲಿದ್ದ ನಾಗರ ಹಾವು ಸೆರೆ

ಮಡಿಕೇರಿ, ಏ.26–ವಿರಾಜಪೇಟೆ ಸಮೀಪದ ಅಂಬಟ್ಟಿ ಗ್ರಾಮದ ಮನೆಯೊಂದರ ಹಿಂಭಾಗದಲ್ಲಿ ಸೌದೆ ಕೊಟ್ಟಿಗೆಯಲ್ಲಿ ಅವಿತಿದ್ದ ನಾಗರ ಹಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಅರಣ್ಯಕ್ಕೆ ಬಿಡಲಾಗಿದೆ. ಶನಿವಾರ ರಾತ್ರಿ ವೇಳೆ ಮನೆಯವರು ಸೌದೆ ಕೊಟ್ಟಿಗೆಗೆ ತೆರಳಿದ ಸಂದರ್ಭ ಮನೆಯ ಹಿಂಭಾಗದಲ್ಲಿ ಕೋಳಿ ಮೊಟ್ಟೆ ಸೇವಿಸಿ ನಾಗರ ಹಾವೊಂದು ಅವಿತುಕೊಂಡಿರುವುದು ಕಂಡು ಬಂದಿದೆ. ಇದನ್ನು ಕಂಡು ಮನೆ ಮಂದಿ ಗಾಬರಿಂಯಾಗಿ ತಕ್ಷಣವೇ ಅಂಬಟ್ಟಿಯ ಸ್ನೇಕ್ ಸತೀಶ್ ಅವರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ.



ಸ್ನೇಕ್ ಸತೀಶ್ ಹಾವನ್ನು ಸುರಕ್ಷಿತವಾಗಿ ಸೆರೆ ಹಿಡಿಯುತ್ತಿರುವುದು.

ಸ್ಥಳಕ್ಕಾಗಮಿಸಿದ ಸ್ನೇಕ್ ಸತೀಶ್ ಹಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಚೀಲದಲ್ಲಿ ತುಂಬಿ ಮಾಕುಟ್ಟ ಅರಣ್ಯಕ್ಕೆ ಬಿಟ್ಟಿದ್ದಾರೆ

ಕೂಡಿಗೆಯ ಫ್ರೆಂಡ್ಸ್ ಸಂಘದಿಂದ ಸ್ವಚ್ಛತಾ ಕಾರ್ಯ



ಕೂಡಿಗೆಯ ಫ್ರೆಂಡ್ಸ್ ಸಂಘದ ಕಾರ್ಯಕರ್ತರು ಸ್ವಚ್ಛತಾ ಕಾರ್ಯ ನಡೆಸಿದರು.

ಮಡಿಕೇರಿ: ಕೂಡಿಗೆಯ ಫ್ರೆಂಡ್ಸ್ ಸಂಘದ ವತಿಯಿಂದ ಕೂಡಿಗೆಯ ರೇಷ್ಮೆ ಕೃಷಿ ಇಲಾಖೆ ಡಯಟ್ ಮೈದಾನ ಸುತ್ತ ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.

ಕೂಡಿಗೆ ಡಯಟ್ ಮೈದಾನದ ಸುತ್ತಲೂ ಕಾಡು ಗಿಡ ಗಂಟಿಗಳು ಬೆಳೆದು ನಿಂತು ಸಾರ್ವಜನಿಕರು ಬೆಳಗ್ಗೆ ವಾಕಿಂಗ್ ಹೋಗಲು ತೊಂದರೆಯಾಗುತ್ತಿತ್ತು. ಈ ಮಾಹಿತಿ ಅರಿತ ಕೂಡಿಗೆ ಫ್ರೆಂಡ್ಸ್ ಸಂಘದ ಅಧ್ಯಕ್ಷ ಸರ್ಕಲ್ ಮಂಜು ನೇತೃತ್ವದಲ್ಲಿ ಯುವಕರು ಜೊತೆಗೂಡಿ ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯ ಕೈಗೊಂಡರು. ಕೂಡಿಗೆ ಫ್ರೆಂಡ್ಸ್ ಸಂಘದ ಅಧ್ಯಕ್ಷ ಸರ್ಕಲ್ ಮಂಜು, ಚೌಡಮ್ಮ ತಾಯಿ ದೇವಾಲಯ ಸಮಿತಿ ಅಧ್ಯಕ್ಷ ರವಿ ಪಕ್ಷಿ, ವಿಶುಕುಮಾರ್, ಅಜೀಜ್, ಸಾಗರ್, ಸಂತೋಷ್ ಗೌಡ, ಸೆಲ್ವಕುಮಾರ್, ಪ್ರಶಾಂತ್, ಕಿರಣ್, ಅವಿನಾಶ್, ಪರಮೇಶ್, ಕೂಡಿಗೆ ಫ್ರೆಂಡ್ಸ್ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಕೂಡಿಗೆ ಫ್ರೆಂಡ್ಸ್ ಅಧ್ಯಕ್ಷ ಸರ್ಕಲ್ ಮಂಜು ಮಾತನಾಡಿ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಮುಂದಿನ ದಿನಗಳಲ್ಲಿ ಇತ್ತ ಗಮನ ಹರಿಸಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಬೇಕು. ಇಲ್ಲಿ ಸಿ.ಸಿ ಕ್ಯಾಮೆರಾ ಅಳವಡಿಸಬೇಕು. ಪೊಲೀಸ್ ಇಲಾಖೆ ಸಂಜೆ ಸಮಯದಲ್ಲಿ ಇಲ್ಲಿಗೆ ಭೇಟಿ ನೀಡಿ ಅನೈತಿಕ ಚಟುವಟಿಕೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ದೊಡ್ಡಮ್ಮ ದೇವಾಲಯ ಸಮಿತಿಯ ಅಧ್ಯಕ್ಷ ರವಿ ಪಕ್ಷಿ ಮಾತನಾಡಿ, ಕೂಡಿಗೆ ಡಯಟ್ ಮೈದಾನದ ಸುತ್ತ ಕಾಡು ಗಿಡ ಗಂಟಿಗಳು ಬೆಳೆದು ವಾಕಿಂಗ್‌ಗೆ ತೆರಳುವವರು ತೊಂದರೆ ಅನುಭವಿಸುವಂತಾಗಿತ್ತು. ಅಲ್ಲದೇ ಇದೇ ಜಾಗದಲ್ಲಿ ಕೆಲವು ಪುಂಡ ಪೋಕರಿಗಳು ಮದ್ಯ ಸೇವಿಸಿ ಬಾಟಲಿಗಳು ಹಾಗೂ ತ್ಯಾಜ್ಯ ವಸ್ತುಗಳನ್ನು ಇಲ್ಲೇ ಎಸೆದು ತೆರಳುತ್ತಾರೆ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಇಲ್ಲಿ ಸಿ.ಸಿ ಕ್ಯಾಮೆರಾ ಅಳವಡಿಸಬೇಕು ಎಂದು ಒತ್ತಾಯಿಸಿದರು.

ಕೊಡವ ಸೌಹಾರ್ದ ಸಹಕಾರಿ ಸಂಸ್ಥೆಯಲ್ಲಿ ಶೇ.97ರಷ್ಟು ಸಾಲ ವಸೂಲಾತಿ

ವಿರಾಜಪೇಟೆ,ಏ.26–ಕೊಡವ ಸೌಹಾರ್ದ ಸಹಕಾರಿ ಸಂಸ್ಥೆಯ 2025–26ನೇ ಸಾಲಿನ ವಾರ್ಷಿಕ ವಹಿವಾಟು 42 ಕೋಟಿ ರೂ. ಗಳಾಗಿದೆ ಎಂದು ಸಹಕಾರಿ ಸಂಸ್ಥೆಯ ಅಧ್ಯಕ್ಷ ನೆಲ್ಲಮಕ್ಕಡ ಪಿ. ಉಮೇಶ್ ಮುತ್ತಣ್ಣ ಹೇಳಿದರು.

ಈ ಸಹಕಾರಿಯಲ್ಲಿ ನೆಫ್ಟ್, ಆರ್.ಟಿ ಜಿ.ಎಸ್. ನಂತಹ ಕ್ಯಾಶ್‌ಲೆಸ್ ಬ್ಯಾಂಕಿಂಗ್ ಸೇವೆಗಳು ಲಭ್ಯ ಇದ್ದು ಸದಸ್ಯರುಗಳು ಹಾಗೂ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ವಾರ್ಷಿಕ ಮುಕ್ತಾಯದ ಅವಧಿಗೆ ಶೇ 97ರಷ್ಟು ಸಾಲಾ ವಸೂಲಾತಿ ಆಗಿರುತ್ತದೆ ಎಂದು ಸುದ್ಧಿಗೋಷ್ಠಿಯಲ್ಲಿ ಹೇಳಿದರು.



ಕೊಡವ ಸೌಹಾರ್ದ ಸಹಕಾರಿ ಸಂಸ್ಥೆಯ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ನಿವೃತ ಯೋಧರು ಹಾಗೂ ಹಾಲಿ ಯೋಧರುಗಳು ಕೊಡವ ಸೌಹಾರ್ದ ಸಹಕಾರಿಯಲ್ಲಿ ಸದಸ್ಯತ್ವವನ್ನು ಹೊಂದಿದ್ದರೆ, ಅವರುಗಳಿಗೆ ನಮ್ಮ ಬ್ಯಾಂಕಿನಲ್ಲಿ ಹೂಡುವ ಠೇವಣಿಗಳಿಗೆ ಹೆಚ್ಚಿನ ಬಡ್ಡಿ ಹಾಗೂ ಇವರುಗಳು ಸಾಲ ಪಡೆವ ಸಂದರ್ಭದಲ್ಲಿ ಸಾಮಾನ್ಯ ಬಡ್ಡಿ ದರಕ್ಕಿಂತ ಹೆಚ್ಚಿನ ರಿಯಾಯಿತಿ ನೀಡಲಾಗುತ್ತಿದೆ. ಈ ಸಾಲಿನಿಂದ ಸೈನಿಕರ ವಿಧವೆಯರಿಗೂ ಈ ವಿಶೇಷ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಸಂಸ್ಥೆಯ ಉಪಾಧ್ಯಕ್ಷ ಚೇಂದಂಡ ವಸಂತ್ ಕುಮಾರ್, ನಿರ್ದೇಶಕರಾದ ವಾಂಚಿರ ನಾಣಯ್ಯ, ವಾಟೇರಿರ ಪೂವಯ್ಯ, ಚೇಂದ್ರಿಮಾಡ ನಂಜಪ್ಪ, ನೆಲ್ಲಚಂಡ ಭೀಮಯ್ಯ ಕಾಂಡಂಡ ಚರ್ಮಣ, ಐನಂಡ ಗಣಪತಿ, ಕೇಳಪಂಡ ವಿಶ್ವನಾಥ್, ಕಾಳೇಂಗಡ ಬಿ ತಿಮ್ಮಯ್ಯ, ಬೊಳ್ಯಪಂಡ ಸುರೇಶ್, ಕೊಂಗಂಡ ನಾಣಯ್ಯ, ಮೇಕೇರಿರ ಪಾಲಿ ಸುಬ್ರಮಣಿ, ಪಟ್ಟಡ ದಿವ್ಯಾ, ಕಾರ್ಯನಿರ್ವಹಣಾಧಿಕಾರಿ ಪಟ್ಟಡ ಟೀನಾ ಉಪಸ್ಥಿತರಿದ್ದರು.

ಕಾಡಂಡ ತಂಡಕ್ಕೆ ಹ್ಯಾಟ್ರಿಕ್ ಜಯ

ಮಡಿಕೇರಿ: ನಾಪೋಕ್ಲುವಿನ ಕೆಪಿಎಸ್ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ಚೇಯಕಪೂವಂಡ ಕುಟುಂಬ ಆಯೋಜಿತ 5ನೇ ವರ್ಷದ ಕೊಡವ ಕೌಟುಂಬಿಕ ಕೇರ್ ಬಲಿ ನಮ್ಮೆ(ಹಗ್ಗಜಗ್ಗಾಟ)ಯ ಫೈನಲ್ ಪಂದ್ಯಾಟದಲ್ಲಿ– ಮುಕ್ಕಾಟ್ಟಿರ (ಹರಿಹರ), ಕಾಂಡಂಡ, ಅಜ್ಜಮಾಡ ಕುಟುಂಬ ತಂಡಗಳು ಜಯ ಸಾಧಿಸುವ ಮೂಲಕ ಚೇಯಕ ಪೂವಂಡ ಕಪ್ಪನ್ನು ತನ್ನದಾಗಿಸಿಕೊಂಡಿದೆ. **ಹಸ್ತಾಂತರ** : ಇಂಡಿಯನ್ ಬುಕ್ ಆಫ್ ರೆಕಾರ್ಡ್‌ನ ಅಧಿಕಾರಿ ಸಮೀಮ್ ರಝಿಕ್, ಚೇಯಕ ಪೂವಂಡ ಕೇರ್ ಬಲಿ ನಮ್ಮೆಯನ್ನು ಇಂಡಿಯನ್ ಬುಕ್ ಆಫ್ ರೆಕಾರ್ಡ್‌ಗೆ ಸೇರಿಸಿದ ಸರ್ಟಿಫಿಕೇಟ್ ಹಸ್ತಾಂತರಿಸಿದರು.

ಸಂತ ಫ್ರಾನ್ಸಿಸ್ ಅಸ್ಸಿಸಿ ಶಾಲೆಗೆ ಶೇ.98ರಷ್ಟು ಫಲಿತಾಂಶ

ಕೊಳ್ಳೇಗಾಲ: 2025–26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೊಳ್ಳೇಗಾಲದ ಸಂತ ಫ್ರಾನ್ಸಿಸ್ ಅಸ್ಸಿಸಿ ಪ್ರೌಢಶಾಲೆಗೆ ಶೇ.97.93% ಫಲಿತಾಂಶ ಲಭಿಸಿದೆ.



ಪದ್ಮಾವತಿ



ಅನುಷ

ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದ 97 ವಿದ್ಯಾರ್ಥಿಗಳ ಪೈಕಿ 95 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ಬರೆದ 70 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪದ್ಮಾವತಿ. ಆರ್ 603 ಮತ್ತು ಅನುಷ. ಎಂ–601, ವೃತಿಕ ಜಿ–576 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಅನುಷ.ಎಂ ಮತ್ತು ಮಹಾಲಕ್ಷ್ಮಿ, ಎಸ್ ಕನ್ನಡ ವಿಷಯಲ್ಲಿ 125ಕ್ಕೆ 125 ಅಂಕ ಪಡೆದಿದ್ದಾಳೆ. ಹಾಗೂ 9 ವಿದ್ಯಾರ್ಥಿಗಳು ಹಿಂದಿ ಭಾಷೆಯಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ. ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು, ಶಾಲಾ ವ್ಯವಸ್ಥಾಪಕರಾದ ಪೂಜ್ಯ ಗುರು ರಾಯಪ್ಪ ಎಂ ಹಾಗೂ ಶಾಲಾ ಮುಖ್ಯಶಿಕ್ಷಕ ಇಗ್ನಾಸಿಮುತ್ತು ಅಭಿನಂದಿಸಿದ್ದಾರೆ.

ಒಳಮೀಸಲಾತಿ: ಸಿಹಿ ಹಂಚಿ ಸಂಭ್ರಮಾಚರಣೆ

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ, ಮುಖ್ಯಮಂತ್ರಿಗಳಿಗೆ ಅಭಿನಂದನೆ



ಚಾಮರಾಜನಗರ: ಪರಿಶಿಷ್ಟ ಜಾತಿಯಲ್ಲಿನ ಗ್ರೂಪ್ 'ಎ' ಗೆ ಶೇ 5.25ರಷ್ಟು, ಗ್ರೂಪ್ 'ಬಿ'ಗೆ ಶೇ 5.25ರಷ್ಟು ಮತ್ತು ಗ್ರೂಪ್ 'ಸಿ'ಗೆ ಶೇ 4.5ರಷ್ಟು ಒಳಮೀಸಲಾತಿ ನೀಡಲು ರಾಜ್ಯ ಸರ್ಕಾರದ ವಿಶೇಷ ಸಚಿವ ಸಂಪುಟದ ಸಭೆಯು ಒಮ್ಮತದ ನಿರ್ಧಾರ ಕೈಗೊಂಡಿರುವು ದನ್ನು ಸ್ವಾಗತಿಸಿ ನಗರದಲ್ಲಿ ಕರ್ನಾಟಕ ಮಾದಾರ ಮಹಾಸಭಾ ಜಿಲ್ಲಾ ಸಮಿತಿ ವತಿಯಿಂದ ಸಂಭ್ರಮಾಚರಣೆ ನಡೆಸಿದರು.

ನಗರದ ಜಿಲ್ಲಾಡಳಿತ ಮುಂಭಾಗದಲ್ಲಿ ಕರ್ನಾಟಕ ಮಾದಾರ ಮಹಾಸಭಾ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ಅವರ ನೇತೃತ್ವದಲ್ಲಿ ಸಮಾವೇಶ ಗೊಂಡ ಸಂಘದ ಪದಾಧಿಕಾರಿಗಳು ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸರ್ಕಾರ, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಮುದಾಯ ಸಚಿವರು, ಹೋರಾಟಗಾರ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ನೇತೃತ್ವ ವಹಿಸಿದ ಮಾದಾರ ಮಹಾಸಭಾ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ಮಾತನಾಡಿ, ರಾಜ್ಯದ ಸರ್ವ ಜಾತಿಯ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಶೇಕಡ 15ರ ಮೀಸಲಾತಿಯಲ್ಲಿ ಎಡಗೈ, ಬಲಗೈ ಮತ್ತು ಇತರರಿಗೆ ಹಂಚುವ ನಿರ್ಧಾರ ಸ್ವಾಗತಾರ್ಹ. ಇದು ಸಮಾಜದ ಹಲವು ಹೋರಾಟಗಾರರ ದೀರ್ಘಕಾಲದ ಹೋರಾಟದ ಫಲವಾಗಿದೆ. ಸುಮಾರು 35 ವರ್ಷಗಳ ಶ್ರಮಕ್ಕೆ ನ್ಯಾಯ ದೊರಕಿದಂತಾಗಿದೆ' ಎಂದು ಹರ್ಷ ವ್ಯಕ್ತಪಡಿಸಿದರು.

ಕರ್ನಾಟಕದ ಮಾದಾರ ಮಹಾಸಭಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಾಳ್ಯ ರಾಚಪ್ಪ, ತಾಲೂಕು ಎಂ.ರಾಜು, ಉಪಾಧ್ಯಕ್ಷ ರಾಚಯ್ಯ ರಾಮಸಮುದ್ರ, ಗುಂಡ್ಲುಪೇಟೆ ತಾಲೂಕು ಸಿದ್ದಯ್ಯ ಅಂಕಹಳ್ಳಿ, ಕಾರ್ಯದರ್ಶಿ ರಾಚಯ್ಯ, ಮುಖಂಡರಾದ ಜಯಶಂಕರ್, ಸೋಮಶೇಖರ್, ನಾಗಯ್ಯ ಹೊನ್ನೇಗೌಡಹಳ್ಳಿ, ರಂಗಸ್ವಾಮಿ ಮಾದಾಪುರ, ಡಿ.ಕೆ.ಶಿವ ಕುಮಾರ್, ಕೊತ್ತಲವಾಡಿ ಮಟ್ಟಲಿಂಗಯ್ಯ, ದೊಡ್ಡ ಮಾದಯ್ಯ, ವೆಂಕಟರಾಜು ಕಿಲಗೆರೆ, ರಾಜೇಶ್, ಆರ್.ಕೆ.ಶಿವಕುಮಾರ್, ರಜಿನಿ, ಲಿಂಗಣ್ಣ, ರಾಜಣ್ಣ. ರವೀಶ್, ಮಹದೇವಸ್ವಾಮಿ ಅಮಚವಾಡಿ, ಎಸ್. ಸುನೀಲ್ ಕುಮಾರ್, ನಾರಾಯಣ್ ಇತರರು ಹಾಜರಿದ್ದರು.

ಚಾ.ನಗರದಲ್ಲಿ ತಾಪಮಾನ ಹೆಚ್ಚಳ; ಹೀಟ್ ಸ್ಟ್ರೋಕ್ ವಾರ್ಡ್ ಆರಂಭ

ಚಾಮರಾಜನಗರ, ಏ.26– ಗಡಿ ಜಿಲ್ಲೆ ಚಾಮರಾಜನಗರದ ಇತಿಹಾಸದಲ್ಲಿ ಹಿಂದೆಂದೂ ಕಂಡಿರದಂತಹ ತಾಪಮಾನ ಏರಿಕೆಯಾಗುತ್ತಿದ್ದು, ಸುಡು ಸುಡು ಬಿಸಿಲಿಗೆ ಜನರು ಕಂಗಾಲಾಗಿದ್ದಾರೆ. ಬೆಳಗ್ಗೆ 11ರ ಬಳಿಕ ಜನರು ಮನೆಯಿಂದ ಹೊರಬಾರದಷ್ಟು ಬಿಸಿ ವಾತಾವರಣ ಹೆಚ್ಚಿದ್ದು, ಬಿಸಿ ಗಾಳಿಗೆ ಜನರು ತತ್ತರಿಸಿದ್ದಾರೆ.

ಹೀಟ್ ಸ್ಟ್ರೋಕ್ ವಾರ್ಡ್: ಜಿಲ್ಲೆಯಾದ್ಯಂತ ತಾಪಮಾನ ಹೆಚ್ಚಿರುವ ಹಿನ್ನೆಲೆ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡು

ಗುಂಡ್ಲುಪೇಟೆಯ ತಾಲೂಕು ಆಸ್ಪತ್ರೆಯಲ್ಲಿ ಹೀಟ್ ಸ್ಟ್ರೋಕ್ ಮ್ಯಾನೇಜ್ಮೆಂಟ್ ವಾರ್ಡ್ ತೆರೆದಿದೆ. ಇಲ್ಲಿ 15 ಬೆಡ್‌ಗಳು, ಐಸ್ ಪ್ಯಾಕ್, ಹವಾನಿಯಂತ್ರಿತ ಕೋಣೆ, ಗ್ಲುಕೋಸ್ ದ್ರಾವಣಗಳನ್ನು ಸಂಗ್ರಹಿಸಿಡಲಾಗಿದೆ.

ನಿರ್ಜಲೀಕರಣದಿಂದ ಬಳಲುತ್ತಿರುವವರಿಗೆ ಈ ವಿಶೇಷ ವಾರ್ಡ್‌ನಲ್ಲಿ ಚಿಕಿತ್ಸೆ ನೀಡಲಿದ್ದು, ಮುಂಬರುವ ದಿನಗಳಲ್ಲಿ ಪ್ರತಿ ತಾಲೂಕಿನಲ್ಲೂ ವಿಶೇಷ ಹೀಟ್ ಸ್ಟ್ರೋಕ್ ವಾರ್ಡ್ ತೆರೆಯಲು ಆರೋಗ್ಯ ಇಲಾಖೆ ಮುಂದಾಗಿದೆ.



ಗುಂಡ್ಲುಪೇಟೆಯ ತಾಲೂಕು ಆಸ್ಪತ್ರೆಯಲ್ಲಿನ ಹೀಟ್ ಸ್ಟ್ರೋಕ್ ಮ್ಯಾನೇಜ್ಮೆಂಟ್ ವಾರ್ಡ್

ತಂಪು ಪಾನೀಯಗಳ ಮೊರೆ: ಧಗೆಗೆ ನಲುಗಿರುವ ಜನ ಎಳನೀರು, ತಂಪು ಪಾನೀಯ ಹಾಗೂ ಹಣ್ಣುಗಳ ಕೊಂಡುಕೊಳ್ಳುವಿಕೆಗೆ ಮುಗಿ ಬಿದ್ದಿದ್ದಾರೆ. ಅಲ್ಲದೇ, ಕಲ್ಲಂಗಡಿ, ಸೌತೆಕಾಯಿ, ಪೈನಾಪಲ್, ಪಪ್ಪಾಯ ಹಣ್ಣುಗಳಿಗೂ ಬೇಡಿಕೆ ಹೆಚ್ಚಾಗಿದೆ

ಕಳೆದ ವರ್ಷಕ್ಕಿಂತಲೂ ಈ ಬಾರಿ ಬಿಸಿಲಿನ ತಾಪಮಾನ ಹೆಚ್ಚಾಗಿದೆ. ಜನರು ಮನೆಯಲ್ಲಿ ಇರಲೂ ಸಾಧ್ಯವಾಗುತ್ತಿಲ್ಲ. ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಬಿಸಿಲಿನ ಶಾಖ ಕಡಿಮೆ ಮಾಡಿಕೊಳ್ಳಲು ಜನರು ತಂಪು ಪಾನೀಯ, ಎಳನೀರು ಹಾಗೂ ಹಣ್ಣುಗಳ ಮೊರೆ ಹೋಗುತ್ತಿದ್ದಾರೆ.

ಆರೋಗ್ಯದ ಮೇಲೆ ಪ್ರತಿಕೂಲ: ಅತಿಯಾದ ಬಿಸಿಲಿನಿಂದ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಜನರು ಬೆಳಗ್ಗೆ 11.30 ರಿಂದ ಸಂಜೆ 4ರವರೆಗೆ ಮನೆಯಲ್ಲೇ ಇರಬೇಕು. ಅತೀ ಅವಶ್ಯಕತೆ ಇದ್ದರೆ ಮಾತ್ರ ಹೊರಗೆ ಹೋಗಿ, ಇಲ್ಲದಿದ್ದರೆ ಮನೆಯಲ್ಲೇ ಇರುವುದು ಉತ್ತಮ. ಮನೆಯಿಂದ ಹೊರ ಹೋಗುವ ಸಂದರ್ಭದಲ್ಲಿ ಜೊತೆಯಲ್ಲೇ ಕುಡಿಯುವ ನೀರು ಇರಿಸಿಕೊಳ್ಳಿ. ಹೆಚ್ಚು ನೀರಿನ ಅಂಶ ವಿರುವ ಆಹಾರ ಪದಾರ್ಥಗಳನ್ನು ಸೇವಿಸಿ. ಮಕ್ಕಳನ್ನು ಬಿಸಿಲಿಗೆ ಹೋಗದಂತೆ ನೋಡಿಕೊಳ್ಳಿ ಎಂಬುದಾಗಿ ಜಿಲ್ಲಾಡಳಿತ ಸಲಹೆ ನೀಡಿದೆ.

38 ಡಿಗ್ರಿ ಸೆಲ್ಸಿಯಸ್ ತಾಪಮಾನ: ಈ ಬಾರಿ ಜಿಲ್ಲೆಯಲ್ಲಿ 37 ರಿಂದ 38 ಡಿಗ್ರಿ ಸೆಲ್ಸಿಯಸ್ ತಾಪವಿದ್ದು, ಯಾವಾಗಲೂ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದ ಬಂಡೀಪುರ ಅರಣ್ಯ ಪ್ರದೇಶದಲ್ಲಿ ಗಿಡ–ಮರಗಳು ಈಗ ಎಲೆಗಳನ್ನು ಉದುರಿಸಿಕೊಂಡು ಒಣಗಿ ನಿಂತಿವೆ. ಅತಿಯಾದ ಬಿಸಿಲಿನಿಂದ ಅರಣ್ಯದಲ್ಲಿ ಹಸಿರೇ ಮಾಯವಾಗಿದೆ. ಬಂಡೀಪುರ ಅರಣ್ಯ ಪ್ರದೇಶದ ರಸ್ತೆಗಳಲ್ಲಿ ಹಿಂಡು ಹಿಂಡಾಗಿ ನಿಲ್ಲುತ್ತಿದ್ದ ಜಿಂಕೆಗಳು ಬಿಸಿಲಿನ ಹೊಡೆತಕ್ಕೆ ಎಲ್ಲಿ ಹೋದವು ಎನ್ನುವ ಪ್ರಶ್ನೆ ಪ್ರವಾಸಿಗರನ್ನು ಕಾಡುತ್ತಿದೆ.

ದುಡಿಮೆಗೆ ದಾರಿ ಮಾಡಿಕೊಡುವ ಶಿಕ್ಷಣದತ್ತ ಚಿತ್ತ ಹರಿಸಿ

ಬೆಳ್ಳಿಹಬ್ಬದ ಅಂಗವಾಗಿ ಗುರುಗಳು ಹಾಗೂ ವಿದ್ಯಾರ್ಥಿಗಳ ಸ್ನೇಹಸಮ್ಮಿಲನ ಸಮಾರಂಭ



ಚಾಮರಾಜನಗರದ ನಿಜಗುಣ ರೆಸಾರ್ಟ್ ಸಭಾಂಗಣದಲ್ಲಿ ಚಾಮರಾಜನಗರ ತಾಲ್ಲೂಕಿನ ಚಂದಕವಾಡಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹಿರಿಯ ವಿದ್ಯಾರ್ಥಿಗಳ ಬಳಗದಿಂದ 25 ನೇ ವರ್ಷದ ಬೆಳ್ಳಿಹಬ್ಬದ ಅಂಗವಾಗಿ ನಡೆದ ಗುರುಗಳು ಹಾಗೂ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಸಮಾರಂಭವನ್ನು ಹಿರಿಯ ಉಪನ್ಯಾಸಕರಾದ ಎಂ.ದುಂಡಪ್ಪ ಉದ್ಘಾಟಿಸಿ ಮಾತನಾಡಿದರು.

ಚಾಮರಾಜನಗರ. ಏ.26– ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಶಿಕ್ಷಣ ಪಡೆಯುವುದು ಅತ್ಯಗತ್ಯ, ಶಿಕ್ಷಣ ದುಡಿಮೆಗೆ ದಾರಿಮಾಡಿಕೊಡುತ್ತದೆ ಎಂದು ಹಿರಿಯ ಉಪನ್ಯಾಸಕರಾದ ಎಂ.ದುಂಡಪ್ಪ ಅಭಿಪ್ರಾಯಪಟ್ಟರು.

ನಗರದ ನಿಜಗುಣ ರೆಸಾರ್ಟ್ ಸಭಾಂಗಣದಲ್ಲಿ ತಾಲ್ಲೂಕಿನ ಚಂದಕವಾಡಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹಿರಿಯ ವಿದ್ಯಾರ್ಥಿಗಳ ಬಳಗದಿಂದ 25 ನೇ ವರ್ಷದ ಬೆಳ್ಳಿಹಬ್ಬದ ಅಂಗವಾಗಿ ಗುರುಗಳು ಹಾಗೂ ವಿದ್ಯಾರ್ಥಿಗಳ ಸ್ನೇಹಸಮ್ಮಿಲನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಚಂದಕವಾಡಿ ಪ್ರೌಢಶಾಲೆಯಲ್ಲಿ 25ವರ್ಷಗಳ ಹಿಂದೆ ಓದಿದ ವಿದ್ಯಾರ್ಥಿಗಳು 25 ನೇ ವರ್ಷದ ಬೆಳ್ಳಿಹಬ್ಬ ಆಚರಣೆ ಮಾಡುತ್ತಿರುವುದು ಉತ್ತಮ ಬೆಳವಣಿಗೆ, ಈ ಶಾಲೆಯಲ್ಲಿ ವ್ಯಾಸಂಗ ಮಾಡಿ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಿರುವವರು ಸಮಾಜದಲ್ಲಿ ನೊಂದವರು, ಅಸಹಾಯಕರಿಗೆ ಸಹಾಯಹಸ್ತ ಚಾಚಬೇಕು, ಹಾಗಾದಾಗ ಇಂತಹ ಕಾರ್ಯಕ್ರಮಗಳು ಅರ್ಥಪೂರ್ಣವಾಗಲಿದೆ ಎಂದರು.

ಶಿಕ್ಷಕ ಆರ್.ಮಲ್ಲೇಶ್ ಮಾತನಾಡಿ, ಹಿಂದೆ ಗುರುಗಳು ಹಾಗೂ ಶಿಕ್ಷರ ನಡುವೆ ಅಪಾರಭಾಂದವ್ಯವಿತ್ತು. ಇಂದಿನ ದಿನಮಾನದ ಶಿಕ್ಷಣದಲ್ಲಿ ಇಬ್ಬರ ಬಾಂಧವ್ಯ ಅಷ್ಟಾಗಿಲ್ಲ. ತಮಗೆ ವಿದ್ಯೆ ಕಲಿಸಿಕೊಟ್ಟ ಗುರುಗಳನ್ನು ಕಂಡಾಗ ಮಾತನಾಡಿಸಿ, ಗೌರವ ಕೊಡಬೇಕು, ಜತೆಗೆ ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು, ಸಮಯಪ್ರಜ್ಞೆ ರೂಢಿಸಿಕೊಳ್ಳಬೇಕು ಎಂದರು.

ಶಾಲೆಯ ಹಿರಿಯ ವಿದ್ಯಾರ್ಥಿ ಹಾಗೂ ಗಗನ್ ಮೆಡಿಕಲ್ ಮಾಲೀಕ ಶಿವಕುಮಾರ್ ಮಾತನಾಡಿ, ನಮಗೆ ವಿದ್ಯೆ ನೀಡಿದ ಗುರುಗಳನ್ನು ಮರೆಯಬಾರದು ಎಂಬ ದೃಷ್ಟಿಯಿಂದ ನಮ್ಮದೇ ಆದ ಹಿರಿಯ ವಿದ್ಯಾರ್ಥಿಗಳ ಬಳಗ ಸ್ಥಾಪಿಸಿದ್ದೇವೆ. ಎಲ್ಲ ಹಿರಿಯ ವಿದ್ಯಾರ್ಥಿಗಳು ಪಾಠ ಹೇಳಿಕೊಟ್ಟ ಗುರುಗಳನ್ನು ಅಭಿನಂದಿಸುವ ಸಲುವಾಗಿ ಸ್ನೇಹಸಮ್ಮಿಲನ ಸಮಾರಂಭ ಆಯೋಜನೆ ಮಾಡಿದ್ದೇವೆ, ಮುಂದೆಯು ನಮ್ಮ ಬಳಗದಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಹಿರಿಯ ವಿದ್ಯಾರ್ಥಿಗಳ ಬಳಗದಿಂದ ಶಾಲೆಯ ಹಿರಿಯ ಶಿಕ್ಷಕರನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ಶಿಕ್ಷರಾದ ಬಿ.ಶಿವಕುಮಾರ್, ಉಪನ್ಯಾಸಕ ನಾರಾಯಣಸ್ವಾಮಿ, ದೈಹಿಕ ಶಿಕ್ಷಣಶಿಕ್ಷಕ ಮುದ್ದಪ್ಪ, ಪ್ರಾಂಶುಪಾಲ ಚಂದ್ರಶೇಖರ್, ಹಿರಿಯ ವಿದ್ಯಾರ್ಥಿಗಳ ಬಳಗದ ಕುಮಾರಸ್ವಾಮಿ, ನಾರಾಯಣಸ್ವಾಮಿ, ಬಿ.ಟಿ.ಶ್ರೀನಿವಾಸ್, ರಾಜು, ಎಚ್.ಎನ್.ಮಹೇಶ್, ಉಮೇಶ್, ರಾಜೇಶ್, ರಮೇಶ್ ಹಾಜರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 250 ಮಂದಿಗೆ ಚಿಕಿತ್ಸೆ



ಚಾಮರಾಜನಗರ ತಾಲೂಕಿನ ಆಲೂರಿನಲ್ಲಿ ಡಾ.ಎ.ಬಿ.ನಂಜಪ್ಪಅವರ ಎರಡನೇ ವರ್ಷದ ಸ್ಮರಣಾರ್ಥ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಚಾಮರಾಜನಗರ: ತಾಲೂಕಿನ ಆಲೂರಿನಲ್ಲಿ ಡಾ.ಎ.ಬಿ.ನಂಜಪ್ಪನವರ ಎರಡನೇ ವರ್ಷದ ಸ್ಮರಣಾರ್ಥ ಆಲೂರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ತಾಲೂಕಿನ ಆಲೂರಿನ ಬಸವ ಮಂದಿರದಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಮೈಸೂರು, ಭಾರತೀಯ ವೈದ್ಯಕೀಯ ಸಂಘ, ರೋಟರಿ ಸಂಸ್ಥೆ, ಚಾಮರಾಜನಗರ ತಾಲೂಕು ಔಷಧಿ ವ್ಯಾಪಾರಿಗಳ ಸಂಘ, ವೀರಶೈವ ಲಿಂಗಾಯತ ಸಮಾಜಗಳ ಸಹಯೋಗದಲ್ಲಿ ಡಾ. ಎ.ಬಿ. ನಂಜಪ್ಪ ಅವರ ಎರಡನೇ ವರ್ಷದ ಸ್ಮರಣಾರ್ಥ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 250 ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಅಗತ್ಯವುಳ್ಳವರಿಗೆ ಉಚಿತ ಔಷಧಿ ವಿತರಿಸಲಾಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷೆ ಡಾ.ಡಿ.ಶೀಲಾಕುಮಾರಿ ಡಾ.ಎ.ಬಿ.ನಂಜಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಎ.ಎನ್.ದಿನೇಶ್, ಡಾ. ಬಸವರಾಜೇಂದ್ರ, ಡಾ.ಅಭಿಷೇಕ್, ಡಾ. ಶ್ವೇತ ಬಸವರಾಜೇಂದ್ರ, ಡಾ.ಶಿವಶಂಕರ್, ಡಾ.ಪ್ರದೀಪ್, ಡಾ.ಅಜಯ್ ಕುಮಾರ್ ಜೈನ್, ಡಾ.ಸಹನಾ, ಡಾ. ಚಂದನ್, ರೋಟರಿ ಅಧ್ಯಕ್ಷ ಚಂದ್ರ ಶೇಖರ್, ಎ.ಆರ್.ಚಂದ್ರಪ್ಪ, ಕಾರ್ಯದರ್ಶಿ ನಂದೀಶ್, ಗೌಡಿಕೆ ಶಿವಪ್ಪ, ಬಿರ್ಲಾ ನಾಗರಾಜು, ಎ.ಜೆ.ಸಚಿನ್ ಹಾಜರಿದ್ದರು.

ಮೈಸೂರು ಮಿತ್ರ

ಸ್ನೇಹ ಸಮ್ಮಿಲನ ನಮ್ಮ ಬಾಂಧವ್ಯ ಇನ್ನಷ್ಟು ಗಟ್ಟಿಗೊಳಿಸಲಿ

ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಸೋಸಲೆ ಶಿವಕುಮಾರ್



ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ತಿ.ನರಸೀಪುರ, ಏ.26– ಸ್ನೇಹ ಎಂಬುದು ಕಾಲದ ಪರೀಕ್ಷೆಯನ್ನು ಗೆಲ್ಲುವ ಅಮೂಲ್ಯ ಬಾಂಧವ್ಯ. 50 ವರ್ಷಗಳ ನಂತರವೂ ನಮ್ಮ ಹೃದಯಗಳು ಒಂದಾಗಿರುವುದು ಇದಕ್ಕೆ ಜೀವಂತ ಸಾಕ್ಷಿ ಎಂದು ಸೋಸಲೆ ಸರ್ಕಾರಿ ಶಾಲೆ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಸೋಸಲೆ ಶಿವಕುಮಾರ್ (ಬಡ್ಡು) ತಿಳಿಸಿದರು.

ತಾಲೂಕಿನ ಸೋಸಲೆ ಗ್ರಾಮದಲ್ಲಿ ಆಯೋಜಿಸಿದ್ದ ನಮ್ಮ ನಡಿಗೆ ಆರೋಗ್ಯದ ಕಡೆಗೆ ಹಾಗೂ ಹಳೇ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರಿಗೆ ಗೌರವ ಸಲ್ಲಿಸಿ ಮಾತನಾಡಿದ ಅವರು, ಇಂದು ನಾವು ಸೇರಿರುವ ಈ ಕ್ಷಣ ಕೇವಲ ಒಂದು ಕಾರ್ಯಕ್ರಮವಲ್ಲ. ಇದು 50 ವರ್ಷಗಳ ಸ್ನೇಹದ ಸುವರ್ಣ ಮಹೋತ್ಸವ. ಅರ್ಧ ಶತಮಾನ ಕಳೆದರೂ ನಮ್ಮ ಹೃದಯಗಳಲ್ಲಿ ಶಾಲಾ ದಿನಗಳ ನೆನಪು ಇನ್ನೂ ಹಸಿರಾಗಿವೆ. ಕಾಲವು ನಮ್ಮ ಕೂದಲನ್ನು ಬೆಳ್ಳಗಾಗಿಸಿದ್ದರೂ, ನಮ್ಮ ಮನಸ್ಸಿನ ಸ್ನೇಹದ ಬಣ್ಣವನ್ನು ಮಸುಕಾಗಿಸಲು ಸಾಧ್ಯವಾಗಿಲ್ಲ ಎಂದರು.

ಶಾಲೆಯ ಆ ದಿನಗಳು ನಮ್ಮ ಜೀವನದ ಅತ್ಯಂತ ಸುಂದರ ಅಧ್ಯಾಯ. ಅಲ್ಲಿ ನಾವು ಕೇವಲ ಪಾಠಗಳನ್ನು ಕಲಿತಿಲ್ಲ ಬದಲಿಗೆ ಬದುಕನ್ನು ಕಲಿತೆವು. ಸ್ನೇಹವನ್ನು ಅರಿತೆವು. ಒಗ್ಗಟ್ಟಿನ ಮಹತ್ವವನ್ನು ತಿಳಿದೆವು. ಪರಸ್ಪರ ಸಹಕಾರ, ಗೌರವ ಮತ್ತು ಪ್ರೀತಿಯ ಮೌಲ್ಯಗಳನ್ನು ನಮ್ಮ ಗುರುಗಳು ನಮ್ಮೊಳಗೆ ಬಿತ್ತಿದರು. ಶಾಲೆಯ ಆ ಆವರಣ, ತರಗತಿಯ ಆ ಕುರ್ಚಿಗಳು, ಶಿಕ್ಷಕರ ಮಾರ್ಗದರ್ಶನ, ಸ್ನೇಹಿತರೊಡನೆ ಹಂಚಿಕೊಂಡ ಸಂತೋಷದ ಕ್ಷಣಗಳು, ಇವೆಲ್ಲವೂ ನಮ್ಮ ಜೀವನದ ಅತ್ಯಂತ ಅಮೂಲ್ಯ ಸಂಪತ್ತಾಗಿವೆ. 50 ವರ್ಷಗಳ ನಂತರವೂ ನಮ್ಮ ಸ್ನೇಹದ ನಂಟು ಅಷ್ಟೇ ಗಟ್ಟಿಯಾಗಿ ಉಳಿದಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಈ ಸಮ್ಮಿಲನವು ಕೇವಲ ಹಳೆಯ ನೆನಪುಗಳನ್ನು ಮೆಲುಕು ಹಾಕುವ ಸಂದರ್ಭವಲ್ಲ. ಮುಂದಿನ ಪೀಳಿಗೆಗೆ ಸ್ನೇಹ, ಬಾಂಧವ್ಯ ಮತ್ತು ಒಗ್ಗಟ್ಟಿನ ಮಹತ್ವವನ್ನು ಸಾರುವ ಸಂದೇಶವಾಗಿದೆ. ನಾವು ಎಲ್ಲರೂ ಜೀವನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದರೂ, ನಮ್ಮ ಮೂಲವನ್ನು, ನಮ್ಮ ಶಾಲೆಯನ್ನು, ನಮ್ಮ ಸ್ನೇಹಿತರನ್ನು ಎಂದಿಗೂ ಮರೆಯಲಿಲ್ಲ. ಈ ಸುವರ್ಣ ಕ್ಷಣದಲ್ಲಿ ನಮ್ಮನ್ನು ರೂಪಿಸಿದ ಗುರುಗಳನ್ನು ಕೃತಜ್ಞತೆಯಿಂದ ಸ್ಮರಿಸೋಣ. ಅವರು ನೀಡಿದ ಶಿಕ್ಷಣ, ಸಂಸ್ಕಾರ, ಮತ್ತು ಮೌಲ್ಯಗಳೇ ನಮ್ಮ ಬದುಕಿನ ದಾರಿದೀಪವಾಗಿವೆ. ಮುಂದಿನ ದಿನಗಳಲ್ಲಿ ಇದೇ ಸ್ನೇಹ, ಇದೇ ಒಗ್ಗಟ್ಟು, ಇದೇ ಪ್ರೀತಿ ನಮ್ಮೆಲ್ಲರ ನಡುವೆ ಸದಾ ಉಳಿಯಲಿ. ಇಂತಹ ಸಮ್ಮಿಲನಗಳು ನಮ್ಮ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಲಿ ಎಂದು ಆಶಿಸಿದರು.

> ಜೀವನದಲ್ಲಿ ನಾವು ಹಲವು ಸಾಧನೆ ಮಾಡಿದ್ದೇವೆ. ಕೆಲವರು ವೈದ್ಯರು, ಕೆಲವರು ಶಿಕ್ಷಕರು, ಕೆಲವರು ಉದ್ಯಮಿಗಳು, ಕೆಲವರು ಸಮಾಜ ಸೇವಕರು. ಆದರೆ ಈ ಎಲ್ಲಾ ಸಾಧನೆಗಳ ಮೂಲ ನಮ್ಮ ಶಾಲೆಯ ಶಿಕ್ಷಣ ಮತ್ತು ನಮ್ಮ ಶಿಕ್ಷಕರ ಆಶೀರ್ವಾದ. ನಮ್ಮ ಬದುಕಿನ ಅಡಿಪಾಯ ಗಟ್ಟಿಗೊಳಿಸಿದ ಆ ಗುರುಗಳಿಗೆ ಇಂದು ನಾವು ಶಿರಸಾವಹಿಸಿ ನಮಿಸುತ್ತೇವೆ. ನಮ್ಮ ಮುಂದಿನ ಪೀಳಿಗೆಗೆ ನಾವು ನೀಡಬೇಕಾದ ದೊಡ್ಡ ಸಂದೇಶವೇನೆಂದರೆ ಸಂಪತ್ತು, ಸ್ಥಾನಮಾನ, ಸಾಧನೆ ಇವೆಲ್ಲವೂ ಮಹತ್ವದ್ದೇ ಸರಿ. ಆದರೆ ನಿಜವಾದ ಸಂಪತ್ತು ಎಂದರೆ ಸ್ನೇಹ, ಪ್ರೀತಿ ಮತ್ತು ಮಾನವೀಯತೆ. ಈ ಸಮ್ಮಿಲನವನ್ನು ಯಶಸ್ವಿಗೊಳಿಸಿದ ಎಲ್ಲಾ ಸ್ನೇಹಿತರಿಗೆ, ಆಯೋಜಕರಿಗೆ ಹಾಗೂ ಸಹಕರಿಸಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ಇಂತಹ ಕಾರ್ಯಕ್ರಮ ನಮ್ಮ ಸ್ನೇಹವನ್ನು ಮತ್ತಷ್ಟು ಗಟ್ಟಿಗೊಳಿಸಲಿ.
> **–ಸೋಸಲೆ ಶಶಿಕಾಂತ್, ಅಖಿಲ ಕರ್ನಾಟಕ ಪರಿಶಿಷ್ಟ ಮಹಾಸಭಾ ರಾಜ್ಯಾಧ್ಯಕ್ಷ.**

ಗ್ರಾಪಂ ಮಾಜಿ ಸದಸ್ಯ ಮಹೇಶ್ ಕುಮಾರ್ ಮಾತನಾಡಿ, 50 ವರ್ಷಗಳು ಇದು ಕೇವಲ ಒಂದು ಸಂಖ್ಯೆಯಲ್ಲ. ಇದು ನಮ್ಮ ಸ್ನೇಹದ ಬಲ. ನಮ್ಮ ನೆನಪುಗಳ ಆಳ ಮತ್ತು ನಮ್ಮ ಬಾಂಧವ್ಯದ ಅಮರತೆಯ ಸಂಕೇತವಾಗಿದೆ. ಕಾಲ ಬದಲಾಗಿದೆ. ಪರಿಸ್ಥಿತಿಗಳು ಬದಲಾಗಿವೆ. ನಾವು ಜೀವನದ ವಿಭಿನ್ನ ಹಾದಿಗಳಲ್ಲಿ ಸಾಗಿದ್ದೇವೆ. ಆದರೆ ನಮ್ಮ ಶಾಲೆಯ ಆ ದಿನಗಳು, ಆ ಸ್ನೇಹ, ಆ ನಗು, ಆ ಕನಸುಗಳು ಎಂದಿಗೂ ಬದಲಾಗಿಲ್ಲ. ಶಾಲೆಯ ದಿನಗಳಲ್ಲಿ ನಾವು ಹಂಚಿಕೊಂಡ ಆ ಸಂತಸದ ಕ್ಷಣಗಳು ಇಂದು ಮತ್ತೆ ನಮ್ಮ ಮುಂದೆ ಜೀವಂತವಾಗಿ ನಿಂತಿವೆ. ತರಗತಿಯಲ್ಲಿ ನಡೆದ ತುಂಟಾಟಗಳು, ಆಟದ ಮೈದಾನದಲ್ಲಿ ಕಳೆಯುತ್ತಿದ್ದ ಸಮಯ, ಪರೀಕ್ಷೆಯ ಆತಂಕ, ಫಲಿತಾಂಶದ ನಂತರದ ಹರ್ಷ ಈ ಎಲ್ಲ ನೆನಪುಗಳು ನಮ್ಮ ಮನಸ್ಸನ್ನು ಮತ್ತೊಮ್ಮೆ ಬಾಲ್ಯದ ದಿನಗಳಿಗೆ ಕರೆದೊಯ್ಯುತ್ತವೆ ಎಂದರು.

ಈ ವೇಳೆ ನಮ್ಮ ನಡಿಗೆ ಆರೋಗ್ಯದ ಕಡೆಗೆ ಎಂಬ ಘೋಷವಾಕ್ಯದೊಂದಿಗೆ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹಳೇ ವಿದ್ಯಾರ್ಥಿಗಳು ಶಿಕ್ಷಕ–ಶಿಕ್ಷಕಿಯರು ಜಾಥಾದಲ್ಲಿ ಭಾಗವಹಿಸಿದ್ದರು. ಜಾಥಾದಲ್ಲಿ ಆರೋಗ್ಯದ ಮಹತ್ವ, ನಿಯಮಿತ ವ್ಯಾಯಾಮ, ಸಮತೋಲನ ಆಹಾರ ಮತ್ತು ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. 'ನಡೆಯಿರಿ– ಆರೋಗ್ಯ ಉಳಿಸಿರಿ' 'ಆರೋಗ್ಯವೇ ಭಾಗ್ಯ' ಎಂಬ ಘೋಷಣೆಗಳು ಎಲ್ಲರಲ್ಲೂ ಉತ್ಸಾಹ ತುಂಬಿದವು. ಕಾರ್ಯಕ್ರಮದಲ್ಲಿ ಹಿರಿಯ ನಿವೃತ್ತ ಶಿಕ್ಷಕರಾದ ಹಸುವಟ್ಟಿ ಸಣ್ಣ ಮಾದಪ್ಪ, ಸೋಸಲೆ ಮಹದೇವಮ್ಮ, ವ್ಯಾಸರಾಜಪುರ ಶ್ರೀದೇವಿರವರನ್ನು ಪುಷ್ಪವೃಷ್ಟಿ ಮೂಲಕ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅರವಿಂದ, ಸಚ್ಚಿದಾನಂದ, ಮಹೇಶ್ ಕುಮಾರ್, ಶಶಿಕಲ, ನಾಗರಾಜು, ಜ್ಯೋತಿ, ರೇವಮ್ಮ, ಪುಟ್ಟಸ್ವಾಮಿ, ಶಶಿಕಾಂತ್, ಎಸ್.ಸಿ.ಶಿವಕುಮಾರ್, ಚಂದ್ರಶೇಖರ್, ಶ್ರೀಕಾಂತ್, ಪ್ರಕಾಶ್, ನಾಗರಾಜು, ಲೀಲಾವತಿ ಮತ್ತಿತರರಿದ್ದರು.

ವಿಜೃಂಭಣೆಯ ಹುಣಸಮ್ಮ ದೇವಿ ರಥೋತ್ಸವ



ಗಂಧನಹಳ್ಳಿಯಲ್ಲಿ ಹುಣಸಮ್ಮ ದೇವಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಭೇರ್ಯ, ಏ.26– ಕೆಆರ್.ನಗರ ತಾಲೂಕಿನ ಗಂಧನಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆ ಹುಣಸಮ್ಮ ದೇವಿ ರಥೋತ್ಸವ ಸಾವಿರಾರು ಮಹಿಳೆಯರು ತಂಬಿಟ್ಟು ಆರತಿ ಬೆಳಗುವುದರೊಂದಿಗೆ ವಿಜೃಂಭಣೆಯಿಂದ ನಡೆಯಿತು.

ರಥವನ್ನು ಬಗೆ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಇಡೀ ಗ್ರಾಮ ತಳಿರು ತೋರಣಗಳಿಂದ ಹಸಿರುಮಯವಾಗಿತ್ತು. ಎಲ್ಲೆಲ್ಲೂ ತೆಂಗಿನ ಗರಿ, ಮಾವಿನ ಸೊಪ್ಪಿನ ತೋರಣ, ಬಾಳೆ ಕಂದು, ಅಡಿಕೆ ಹೊಂಬಾಳೆ ಕಂಗೊಳಿಸುತ್ತಿದ್ದವು. ತಂಬಿಟ್ಟು ಆರತಿ ಬೆಳಗಿದ ಮುತ್ತೈದೆಯರು ಹಾಗೂ ತವರಿಗೆ ಬಂದ ಹೆಣ್ಣುಮಕ್ಕಳು, ನವ ದಂಪತಿಗಳು ಹಣ್ಣು ಜವನ ಎಸೆದು ತಮ್ಮ ಇಷ್ಟಾರ್ಥ ಈಡೇರಿಸುವಂತೆ ದೇವರಲ್ಲಿ ಪ್ರಾರ್ಥಿಸಿದರು. ಈ ಸಂದರ್ಭ ಯುವಕರ ಸಂಘದ ವತಿಯಿಂದ ಮಜ್ಜಿಗೆ ಪಾನಕ, ಕೋಸಂಬರಿ ವಿತರಣೆ ಮಾಡಲಾಯಿತು.

ರಥೋತ್ಸವದಲ್ಲಿ ಶಾಸಕ ಡಿ.ರವಿಶಂಕರ್, ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಹೇಮಂತ್, ದೊಡ್ಡ ಜಯಮಾನ ಜಿ.ಎನ್.ರಘು, ಶ್ರೀನಿವಾಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ವೆಂಕಟೇಶ್, ಮಂಜುನಾಥ್ ಅರಸ್, ಹರೀಶ್, ಕೆಂಪರಾಜು, ಬೀರೇಶ್, ಶ್ರೀಧರ್, ಜಯರಾಜು, ಹರೀಶ್ ಆಚಾರ್, ಬ್ಯಾಂಕ್ ರವಿ, ವೈಭವ್, ಲೋಹಿತ್, ಪ್ರಸನ್ನ, ತ್ರಿಷಿಕಾ, ರಾಕೇಶ್ ಮಲ್ಲೇಗೌಡ, ಮಧು, ಚಂದನ್, ನಿಂಗರಾಜು, ಎಂ.ಡಿ.ಮಹದೇವ್, ಸುರೇಶ್, ರವಿಶಂಕರ್, ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ



ಡಿ.ಸಾಲುಂಡಿಯಲ್ಲಿ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.

ಮೈಸೂರು, ಏ.26– ತಾಲೂಕಿನ ಡಿ.ಸಾಲುಂಡಿ ಗ್ರಾಮದ ಸ್ನೇಹ ಜೀವಿ ಪ್ರೇಮ್ ಆತ್ಮೀಯರ ಬಳಗದಿಂದ ಡಿ.ಸಾಲುಂಡಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ ಪ್ರೇಮ್ ಕಪ್ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ತಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಉದಯ್ ಕುಮಾರ್ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಜನಪರ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್, ಶ್ರೀರಾಂಪುರ ಪಿಎಸಿಎಸ್ ಅಧ್ಯಕ್ಷ ಮಹದೇವು, ಮೈಸೂರು ಜಿಲ್ಲಾ ದೈಹಿಕ ಶಿಕ್ಷಣ ಸಂಘದ ಅಧ್ಯಕ್ಷ ರವಿ.ಜೆ, ಮಾಜಿ ತಾಪಂ ಉಪಾಧ್ಯಕ್ಷ ಸಿ.ಎಂ.ಸಿದ್ದರಾಮೇಗೌಡ, ಸಮಾಜ ಸೇವಕ ಎಸ್.ಶ್ರೀಕಾಂತ್, ಉದ್ಯಮಿ ಮೋಹಿಯುದ್ದೀನ್, ದೊರೆಸ್ವಾಮಿ, ಮುಖಂಡರಾದ ಚಂದ್ರನಾಯಕ, ಶಿವರಾಜೇಗೌಡ, ವಡ್ಡರಯ್ಯನ ಬಸಪ್ಪ, ಚಿಕ್ಕಣ್ಣ, ಡಿ.ಎಸ್.ಬಸವರಾಜು, ಸುಗಂಧ ನಾಯ್ಕ, ಬಸವರಾಜಪ್ಪ, ಚಂದ್ರು, ಸತೀಶ್ ಆಚಾರ್, ಭಾಸ್ಕರ್, ವೈಬಸವರಾಜು, ಎಸ್.ಕೆಮಹೇಶ್, ಜೆಮಂಜು, ಬಿ. ಕಾರ್ತಿಕ್, ಬಿ.ಬಸವರಾಜು, ಶಿವರಾಜು, ಭಾಸ್ಕರ, ರವಿಕುಮಾರ್, ನಾಗೇಶ ಭಾಗವಹಿಸಿದ್ದರು.

ಶ್ರೀಮಹದೇಶ್ವರ ದೇಗುಲ ಉದ್ಘಾಟನೆ, ಕಳಸಾರೋಹಣ



ನಂಜೀಪುರದಲ್ಲಿ ಶ್ರೀಮಹದೇಶ್ವರ ದೇಗುಲ ಉದ್ಘಾಟನೆ ಮತ್ತು ಕಳಸಾರೋಹಣಕ್ಕೆ ಸಿದ್ಧವಾಗಿರುವುದು.

ಸರಗೂರು: ತಾಲೂಕಿನ ನಂಜೀಪುರದಲ್ಲಿ ಶ್ರೀಮಹದೇಶ್ವರ ದೇಗುಲ ಉದ್ಘಾಟನೆ ಮತ್ತು ಕಳಸಾರೋಹಣ ಮಹೋತ್ಸವ ಏ.27ರಿಂದ 29ವರೆಗೆ ನಡೆಯಲಿದೆ.

ಪೂಜಾ ಕಾರ್ಯಕ್ರಮ ನಂಜೀಪುರ ವಿರಕ್ತ ಮಠದ ಪಡುವಣ ತೀರ್ಥ, ಇಮ್ಮಡಿ ಚಿಲಾಳ ದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿದೆ. ಕಂತೆ ಮಹದೇಶ್ವರ ಬೆಟ್ಟ ಶಿಲಾ ಮಠದ ಶ್ರೀಮಹಾಂತ ದೇಶಿಕೇಂದ್ರ ಸ್ವಾಮೀಜಿ ಕಳಸಾರೋಹಣ ನೆರವೇರಿಸಲಿದ್ದಾರೆ.

ಏ.27ರಂದು ಸಂಜೆ 5.40 ರಿಂದ 6.30 ರವರೆಗೆ ಆಗೋದಕ ತೀರ್ಥ ಸಹಿತ ದೇನುದರ್ಪಣ, ಧ್ವಜ ಸ್ತಂಭ ಮತ್ತು ಬಲಿಪೀಠ ಸ್ಥಾಪನೆ ಇತರ ಧಾರ್ಮಿಕ ಕೈಂಕರ್ಯ ಜರುಗಲಿದೆ.

ಏ.28ರಂದು ಪ್ರಧಾನ ದೇವತೆಗಳು ಹಾಗೂ ಶ್ರೀಮಹದೇಶ್ವರಸ್ವಾಮಿ ಪರಿವಾರ ದೇವತೆಗಳ ಕಳಸ ಸ್ಥಾಪನೆ ಮತ್ತು ಪೂಜೆ, ಹೋಮಗಳು ನಡೆಯಲಿವೆ. ರಾತ್ರಿ 10 ಗಂಟೆಗೆ ಕೂಗಲೂರು ಶ್ರೀಶಿವರಾಜಪ್ಪ ಅವರಿಂದ ಹರಿಕಥೆ ನಡೆಯಲಿದೆ.

ಏ.29ರಂದು ಬೆಳಗ್ಗೆ 10 ಗಂಟೆಗೆ ಶ್ರೀಮಹದೇಶ್ವರರ ಉತ್ಸವವು ಪ್ರಮುಖ ಬೀದಿಗಳಲ್ಲಿ ನಡೆಯಲಿದ್ದು, ವಿವಿಧ ಜಾನಪದ ಕಲಾ ತಂಡಗಳು ಮೆರಗು ನೀಡಲಿವೆ. ಗ್ರಾಮದಲ್ಲಿ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀಮಹದೇಶ್ವರ ಸ್ವಾಮಿ ಹಾಗೂ ಶ್ರೀಬಸವೇಶ್ವರಸ್ವಾಮಿ ಪ್ರತಿಷ್ಠಾಪನೆ, ಕಲಾಕರ್ಷಣೆ, ಪ್ರಾಣ ಪ್ರತಿಷ್ಠೆ, ದೇವತಾಶುದ್ಧಿ ಪ್ರಧಾನ ಹೋಮ, ಪೂರ್ಣಾಹುತಿ ಶ್ರೀಸ್ವಾಮಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾಲಂಕಾರ, ಮಹಾ ಮಂಗಳಾರತಿ ಬಳಿಕ ತೀರ್ಥಪ್ರಸಾದ ವಿನಿಯೋಗ ಇರಲಿದೆ.

ಧಾರ್ಮಿಕ ಕಾರ್ಯಕ್ರಮದಲ್ಲಿ ಗುರುಮಲ್ಲೇಶ್ವರ ಮಹಾಸಂಸ್ಥಾನ ತ್ರಿವಿಧ ದಾಸೋಹ ಮಠಾಧ್ಯಕ್ಷ ಮಹಾಂತ ಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತಮಠ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಬಿಡುಗಲು, ಹರವೆ, ಮಾದಾಪುರ ಸೇರಿದಂತೆ ಇತರ ಸ್ವಾಮೀಜಿಗಳು, ಸಂಸದ ಸುನೀಲ್ ಬೋಸ್, ಶಾಸಕರಾದ ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜಿನ್ನಹಳ್ಳಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಜಿನ್ನಹಳ್ಳಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಸನ್ಮಾನಿಸಿದರು.

ಹೆಚ್.ಡಿ.ಕೋಟೆ: ತಾಲೂಕಿನ ಜಿನ್ನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಆರ್.ರಾಜನಾಯಕ ಹಾಗೂ ಉಪಾಧ್ಯಕ್ಷರಾಗಿ ಸಿ.ಮರಳೂರು ನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆರ್.ರಾಜನಾಯಕ, ಉಪಾಧ್ಯಕ್ಷ ಸ್ಥಾನಕ್ಕೆ ಸಿ.ಮರಳೂರು ನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರೇಮ ಘೋಷಿಸಿದರು.

ಈ ವೇಳೆ ನಿರ್ದೇಶಕರಾದ ಮರಳೂರ ನಾಯಕ, ಹೇಮಂತ್ ಕುಮಾರ್, ಕಂಠೀರವ, ರಾಜ ನಾಯಕ, ಪ್ರೇಮ, ಕಮಲಮ್ಮ, ರಾಜಮ್ಮ, ರವಿ, ಜವರ ನಾಯಕ, ಸಂಘದ ಕಾರ್ಯದರ್ಶಿ ವಿಜಯ ಕುಮಾರ್, ಪರೀಕ್ಷಕ ಪವನ್ ಕುಮಾರ್, ಮುಖಂಡರಾದ ಚಿಕ್ಕಣ್ಣ ನಾಯಕ, ಸಿದ್ದನಾಯಕ, ಸಿದ್ದಯ್ಯಸ್ವಾಮಿ, ಮಂಜು, ಮಹೇಶ್, ರುದ್ರಪ್ಪ ಪುಟ್ಟಣ್ಣ ಶಿವಕುಮಾರ್, ಪರಶಿವ, ಸುರೇಶ್, ಮಹೇಶ್, ಚಾಮರಾಜು, ಜವರ ನಾಯಕ, ಚಾಮನಾಯಕ, ಚೇತನ್, ಮಹೇಶ್, ಇತರರಿದ್ದರು.

11ನೇ ಪಂಚೇನ್ ಲಾಮ ಹುಟ್ಟುಹಬ್ಬ ಆಚರಣೆ



ಬೈಲಕುಪ್ಪೆ ಬಳಿಯ ತಶಿ ಲುಂಪೋ ದೇವಸ್ಥಾನದಲ್ಲಿ ಟಿಬೆಟಿಯನ್ ಧರ್ಮದ 11ನೇ ಪಂಚೇನ್ ಲಾಮ ಅವರ 37ನೇ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಟಿಬೆಟಿಯನ್ ಪ್ರಧಾನ ಮಂತ್ರಿ ಪೆಂಬಸಿರಿಂಗ್ ಇತರರಿದ್ದರು.

ಅನಗತ್ಯ ಕಿರುಕುಳ; ಬೇಸಾಯಕ್ಕೆ ತೊಂದರೆ

ಬೈಲಕುಪ್ಪೆ ಗ್ರಾಮದ ರೈತ ಮಧು ಆರೋಪ



ಸುದ್ದಿಗೋಷ್ಠಿಯಲ್ಲಿ ಬೈಲಕುಪ್ಪೆ ಗ್ರಾಮದ ರೈತ ಮಧು ಮಾತನಾಡಿದರು.

ಪಿರಿಯಾಪಟ್ಟಣ: ಅನಗತ್ಯ ಕಿರುಕುಳದ ಮೂಲಕ ವ್ಯವಸಾಯ ಮಾಡಲು ತೊಂದರೆ ನೀಡುತ್ತಿದ್ದಾರೆ ಎಂದು ತಾಲೂಕಿನ ಬೈಲಕುಪ್ಪೆ ಗ್ರಾಮದ ರೈತ ಮಧು ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನಗೆ ಹಾರನಹಳ್ಳಿ ಹೋಬಳಿ ಬೈಲುಕುಪ್ಪೆ ಗ್ರಾಮದಲ್ಲಿ ಸರ್ವೆ ನಂ.32/1ರಲ್ಲಿ 4.27 ಎಕರೆ ಜಮೀನಿದ್ದು, ಸೂಕ್ತ ದಾಖಲೆ ಹೊಂದಿದ್ದೇವೆ. ಆದರೆ ನನಗೆ ಸರ್ವೆ ನಂ.31ರಲ್ಲಿರುವ ಸುಶೀಲಮ್ಮ ಎಂಬುವರು ನನ್ನ ಜಮೀನು ತಮಗೆ ಸೇರಬೇಕೆಂದು ಇಲ್ಲಸಲ್ಲದ ಕಿರುಕುಳ ಮಾಡುತ್ತಾ ನನಗೆ ಬೇಸಾಯ ಮಾಡಲು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಸುಶೀಲಮ್ಮ ಅರಣ್ಯ ಇಲಾಖೆ ಜಾಗದಲ್ಲೂ ಬೇಸಾಯ ಮಾಡುತ್ತಿದ್ದು, ಇದನ್ನು ಅರಣ್ಯ ಇಲಾಖೆಯವರು ತೆರವುಗೊಳಿಸಲು ಸರ್ವೆ ಮಾಡಿದ್ದಾರೆ ಮತ್ತು ಇವರ ದಾಖಲೆಯಲ್ಲಿರುವ ಜಮೀನಿಗೂ ನಮ್ಮ ಜಮೀನಿಗೂ ಯಾವುದೇ ಸಂಬಂಧವಿಲ್ಲ. ತೊಂದರೆ ನೀಡುವುದನ್ನು ಪ್ರಶ್ನಿಸಿದರೇ ಇಲ್ಲಸಲ್ಲದ ಆರೋಪ ಮಾಡುತ್ತಾ, ದಲಿತ ದೌರ್ಜನ್ಯ ಪ್ರಕರಣ ದಾಖಲಿಸಿ ತೊಂದರೆ ನೀಡುತ್ತಿದ್ದಾರೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ರಕ್ಷಣೆ ನೀಡಬೇಕು ಎಂದು ಮನವಿ ಮಾಡಿದರು. ಸರ್ವೆ ನಂ.32/2ರ ಜಮೀನು ಮಾಲೀಕರಾದ ಶೀಲಾ ಡಿಸೋಜಾ ಮಾತನಾಡಿದರು. ಗೋಷ್ಠಿಯಲ್ಲಿ ಗ್ರಾಮಸ್ಥರಾದ ಗೋಪಾಲ, ಮಹೇಶ್, ಪ್ರದೀಪ್, ಮಂಜು ಸೇರಿದಂತೆ ಇತರರಿದ್ದರು.

ಡಿಟಿಎಂಎನ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅಭಿನಂದನೆ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಬೆಟ್ಟದಪುರ, ಏ.26–ಯಾವುದೇ ಸಂಸ್ಥೆ 21 ಬಾರಿ ಶೇ.100 ರಷ್ಟು ಫಲಿತಾಂಶ ಪಡೆಯಲು ಸಾಧ್ಯವಿಲ್ಲ. ಹೀಗಾಗಿ ಇತ್ತೀಚೆಗೆ ನಮ್ಮ ಸಂಸ್ಥೆಯಲ್ಲಿ ಇನ್ನು ಹೆಚ್ಚು ಸುಧಾರಣೆಗಳನ್ನು ಮಾಡಿಕೊಂಡಿದ್ದೇವೆ ಎಂದು ಡಿಟಿಎಂಎನ್ ಸಂಸ್ಥೆ ಖಜಾಂಚಿ ಪಿ.ರವಿ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಡಿಟಿಎಂಎನ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಶಾಲೆಯ ಶಿಕ್ಷಕರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ ರಾತ್ರಿ ತರಗತಿ, ದೈನಂದಿನ ಚಟುವಟಿಕೆಗಳು ಅಲ್ಲದೆ ಇನ್ನಿತರೆ ಕರ್ತವ್ಯಗಳನ್ನು ಚಾಚು ತಪ್ಪದೇ ನಿರ್ವಹಿಸುತ್ತಿದ್ದಾರೆ. ನಮ್ಮಲ್ಲಿರುವ ಸವಲತ್ತುಗಳನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಸದ್ಬಳಕೆ ಮಾಡಿಕೊಂಡ ಫಲ ಈ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಅಂಬೇಡ್ಕರ್ ಹೇಳಿರುವಂತೆ ಶಿಕ್ಷಣವೇ ಶಕ್ತಿ. ಮಕ್ಕಳಿಗೆ ಆಸ್ತಿ ಮಾಡುವುದನ್ನು ಬಿಟ್ಟು, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಪೋಷಕರಿಗೆ ಕಿವಿಮಾತು ತಿಳಿಸಿದರು.

ಮೈಸೂರಿನ ಶ್ರೀವಿದ್ಯಾಕೀರ್ತಿ ನೀಟ್ ಅಕಾಡೆಮಿಯ ಎಂಡಿ ಡಾ.ಹೆಚ್.ಎಸ್ ರಾಘವೇಂದ್ರ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿದ್ದರೂ ಪ್ರತಿಷ್ಠಿತ ಶಾಲೆಗಳಿಂತ ಏನೂ ಕಡಿಮೆಯಾಗದಂತೆ ಈ ಶಿಕ್ಷಣ ಸಂಸ್ಥೆ ಹೊರ ಬರುತ್ತಿದೆ. ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ ಎಂದರು.

ಸಂಸ್ಥೆ ನಿರ್ದೇಶಕರ ಸಿ.ಟಿ.ಗುರುದತ್, ಪ್ರಾಂಶುಪಾಲ ಸತೀಶ್, ಮುಖ್ಯಶಿಕ್ಷಕ ಎಂ.ಬಿ.ಮುರುಳೀಕೃಷ್ಣ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಶ್ರೀಶೈಲ, ಆಡಳಿತಾಧಿಕಾರಿ ಜೆ.ಸಿ.ನಟರಾಜು, ನಿರ್ದೇಶಕರಾದ ವಿಜಯ್ ಕುಮಾರ್, ಕೃಷ್ಣಮೂರ್ತಿ, ಶಿಕ್ಷಕರು, ಬೋಧಕೇತರ ವರ್ಗ, ಪೋಷಕರು, ಎಸ್ಎಸ್ಎಲ್‌ಸಿ ಸಾಧಕ ವಿದ್ಯಾರ್ಥಿಗಳು ಹಾಜರಿದ್ದರು.

ಸಿಟಿಜನ್ ಶಾಲೆಗೆ ಶೇ.99.3 ಫಲಿತಾಂಶ



ನಂಜನಗೂಡು, ಏ.26– ನಗರದ ಸಿಟಿಜನ್ ಶಾಲೆ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.99.3ರಷ್ಟು ಫಲಿತಾಂಶ ಪಡೆಯುವ ಮೂಲಕ ತಾಲೂಕಿಗೆ ದ್ವಿತೀಯ ಸ್ಥಾನ ಗಳಿಸಿದೆ.

ಶಾಲೆಯ ಎನ್.ಶ್ರೇಯ ಎಂಬ ವಿದ್ಯಾರ್ಥಿನಿ 615 ಅಂಕ ಪಡೆಯುವ ಮೂಲಕ ತಾಲೂಕಿಗೆ ತೃತೀಯ ಸ್ಥಾನ ಪಡೆದಿದ್ದಾಳೆ. ಶಾಲೆಯ 36 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆ ಮುಖ್ಯ ಶಿಕ್ಷಕರು ಮತ್ತು ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಏ.26– ತಾಲೂಕಿನ ನಾಗರೀಕ ವೇದಿಕೆಯು ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.

ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ ಫೋಟೋದೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಪ್ರತಿಭಾ ಪುರಸ್ಕಾರ ನಡೆಯುವ ಸ್ಥಳ ಹಾಗೂ ದಿನಾಂಕವನ್ನು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ತಿಳಿಸಲಾಗುತ್ತದೆ. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾರ್ಯಕ್ರಮಕ್ಕೆ ಹಾಜರಾಗಿ ಪ್ರತಿಭಾ ಪುರಸ್ಕಾರ ಪಡೆಯಬೇಕು. ಜೊತೆಗೆ ನಗದು ಬಹುಮಾನ ನೀಡಲಾಗುತ್ತದೆ. ಅರ್ಹರು ಅರ್ಜಿಯನ್ನು ಸಿಂಚನ ಕಂಪ್ಯೂಟರ್ ಸೆಂಟರ್, ಕಾಲೇಜು ವೃತ್ತ, ತಿ.ನರಸೀಪುರ ಈ ವಿಳಾಸಕ್ಕೆ ತಲುಪಿಸುವಂತೆ ಕೋರಲಾಗಿದ್ದು, ಹೆಚ್ಚಿನ ಮಾಹಿತಿಗೆ ಸಿಂಚನ ನವೀನ್(8722785640), ವಕೀಲ ಜ್ಞಾನೇಂದ್ರ ಮೂರ್ತಿ(9071074715) ಸಂಪರ್ಕಿಸಬಹುದು.

ಶಿಸ್ತು, ಸ್ಥಿರತೆ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನ ಕೀಲಿಕೈ

ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿ ಡಾ.ಬಿ.ಗೋಪಾಲಕೃಷ್ಣ



ಕಾರ್ಯಕ್ರಮವನ್ನು ಡಾ.ಬಿ.ಗೋಪಾಲಕೃಷ್ಣ ಉದ್ಘಾಟಿಸಿದರು.

ನಂಜನಗೂಡು, ಏ.26– ಶಿಸ್ತು ಮತ್ತು ಸ್ಥಿರತೆಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಹಿಂದಿನ ಯಶಸ್ಸಿನ ಗುಟ್ಟಾಗಿದೆ ಎಂದು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಉಪ ಕಾರ್ಯದರ್ಶಿ ಡಾ.ಬಿ.ಗೋಪಾಲಕೃಷ್ಣ ತಿಳಿಸಿದರು.

ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಯುವಜನರ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇದು ಸ್ಪರ್ಧಾತ್ಮಕ ಯುಗ. ಜೀವನದಲ್ಲಿ ಪ್ರತಿ ದಿನವೂ ಪರಿಶ್ರಮದೊಂದಿಗೆ ಗುರಿ ಸಾಧನೆ ಕಡೆಗೆ ಸಾಗಬೇಕು. ಗುರಿಯ ಸ್ಪಷ್ಟತೆಯೊಂದಿಗೆ ಮುಂದಿನ ಜೀವನದ ಬಗ್ಗೆಯೂ ಚಿಂತನೆ ಇರಬೇಕು. ಸೋಲುಗಳಿಗೆ ಹೆದರದೆ ಅವುಗಳನ್ನು ಸಾಧನೆಗೆ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮುಂದುವರೆಯುವುದು ಮುಖ್ಯ ಎಂದರು.


ವಕೀಲ ಎನ್.ಎಸ್. ಮಧುಕುಮಾರ್ ಮಾತನಾಡಿ, ಉತ್ತಮ ವಿಚಾರಗಳನ್ನು ಅಳವಡಿಸಿಕೊಂಡು ಜೀವನದಲ್ಲಿ ಅನುಸರಿಸಿದರೆ ಯಶಸ್ಸು ಖಚಿತ. ಪರಿಶ್ರಮವೇ ಯಶಸ್ಸಿನ ಮೂಲ ಮಂತ್ರ, ಜನನ ಮತ್ತು ಮರಣಗಳ ನಡುವಿನ ಬದುಕನ್ನು ಸಾರ್ಥಕವಾಗಿ ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ ಎಂದರು.

ಹಾಸನ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಟಿ.ಸಿ.ತಾರಾನಾಥ್ ಮಾತನಾಡಿ, ಶ್ರೀ ಸುತ್ತೂರು ಕ್ಷೇತ್ರವು ಸಕಾರಾತ್ಮಕ ಶಕ್ತಿಯಿಂದ ಕೂಡಿದೆ. ಶಿಬಿರದಲ್ಲಿ ಭಾಗವಹಿಸುತ್ತಿರುವ ಎಲ್ಲರೂ ಪುಣ್ಯವಂತರು. ಜೀವನದಲ್ಲಿ ಸಂಸ್ಕಾರ ಅಗತ್ಯವಿದೆ. ಹಿಂದೆ ಗುರು ಮುಂದೆ ಗುರಿ ಇಟ್ಟುಕೊಂಡು ಒಳ್ಳೆಯ ಪ್ರಜೆಯಾಗಬೇಕು. ಜ್ಞಾನವು ಸುಲಭವಾಗಿ ದಕ್ಕುವುದಿಲ್ಲ ಅದಕ್ಕೆ ತಪಸ್ಸು ಅಗತ್ಯ. ನಮ್ಮ ಅಭ್ಯುದಯಕ್ಕೆ ಮನಸ್ಸೇ ಕಾರಣ ಎಂದರು.

ಎಂಐಎನ ಸಿಇಓ ಎನ್.ರವಿಶಂಕರ್ ಮಾತನಾಡಿ, ಯಾವುದೇ ಒಂದು ಉದ್ಯಮ ಪ್ರಾರಂಭಿಸಲು ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳ ಅವಶ್ಯಕತೆ ಇದೆ. ಉದ್ಯಮದ ಮೇಲೆ ಹಣ ಹೂಡಲು ಸರ್ಕಾರ ಹಾಗೂ ಇತರ ಸಂಸ್ಥೆಗಳು ಪ್ರಸ್ತುತ ಸಿದ್ಧ ಇವೆ. ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವ ಬದ್ಧತೆ ಇರಬೇಕು. ಇಂದಿನ ದಿನಗಳಲ್ಲಿ ಉದ್ಯಮಶೀಲರಾಗುವುದು ಆಯ್ಕೆಯಲ್ಲ ಅನಿವಾರ್ಯವಾಗಿದೆ ಎಂದರು.

ಜೆ.ಕೆ.ಗ್ಲೋಬಲ್ ಅಕಾಡೆಮಿ ನಿರ್ದೇಶಕ ಎಂ.ಕೆ.ಪ್ರಭುದೇವ, ಬದುಕಿನಲ್ಲಿ ಅಸಾಧ್ಯವಾದದು ಯಾವುದೂ ಇಲ್ಲ. ಸಾಧಿಸುವ ಛಲವಿರಬೇಕು. ದೇಹ ಹಾಗೂ ಮನಸ್ಸಿಗೆ ಹಾನಿಯುಂಟು ಮಾಡುವ ಅಭ್ಯಾಸಗಳಿಂದ ದೂರವಿರಬೇಕು. ಆರೋಗ್ಯಕರ ಜೀವನ ರೂಪಿಸಿಕೊಳ್ಳಬೇಕು. ಕುಟುಂಬ ಹಾಗೂ ಸಮಾಜದ ಜೊತೆ ಉತ್ತಮ ಹೊಂದಾಣಿಕೆ ಮಾಡಿಕೊಂಡು ಬದುಕಬೇಕು ಎಂದರು.

ವೀರೇಶ ಶಿವಾಚಾರ್ಯ ಸ್ವಾಮೀಜಿ ಲಿಂಗೈಕ್ಯ



ತಿ.ನರಸೀಪುರ: ಪಟ್ಟಣದ ತ್ರಯಂಬಕ ಮಠದ ಶ್ರೀವಿರೇಶ ಶಿವಾಚಾರ್ಯ ಸ್ವಾಮೀಜಿ(72)ಭಾನುವಾರ ಬೆಳಗ್ಗೆ ಲಿಂಗೈಕ್ಯರಾದರು.

ಕೆಲ ತಿಂಗಳಿಂದ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಶ್ರೀಗಳು ಇಂದು ಇಹಲೋಕ ತ್ಯಜಿಸಿದರು. ಬೆಳಗ್ಗೆಯಿಂದ ಸಂಜೆವರೆಗೂ ಶ್ರೀಗಳ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಬಳಿಕ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಈ ವೇಳೆ ವಿವಿಧ ಮಠಾಧಿಪತಿಗಳು, ತಾಲೂಕಿನ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಟಿಎಸ್ ಶಾಂತರಾಜು, ಕಾರ್ಯದರ್ಶಿ ವೀರೇಶ್, ಮುಖಂಡರು ಹಾಗೂ ಭಕ್ತರು ಪಾಲ್ಗೊಂಡಿದ್ದರು.

ಬಿ.ಮನ್ಸೂರ್ ಅಲಿ ನಿಧನ



ತಿ.ನರಸೀಪುರ, ಏ.26– ಪಟ್ಟಣದ ಮಜೀದ್ ಇ ನೂರ್ ಅಧ್ಯಕ್ಷ ಹಾಗೂ ಕೆಪಿಸಿಸಿ ಅಲ್ಪಸಂಖ್ಯಾತರ ಕಾರ್ಯದರ್ಶಿ ಬಿ.ಮನ್ಸೂರ್ ಅಲಿ(56) ಬೆಂಗಳೂರಿನಲ್ಲಿ ಶನಿವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ಅಜೀಮುನ್ನೀಸಾ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸರಳ, ಸಜ್ಜನಿಕೆಯ ಬಿ.ಮನ್ಸೂರ್ ಅಲಿ ಅವರು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ವಕ್ಫ್ ಬೋರ್ಡ್‌ನ ಸಲಹಾ ಸಮಿತಿ ಸದಸ್ಯ, ಹಾಗೂ ಕನ್ನಡ ಚಲನಚಿತ್ರ ಪೋಷಕ ಕಲಾವಿದರ ಸಂಘದ ನಿರ್ದೇಶಕರಾಗಿ ಸಾಮಾಜಿಕವಾಗಿ ಗುರುತಿಸಿಕೊಂಡಿದ್ದರು. ಪಟ್ಟಣದ ಸುಶೀಲಮ್ಮ ಕಾಲೋನಿಯಲ್ಲಿರುವ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಬಳಿಕ ಭಾನುವಾರ ಸಂಜೆ ಪಟ್ಟಣದ ಮಸೀದಿ ಆವರಣದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಎಲ್‌ಕೆಎಫ್ ಪಬ್ಲಿಕ್ ಶಾಲೆ ಸಂಸ್ಥಾಪಕ ಅಧ್ಯಕ್ಷ ಎನ್.ಕೆ.ಫರೀದ್, ಸ್ಟಾರ್ ಸಿಮೆಂಟ್ ಮಾಲೀಕ ನೂರಲ್ಲಾ ಶರೀಫ್, ಪುರಸಭೆ ಮಾಜಿ ಅಧ್ಯಕ್ಷ ಸೈಯದ್ ಅಹ್ಮದ್ ಅಂತಿಮ ದರ್ಶನ ಪಡೆದು ಸಂತಾಪ ಸುಚಿಸಿದ್ದಾರೆ.

ಗುಡಮಾದನಹಳ್ಳಿ ಹಸಿರು ವಲಯದಲ್ಲಿ

ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಪರಿಸರವಾದಿಗಳ ವಿರೋಧ

ಫಲವತ್ತಾದ ಪ್ರದೇಶದಲ್ಲಿ ಆಸ್ಪತ್ರೆ ಬೇಡ; ಬೇರೆಡೆಗೆ ಸ್ಥಳಾಂತರಿಸಿ



ಮೈಸೂರು ತಾಲೂಕಿನ ಗುಡಮಾದನಹಳ್ಳಿಯ ಫಲವತ್ತಾದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ನಿಮ್ಹಾನ್ಸ್ ಆಸ್ಪತ್ರೆ ಬೇರೆಡೆ ಸ್ಥಳಾಂತರಿಸುವಂತೆ ಆಗ್ರಹಿಸಿ ರೈತರು ಹಾಗೂ ಪರಿಸರವಾದಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಏ.26(ಎಂಟಿವೈ)– ಮೈಸೂರು ತಾಲೂಕಿನ ಗುಡಮಾದನ ಹಳ್ಳಿಯ ಹಸಿರು ವಲಯದಲ್ಲಿ ರಾಜ್ಯ ಸರ್ಕಾರ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಿಸಲು ಮುಂದಾಗಿರುವ ಕ್ರಮವನ್ನು ಪರಿಸರವಾದಿಗಳು ಖಂಡಿಸಿದ್ದು, ಆಸ್ಪತ್ರೆ ನಿರ್ಮಾಣಕ್ಕೆ ಬೇರೆ ಸ್ಥಳ ಗುರುತಿಸುವಂತೆ ಆಗ್ರಹಿಸಿದ್ದಾರೆ.

ಆಸ್ಪತ್ರೆ ನಿರ್ಮಾಣ ನಿರ್ಧಾರ ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳಕ್ಕೆ ಭಾನುವಾರ ಬೆಳಗ್ಗೆ ಪರಿಸರವಾದಿಗಳು ಭೇಟಿ ನೀಡಿ, ಸ್ಥಳೀಯರಿಂದ ಮಾಹಿತಿ ಪಡೆದರಲ್ಲದೆ, ಹಸಿರುವಲಯವಾಗಿರುವ ಗುಡಮಾದನಹಳ್ಳಿ ಬಳಿ ಸರ್ಕಾರ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವ ನಿರ್ಧಾರದಿಂದ ಹಿಂದೆ ಸರಿದು, ಪರ್ಯಾಯ ಸ್ಥಳದಲ್ಲಿ ಆಸ್ಪತ್ರೆ ನಿರ್ಮಿಸುವಂತೆ ಒತ್ತಾಯಿಸಿದರು.

ಹಸಿರು ವಲಯ ರಕ್ಷಿಸಬೇಕು: ಪರಿಸರವಾದಿ ಮೇ.ಜನರಲ್ ಒಂಬತ್ಕೆರೆ ಮಾತನಾಡಿ, ಗುಡುಮಾದನಹಳ್ಳಿಗೆ ಸೇರಿದ ಕೃಷಿ ಜಮೀನು ಫಲವತ್ತಾಗಿದ್ದು, ಹಸಿರು ವಲಯವಾಗಿದೆ. ಈ ಹಸಿರು ವಲಯದಲ್ಲಿ ರಾಜ್ಯ ಸರ್ಕಾರ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಿಸಲು ಉದ್ದೇಶಿಸಿರುವುದು ಖಂಡನೀಯ. ಹಸಿರು ವಲಯ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಪರ್ಯಾಯ ಸ್ಥಳ ಗುರುತಿಸುವಂತೆ ಕೋರಿದರು.

ಕಟ್ಟಡ ನಿರ್ಮಾಣಕ್ಕೆ ಯೋಗ್ಯವಲ್ಲ: ಜಲ ತಜ್ಞ ಪ್ರೊ.ಯು.ಎನ್.ರವಿಕುಮಾರ್ ಮಾತನಾಡಿ, ಹಚ್ಚ ಹಸಿರಿನಿಂದ ಕೂಡಿರುವ ಈ ಭೂಮಿ ಕೃಷಿಗೆ ಮಾತ್ರ ಯೋಗ್ಯವಾಗಿದೆ. ಈ ಭಾಗದಲ್ಲಿ ನೀರಿನ ಅಂಶ ಹೆಚ್ಚಾಗಿರುವುದರಿಂದ ದೊಡ್ಡ ಪ್ರಮಾಣದ ಕಟ್ಟಡ ನಿರ್ಮಾಣಕ್ಕೆ ಇದು ಸೂಕ್ತ ಸ್ಥಳವಲ್ಲ. ಈ ಹಿನ್ನೆಲೆಯಲ್ಲಿ ಆಸ್ಪತ್ರೆ ಬೇರೆ ಕಡೆ ಯೋಗ್ಯ ಸ್ಥಳದಲ್ಲಿ ನಿರ್ಮಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಹಸಿರು ವಲಯ ಸೃಷ್ಟಿ ಕಷ್ಟ: 'ಪರಿಸರಕ್ಕಾಗಿ ನಾವು' ಸಂಘಟನೆಯ ಪರಶುರಾಮೇಗೌಡ ಮಾತನಾಡಿ, ಹೊಸದಾಗಿ ಹಸಿರು ವಲಯದ ನಿರ್ಮಾಣ ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಹಾಲಿಯಿರುವ ಹಸಿರು ವಲಯವನ್ನು ಸಂರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಗುಡಮಾದನಹಳ್ಳಿಯಲ್ಲಿ ಕೃಷಿ ಭೂಮಿಯಲ್ಲಿ ಆಸ್ಪತ್ರೆ ನಿರ್ಮಾಣ ಮಾಡುವುದು ಸರಿಯಲ್ಲ ಎಂದರು.

ಭೂಮಿಯನ್ನೇ ನಂಬಿದ್ದಾರೆ: ಕರ್ನಾಟಕ ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜು ಮಾತನಾಡಿ, ಗುಡಮಾದನಹಳ್ಳಿ ಸರ್ವೆ ನಂಬರ್ 60 ಮತ್ತು 68ರಲ್ಲಿ ಒಟ್ಟು 37 ಎಕರೆ ಭೂಮಿಯಿದ್ದು, ಅದರಲ್ಲಿ 20 ಎಕರೆ ವಿಸ್ತೀರ್ಣದಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಿಸಲು ಮುಂದಾಗಿದೆ. ಉಳಿದ 17 ಎಕರೆ ಭೂಮಿಯನ್ನು ಸರ್ಕಾರ ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳಲು ನಿರ್ಧರಿಸಿದೆ. ಈ ಭೂಮಿಯನ್ನು ಹಲವು ವರ್ಷಗಳಿಂದ ನಂಬಿಕೊಂಡು ಬಂದಿರುವ ರೈತರನ್ನು ಒಕ್ಕಲೆಬ್ಬಿಸುವುದು ಸರಿಯಲ್ಲ. ಈ ಭೂಮಿಯಲ್ಲಿ ರೈತರು ಬೆಳೆಯುವ ಹಸಿರು ಹುಲ್ಲನ್ನು ನಂಬಿಕೊಂಡು ಹೈನುಗಾರಿಕೆ ಮಾಡುತ್ತಿದ್ದಾರೆ. ಅದನ್ನೇ ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ಅಲ್ಲದೆ, ಮಹಿಳಾ ಹಾಲಿನ ಡೈರಿಯೂ ಈ ಭಾಗದಲ್ಲಿದೆ. ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣವಾದರೆ ರೈತರಿಗೆ ಹಾಗೂ ಹೈನುಗಾರಿಕೆಗೆ ತೊಂದರೆಯಾಗುತ್ತದೆ ಎಂದು ವಿಷಾದಿಸಿದರು.

ರೈತ ಮುಖಂಡ ಪಿ.ಮರಂಕಯ್ಯ ಮಾತನಾಡಿ, ಗುಡಮಾದನಹಳ್ಳಿಯಲ್ಲಿ ಕೆಲವು ರೈತರು ಹಸಿ ಹುಲ್ಲನ್ನು ಬೆಳೆಯುತ್ತಿದ್ದು, ಅದನ್ನು ಮೈಸೂರು ಮೃಗಾಲಯ, ಪಿಂಜರಾಪೋಲ್, ದಸರಾ ವೇಳೆ ಗಜಪಡೆಗೆ ಸರಬರಾಜು ಮಾಡಲಾಗುತ್ತದೆ ಅಲ್ಲದೆ, ಮೈಸೂರಿನ ವಿವಿಧೆಡೆ ಗೋಪಾಲಕರು ಸಾಕಿರುವ ಜಾನುವಾರುಗಳಿಗೂ ಸರಬರಾಜು ಮಾಡಲಾಗುತ್ತದೆ. ಇದು ವೃಷ್ಟಿ(ತೇವಾಂಶ) ಹೆಚ್ಚಿರುವ ಭೂಮಿಯಾಗಿದ್ದು, ಇಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಸರಿಯಲ್ಲ ಎಂದರು.

ಪ್ರತಿಭಟನೆಯಲ್ಲಿ ಪರಿಸರಕ್ಕಾಗಿ ನಾವು ಸಂಘಟನೆಯ ಲೀಲಾ ಶಿವಕುಮಾರ್, ಪತ್ರಕರ್ತರಾದ ರಶ್ಮಿಕೋಟಿ, ಸ್ಥಳೀಯ ಮುಖಂಡರಾದ ಉಮೇಶ್ ಕುಮಾರ್, ಮಹೇಶ್, ಮಹದೇವಮ್ಮ, ಗೀತಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತೆ)	4 ಪ್ರದರ್ಶನಗಳು
ಸಂಗಂ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಜಿ.ಬಿ.ಸರಗೂರು ಸರ್ಕಾರಿ ಪ್ರೌಢಶಾಲೆ ಶೇ.100ರಷ್ಟು ಫಲಿತಾಂಶ

ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ ಐವರು ವಿದ್ಯಾರ್ಥಿಗಳು



ಬಿಂದು ಬಿ.ಸಿಂಚನ ಸಿಂಧು ಧರ್ಮೇಶ ಕೆ.ಪೂಜಾ



ಪವಿತ್ರ ವೇದಿಕ ಅಮೃತ ಸೌಜನ್ಯ ಚೆಲುವರಾಜು

ಮೈಸೂರು, ಏ.26(ಎಂಟಿವೈ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯ ಜಿ.ಬಿ.ಸರಗೂರಿನ ಸರ್ಕಾರಿ ಪ್ರೌಢಶಾಲೆಗೆ ಈ ಬಾರಿ ಶೇ.100ರಷ್ಟು ಫಲಿತಾಂಶ ಬಂದಿದ್ದು, ಪರೀಕ್ಷೆ ಬರೆದ 54 ವಿದ್ಯಾರ್ಥಿಗಳಲ್ಲಿ ಐವರು ಅತ್ಯುನ್ನತ ಶ್ರೇಣಿ, 31 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಪರೀಕ್ಷೆ ಬರೆದ ಎಲ್ಲಾ 54 ವಿದ್ಯಾರ್ಥಿಗಳು ಪಾಸಾಗುವ ಮೂಲಕ ಈ ಬಾರಿ ಗ್ರಾಮೀಣ ಪ್ರದೇಶದ, ಅದರಲ್ಲೂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ಬಿಂದು 588 (ಕನ್ನಡ 125), ಬಿ.ಸಿಂಚನ 560, ಸಿಂಧು 551, ಧರ್ಮೇಶ 545 (ಹಿಂದಿ100), ಕೆ.ಪೂಜಾ 534(ಹಿಂದಿ100), ಎಸ್.ಪವಿತ್ರ 527, ವೇದಿಕ 527, ಅಮೃತ 506, ಎಸ್.ಸೌಜನ್ಯ 502, ಚೆಲುವರಾಜು 498 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಎಸ್‌ಡಿಎಂಸಿ ಸದಸ್ಯರು, ಗ್ರಾಮದ ಮುಖಂಡರು, ಹಳೆ ವಿದ್ಯಾರ್ಥಿಗಳು, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರ ವೃಂದ ಅಭಿನಂದಿಸಿದೆ.

ಸಂಸ್ಕೃತಿ, ಸಂಸ್ಕಾರ ಕಲಿಯಲು ಜಾನಪದ ಮುಖ್ಯ

ಮೈಸೂರಲ್ಲಿ ಜಾನಪದ ಸಂಸ್ಥಾಪನಾ ದಿನ ಆಚರಣೆ



ಪಿಎಚ್‌ಡಿ ಹಾಗೂ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವವರನ್ನು ಸನ್ಮಾನಿಸಲಾಯಿತು.

ಮೈಸೂರು,ಏ.26– ಸಂಸ್ಕೃತಿ, ಸಂಸ್ಕಾರ ಕಲಿಯಲು ಜಾನಪದ ಮುಖ್ಯ ಎಂದು ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಅಭಿಪ್ರಾಯ ಪಟ್ಟರು.

ಮೈಸೂರು ಜಿಲ್ಲಾ ಕನ್ನಡ ಜಾನಪದ ಪರಿಷತ್ ಕುವೆಂಪುನಗರ ಆದಿಚುಂಚನಗಿರಿ ರಸ್ತೆಯ ಶ್ರೀ ಕಾಗಿನೆಲೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಜಾನಪದ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾನಪದದ ಪ್ರತಿ ಹಾಡು, ಪ್ರತಿ ಶಬ್ದಕ್ಕೂ ಅರ್ಥವಿದೆ ಎಂದರು.

ಇಂತಹ ಜಾನಪದ ಪ್ರಸ್ತುತ ದಿನಗಳಲ್ಲಿ ಮಾಯವಾಗುತ್ತಿದೆ. ಇಲ್ಲವೇ ಪ್ರಾಮುಖ್ಯತೆ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಹಾಗೂ ಸಂಸ್ಥೆಗಳು ಜಾನಪದವನ್ನು ಜೀವಂತವಾಗಿಡುವ ಪ್ರಯತ್ನ ಮಾಡಬೇಕು ಎಂದು ಅವರು ಸಲಹೆ ನೀಡಿದರು. ಪ್ರೊ.ಹನೂರು ಕೃಷ್ಣಮೂರ್ತಿ ಅವರು ಚಿತ್ರದುರ್ಗ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಜಾನಪದವನ್ನು ಉತ್ತೇಜಿಸುವ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಅವರು ಶ್ಲಾಘಿಸಿದರು.

ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಗೌರವ ಕಾರ್ಯದರ್ಶಿ ಪುಟ್ಟಬಸವೇಗೌಡ ಅಧ್ಯಕ್ಷತೆ ವಹಿಸಿದ್ದರು. ಕಾಗಿನೆಲೆ ಬಿ.ಇಡಿ ಕಾಲೇಜಿನ ಪ್ರಾಂಶುಪಾಲೆ ಡಾ.ಕೆ.ಕೆ. ವಿಶಾಲಾಕ್ಷಿ ಆಶಯ ಭಾಷಣ, ಕಜಾಪ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ವಿಭಾಗೀಯ ಸಂಚಾಲಕಿ ಡಾ.ಕಾವೇರಿ ಪ್ರಕಾಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ವಿವಿಗಳಿಂದ ಪಿಎಚ್‌ಡಿ ಹಾಗೂ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ, ಜಯಲಕ್ಷ್ಮಿಪುರಂ ಸಂತ ಜೋಸೆಫರ ಕಾಲೇಜಿನ ಪ್ರಾಂಶುಪಾಲ ಎಚ್.ಎನ್. ಚಂದ್ರಶೇಖರ, ಖ್ಯಾತ ಜಾನಪದ ಗಾಯಕ ಅಮ್ಮ ರಾಮಚಂದ್ರ, ಪೂಜಾ ಕುಣಿತ ಕಲಾವಿದ ಸಿ. ಸುಂದರೇಶ್, ಸಮಾಜ ಸೇವಕ ನಂಜನಗೂಡು ತಾ. ಕೊಂಗಳ್ಳಿಯ ಬಿ. ಶಂಕರ್, ಕಜಾಪ ಕೆ.ಆರ್. ನಗರ ತಾ. ಅಧ್ಯಕ್ಷ ತಿಮ್ಮಶೆಟ್ಟಿ ಮತ್ತು ಬೈಪಾಸ್ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಕಜಾಪ ಕಾರ್ಯದರ್ಶಿ ಬೇಸೂರು ಮೋಹನ್ ಪಾಳೇಗಾರ್, ಪತ್ರಿಕಾ ಕಾರ್ಯದರ್ಶಿ ಎ.ಎಲ್. ಸುರೇಶ್ಚಂದ್ರ ದೊರೆಸ್ವಾಮಿ, ಮೊದಲಾದವರು ಇದ್ದರು. ಸ್ವಾತಿ ಮತ್ತು ಪನ್ನಗ ವಿಜಯಕುಮಾರ್ ಮತ್ತು ತಂಡದವರು ಪ್ರಾರ್ಥಿಸಿದರು. ಕೆ.ಆರ್.ನಗರದ ರಿಜ್ವಾನ್ ಕಾರ್ಯಕ್ರಮ ನಿರೂಪಿಸಿದರು.

ಉಚಿತ ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಜೋಡಿಗಳು



ಮೈಸೂರು, ಏ.26– ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು ನಗರದ ಅಶೋಕ ರಸ್ತೆಯ ಗೀತಾ ಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ಉಚಿತ ಸಾಮೂಹಿಕ ವಿವಾಹದಲ್ಲಿ 5 ಜೋಡಿಗಳು ಸತಿ–ಪತಿಗಳಾಗಿ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು.

ಹಾಸನ ಜಿಲ್ಲೆಯ ಎಸ್.ಎಂ. ಲಿಖಿತ್– ಮಮತಾ ಸ್ವಾತಿ, ಬೆಂಗಳೂರು ದಕ್ಷಿಣ ಜಿಲ್ಲೆಯ ಬಿ.ಟಿ. ವಿಜಯ್– ಎನ್. ಸೌಜನ್ಯಾ, ಮೈಸೂರಿನ ಎಸ್. ಕನಕಮೂರ್ತಿ– ಅಂಜಲಿ, ಜಿ. ರಾಜು– ಎಸ್. ಸಂಗೀತಾ, ಐಶ್ವರ್ಯ– ಕುಮಾರ್ ಜೋಡಿ ವಿವಾಹವಾದವರು.

ಪರಿಷತ್ತು ವತಿಯಿಂದ ವಧುವಿಗೆ ಮಾಂಗಲ್ಯ, ಕಾಲುಂಗುರ ಮತ್ತು ಸೀರೆ, ವರನಿಗೆ ಶರ್ಟ್, ಪಂಚೆ ಮತ್ತು ವಲ್ಲಿಯನ್ನು ನೀಡಲಾಯಿತು. ಮೇಲುಕೋಟೆ ವಂಗೀಪುರ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಚ್.ಕೆ. ರಾಮು, ಡಾ.ರೇಖಾ ಮನೋವಿಜ್ಞಾನಿ ಮನಃಶಾಂತಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹರೇ ಶ್ರೀನಿವಾಸ ಸಮಿತಿ ಅಧ್ಯಕ್ಷ ಗುಂಡು ವೆಂಕಟೇಶ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಉದ್ಯಮಿ ಎಸ್. ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕಸ್ತೂರಿ ಚಂದ್ರು ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪದಾಧಿಕಾರಿಗಳಾದ ಟಿ. ಶಿವರಾಜು, ಅಮೀನಬೇಗಂ, ತೇಜಸ್ ಪೃಥ್ವಿರಾಜ್, ಎಚ್.ಟಿ. ಪಾರ್ವತಿ, ನಟರಾಜ್, ನಂಜುನ ಹರಿಶ್ಚಂದ್ರ, ಮೌಲ್ಯ ಜೈಕುಮಾರ್, ಎಲ್. ರೂಪಾ ಮೊದಲಾದವರು ಪಾಲ್ಗೊಂಡಿದ್ದರು.

ಏ.29 ರಿಂದ ನೃತ್ಯ, ನಾಟಕ, ಸಂಗೀತ ಕಾರ್ಯಾಗಾರ

ಮೈಸೂರು, ಏ.26– ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿರುವ ಕಲಾಧಾರೆ ಕಲ್ಚರಲ್ ಟ್ರಸ್ಟ್‌ನ, ಮಾಸ್ಟರ್ ಎನ್ ಬ್ಲಾಸ್ಟರ್ ಡ್ಯಾನ್ಸ್ ಗ್ರೂಪ್ ಪ್ರದರ್ಶಕ ಕಲೆಗಳ ಸಂಸ್ಥೆಯ ಬೆಳ್ಳಿಹಬ್ಬ ಹಾಗೂ ಅಂತರ ರಾಷ್ಟ್ರೀಯ ನೃತ್ಯ ದಿನದ ಅಂಗವಾಗಿ ನೃತ್ಯ, ನಾಟಕ, ಸಂಗೀತ ಕಾರ್ಯಾಗಾರವನ್ನು ಏ.29 ರಿಂದ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಾಗಾರದಲ್ಲಿ ಭಾರತೀಯ ಭರತನಾಟ್ಯ, ಜಾನಪದ ನೃತ್ಯ, ಚಲನಚಿತ್ರಕ್ಕೆ ಸಂಬಂಧಿಸಿದ ನೃತ್ಯ, ಪಾಶ್ಚಿಮಾತ್ಯ ನೃತ್ಯಗಳ ತರಬೇತಿ, ನಾಟಕ ತರಬೇತಿ, ಸಂಗೀತ ತರಬೇತಿ ನೀಡಲಾಗುತ್ತದೆ. ಶಿಬಿರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪರಿಣತರು ಮಾರ್ಗದರ್ಶನ ನೀಡಲಿದ್ದಾರೆ.

ಕಾರ್ಯಾಗಾರದಲ್ಲಿ ಆಸಕ್ತಿಯುಳ್ಳ 4 ವರ್ಷ ಮೇಲ್ಪಟ್ಟವರು ಭಾಗವಹಿಸಬಹುದು ಎಂದು ಕಲಾಧಾರೆ ಕಲ್ಚರಲ್ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಅಂಧ ಮಕ್ಕಳ ಸರ್ಕಾರಿ ಪಾಠಶಾಲೆಗೆ ಪ್ರವೇಶಾತಿ ಆರಂಭ

ಮೈಸೂರು, ಏ.26– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಅಂಧ ಮಕ್ಕಳ ಸರ್ಕಾರಿ ಪಾಠ ಶಾಲೆ, ತಿಲಕನಗರ ಇಲ್ಲಿ 2026–27ನೇ ಶೈಕ್ಷಣಿಕ ಸಾಲಿಗೆ 06 ರಿಂದ 16 ವರ್ಷ ವಯೋಮಿತಿಯ ಅಂಧ ಗಂಡು ಮಕ್ಕಳಿಗೆ 1ನೇ ತರಗತಿಯಿಂದ 10ನೇ ತರಗತಿವರೆಗೆ ದಾಖಲಾತಿಯು ಪ್ರಾರಂಭವಾಗಿದೆ.

ಶೈಕ್ಷಣಿಕ ಅವಧಿಯಲ್ಲಿ ಅಂಧ ಮಕ್ಕಳಿಗೆ ಪಠ್ಯಕ್ರಮದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ Daily Living Skills (DLS) ಯೋಗ, ಮೆಡಿಟೇಷನ್, ದೈಹಿಕ ಶಿಕ್ಷಣ, ಸಂಗೀತ, ಡ್ಯಾನ್ಸ್, ಡ್ರಾಮ, ಚಲನ–ವಲನ ತರಬೇತಿ, ಕಂಪ್ಯೂಟರ್ ತರಬೇತಿ, Smart Class ಸೇವೆ, Spoken English ತರಬೇತಿಗಳನ್ನು ನುರಿತ ವಿಶೇಷ ಶಿಕ್ಷಕರಿಂದ ನೀಡುವುದರ ಜೊತೆಗೆ, ಮಕ್ಕಳಿಗೆ ಉಚಿತವಾಗಿ ಊಟ, ವಸತಿ, ಬ್ರೈಲ್ ಪುಸ್ತಕಗಳು, ಶಾಲಾ ಸಮವಸ್ತ್ರ, ಕಲಿಕಾ ಉಪಕರಣಗಳು, ವೈದ್ಯಕೀಯ ತಪಾಸಣೆ, ಮಕ್ಕಳಿಗೆ ಸ್ನಾನಕ್ಕಾಗಿ ಬಿಸಿ ನೀರಿನ (ಸೋಲಾರ್ ವಾಟರ್ ಹೀಟರ್) ವ್ಯವಸ್ಥೆ ಮತ್ತು ಇತರೆ ಸೌಲಭ್ಯಗಳನ್ನು ಯಾವುದೇ ರೀತಿಯ ಶುಲ್ಕವಿಲ್ಲದೆ ಸರ್ಕಾರದ ವತಿಯಿಂದ ಶಾಲೆಯಲ್ಲಿ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2497496 ಹಾಗೂ ಅಧೀಕ್ಷಕರು, ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ, ತಿಲಕ್ ನಗರ, ಮೈಸೂರು ಇವರನ್ನು ಖುದ್ದಾಗಿ ಅಥವಾ ಮೊ. 9481441453 ಸಂಪರ್ಕಿಸಬಹುದು.

ನಾಳೆ ಮೈಸೂರಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಸಭೆ

ಮೈಸೂರು, ಏ.26(ಎಂಕೆ)– ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಏ.28 ರಂದು ಸಂಜೆ 6 ಗಂಟೆಗೆ ಕಾವೇರಿ ನದಿ ರಕ್ಷಣಾ ಸಮಿತಿ ವತಿಯಿಂದ 'ಕಾವೇರಿ ನದಿ ಹಿತರಕ್ಷಣೆ ಮತ್ತು ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವುದರ ಕುರಿತು' ಸಭೆ ಹಮ್ಮಿಕೊಳ್ಳಲಾಗಿದೆ. ಸಮಿತಿಯ ಮಹಾಪೋಷಕರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು, ಮಾರ್ಗದರ್ಶಕರು, ಕಾನೂನು ತಜ್ಞರು, ನಿವೃತ್ತ ಐಎಎಸ್ ಅಧಿಕಾರಿಗಳು, ಹಿರಿಯ ವಕೀಲರು, ರೈತ ಮುಖಂಡರು, ಸಮಿತಿ ಪದಾಧಿಕಾರಿಗಳು, ಸಂಘಟನಾ ಮುಖಂಡರು ಹಾಗೂ ಮಹಿಳಾ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಕಾವೇರಿ ರಕ್ಷಣಾ ಸಮಿತಿ ಅಧ್ಯಕ್ಷ ಹೆಚ್.ಕೆ.ರಾಮು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಲೆ ಏರಿಕೆ ಖಂಡಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷ ಮೈಸೂರಲ್ಲಿ ಪ್ರತಿಭಟನೆ

ಸಾರ್ವಜನಿಕರಿಗೆ ಉಚಿತವಾಗಿ ಉಪ್ಪಿನ ಪ್ಯಾಕೆಟ್ ಹಂಚಿದ ವಾಟಾಳ್



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ಹಾಗೂ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್, ತಳ್ಳುವ ಗಾಡಿಯಲ್ಲಿ ಉಪ್ಪಿನ ಪ್ಯಾಕೆಟ್‌ಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡುವ ಮೂಲಕ ಭಾನುವಾರ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಪುಡಿ... ಪುಡಿ...!

"ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಟಮಂತ್ರ ಮಾಡಿಸೋ ಯಾವ ಮಂತ್ರಗಾರನೂ ಇಲ್ಲ. ಆದಾಗ್ಯೂ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ಕಾಂಗ್ರೆಸ್ ಪುಡಿ ಪುಡಿಯಾಗಲಿದೆ. ರಾಜ್ಯದಲ್ಲಿ ಕ್ರಾಂತಿಯಾಗಲಿದೆ. ಅಪಾರ ರಾಜಕೀಯ ಅನುಭವವಿರುವ ಸಿದ್ದರಾಮಯ್ಯ ಅವರು ಮುಂದಿನ ಅವಧಿಗೂ ಇರಬೇಕು. ದ್ವೇಷ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ.

– ವಾಟಾಳ್ ನಾಗರಾಜ್, ಹಿರಿಯ ಕನ್ನಡಪರ ಹೋರಾಟಗಾರ

ಮೈಸೂರು, ಏ.26(ಎಂಕೆ)– ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ವತಿಯಿಂದ ಉಪ್ಪನ್ನು ಉಚಿತವಾಗಿ ಹಂಚುವ ಮೂಲಕ ಭಾನುವಾರ ವಿನೂತನವಾಗಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ಹಾಗೂ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್, ತಳ್ಳುವ ಗಾಡಿಯಲ್ಲಿ ಉಪ್ಪಿನ ಪ್ಯಾಕೆಟ್‌ಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡುವ ಮೂಲಕ ದಿನ ಬಳಕೆ ವಸ್ತುಗಳ ಬೆಲೆ ಏರಿಕೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಕಡಿವಾಣ ಹಾಕುವಂತೆ ಒತ್ತಾಯಿಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕರ್ನಾಟಕದಲ್ಲಿ ಕಾಂಗ್ರೆಸ್‌ನವರು ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದರೆ, ಬಿಜೆಪಿಯವರು ನಾವೇ ಸತ್ಯಹರಿಶ್ಚಂದ್ರರು ಎಂದು ಹೇಳಿಕೊಳ್ಳುತ್ತಿದ್ದಾರೆ. ಇನ್ನೂ ಜೆಡಿಎಸ್‌ನವರು ಮಹಾಮಹಿಮ ಸತ್ಯಹರಿಶ್ಚಂದ್ರನಿಗೆ ನಮ್ ಮನೆ ಪಕ್ಕದಲ್ಲೇ ಜಾಗ ಕೊಟ್ಟಿದ್ವಿ ಎನ್ನುತ್ತಿದ್ದಾರೆ. ಯಡಿಯೂರಪ್ಪ ಅವರು ಬೇಕಾದಷ್ಟು ಖರ್ಚು ಮಾಡಿ ಕಾರ್ಯಕ್ರಮದ ಭಿನ್ನವತ್ತಳೆ ನೀಡುವಾಗ ಅವರು, ಜೈಲಿಗೆ ಹೋಗಿದ್ದು ಯಾಕೆ... ಶಾಸಕರನ್ನು ಖರೀದಿ ಮಾಡಿ ಪ್ರಜಾತಂತ್ರ ವ್ಯವಸ್ಥೆಯನ್ನು ನಾಶ ಮಾಡಿದ್ದರ ಬಗ್ಗೆಯೂ ಹೇಳಬೇಕು. ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ಖಜಾನೆ ಕೀ ಅವರ ಮಗನ ಕೈಯಲ್ಲೇ ಇತ್ತು. ಹಾಗಾಗಿ ಖರ್ಚುಮಾಡುತ್ತಿದ್ದಾರೆ ಮಾಡಲೀ ಎಂದು ಕಾಲೆಳೆದರು.

ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯಾ ಎಂಬ ಬಸವಣ್ಣನವರ ಮಾತಿನಂತೆ ಇವರೆಲ್ಲರ ಕಚ್ಚಾಟದ ನಡುವೆ ಒಂದು ಗುಟುಕು ನೀರು ಕುಡಿಯಲು ಬಡವರು ಪರದಾಡುವಂತಾಗಿದೆ. ಆಹಾರವಿಲ್ಲದೆ ಸಾಯುತ್ತಿದ್ದಾರೆ. ರಾಜ್ಯ ಸರ್ಕಾರದ ಸ್ಥಿತಿ ಡೋಲಾಯಮಾನವಾಗಿದೆ. ಏನಿದೂ ದರಿದ್ರ ವ್ಯವಸ್ಥೆ ಎಂದು ಗುಡಿಗಿದ ವಾಟಾಳ್, ಎಲ್ಲಿ ನೋಡಿದರೂ ದುಡ್ಡು ದುಡ್ಡು.. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಫೀಸ್ ಜಾಸ್ತಿಯಾಗಿದೆ. ಆಸ್ಪತ್ರೆಗಳಲ್ಲಿ ಔಷಧಿ ಸಿಗ್ತಾ ಇಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ನರಕ ಸೃಷ್ಟಿಯಾಗಿದೆ. ಇದ್ಯಾವುದನ್ನೂ ಕೇಳುವವರೇ ಇಲ್ಲವಾಗಿದ್ದಾರೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ಎರಡೊತ್ತು ಊಟ ಮಾಡುತ್ತಿದ್ದವರು ಒಂದೊತ್ತಿನ ಊಟಕ್ಕೂ ಕಷ್ಟ ಪಡುವಂತಾಗಿದೆ. ಆದ್ದರಿಂದ ಮಹಾತ್ಮ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಮಾಡಿದಂತೆ ನಾವು ಕೂಡ ಜನರಿಗೆ ಅಗತ್ಯವಾದ ಉಪ್ಪನ್ನು ಉಚಿತವಾಗಿ ನೀಡುವ ಮೂಲಕ ಬೆಲೆ ಏರಿಕೆಯನ್ನು ಖಂಡಿಸುತ್ತಿದ್ದೇವೆ ಎಂದರಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಣ ಮತ್ತು ಅಕ್ಕಿ ಕೊಟ್ಟರೆ ಸಾಲದು. ಇತರೆ ಆಹಾರ ಪದಾರ್ಥಗಳ ಬೆಲೆ ಕಡಿಮೆ ಮಾಡ ಬೇಕು. ಜನಜೀವನವನ್ನು ಉತ್ತಮ ಪಡಿಸಬೇಕು. ಯುವ ಜನತೆಗೆ ಉದ್ಯೋಗ ನೀಡಬೇಕು. ಮುಂಬರುವ 56 ಸಾವಿರ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಗ್ರಾಮೀಣ ಭಾಗದವರಿಗೆ ಮತ್ತು ಕನ್ನಡಿಗರಿಗೆ ಹೆಚ್ಚಿನ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.ಈ ಸಂದರ್ಭ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಮತ್ತಿತರರಿದ್ದರು.

ಮೈಸೂರು ಸಾಹಿತ್ಯ ಸಂಭ್ರಮ–2, ಕವಿಗೋಷ್ಠಿ, ವಿಚಾರ ಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ



ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಮೈಸೂರು ಸಾಹಿತ್ಯ ಸಂಭ್ರಮ–2ರ ಕಾರ್ಯಕ್ರಮ ಏರ್ಪಡಿಸಲಾಗಿತ್ತು

ಮೈಸೂರು,ಏ.26–ತಾಯಂದಿರು ಮನೆಯಿಂದಲೇ ಮಕ್ಕಳಿಗೆ ಕನ್ನಡ ಸಂಸ್ಕಾರ ಕಲಿಸಬೇಕು ಎಂದು ಮುಧೋಳದ ಹಿರಿಯ ಸಾಹಿತಿ ಸಿದ್ದಣ್ಣ ಬಾಡಗಿ ಕರೆ ನೀಡಿದರು.

ಸುವರ್ಣ ಕರ್ನಾಟಕ ಪ್ರೆಸ್ ಅಸೋಸಿಯೇಷನ್– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮ–2ರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ಮಾತಿದೆ. ಹೀಗಾಗಿ ತಾಯಿ ಮನಸ್ಸು ಮಾಡಿದರೆ ಕನ್ನಡ ಸಂಸ್ಕಾರ ಬೆಳೆಸಬಹುದು ಎಂದರು.

ಆಧ್ಯಾತ್ಮಿಕ ಹಾಗೂ ಸಾಹಿತ್ಯಿಕ ಕೇಂದ್ರ ಸ್ಥಾನ ಮೈಸೂರು. ಏಕೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ, ಸಾಹಿತ್ಯ, ಸಂಸ್ಕೃತಿ, ಕಲೆ ಬೆಳೆಸುವ ಕೆಲಸ ಮಾಡಿದರು. ಆದರೆ ಕವಿ ರನ್ನ ಬರೆದಿರುವ ಮೂರು ಕೃತಿಗಳಿಂದಲೇ ಕನ್ನಡದ ಕೀರ್ತಿ ಕಳಶವಾದರು. 'ರನ್ನನಿರುವ ಕನ್ನಡಕ್ಕೆ ಬರುವುದುಂಟೆ ಧಕ್ಕೆ' ಎಂದು ಹೇಳುತ್ತಿದ್ದರು. ಆದ್ದರಿಂದ ಕನ್ನಡವನ್ನು ಬೆಳೆಸಿಕೊಂಡು ಹೋಗಿ ಎನ್ನುವ ಬದಲು ಉಳಿಸಿಕೊಂಡು ಹೋಗಿ ಎಂದು ಹೇಳಬೇಕಾಗಿದೆ ಎಂದರು. ಕವಿಗಳು ಸಮಾಜದ ಅಂಕುಡೊಂಕು ತಿದ್ದುವ ಕೆಲಸ ಮಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಹುಟ್ಟೂರಿನ ಋಣ, ಸಮಾಜದ ಋಣ, ಭಾಷೆಯ ಋಣವನ್ನು ಯಾವತ್ತೂ ಮರೆಯಬಾರದು. ಹಾಗೆಂದ ಮಾತ್ರಕ್ಕೆ ನಾವು ಅನ್ಯ ಭಾಷೆಯ ವಿರೋಧಿಗಳಲ್ಲ. ಆದರೆ ಕನ್ನಡ ಭಾಷೆಯ ಬಗ್ಗೆ ಪ್ರೀತಿ ಇರಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದರೆ ಮುಂದಿನ ಪೀಳಿಗೆಗೆ ಸಾಹಿತ್ಯವನ್ನು ತಲುಪಿಸುವುದೇ ಸವಾಲಿನ ಕೆಲಸ ಎಂದರು.

ಜಿಲ್ಲಾ ಕಸಾಪ ಉಪಾಧ್ಯಕ್ಷ ಕೆಪಿಟಿಸಿಎಲ್ ಎಂಜಿನಿಯರ್ ಟಿ. ತ್ಯಾಗರಾಜು, ಮತ್ತೋರ್ವ ಮುಖ್ಯ ಅತಿಥಿ ಕಲಾವಿದ ರವಿ ಸಂತು ಮಾತನಾಡಿದರು.

ಸಾಹಿತ್ಯ ಕ್ಷೇತ್ರಕ್ಕೆ ಮೈಸೂರು ಸಂಸ್ಥಾನದ ಕೊಡುಗೆ ಕುರಿತ ವಿಚಾರಗೋಷ್ಠಿ, ಕವಿಗೋಷ್ಠಿ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ನಡೆಯಿತು. ವಿಶೇಷ ಚೇತನರು ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದವರನ್ನು ಸನ್ಮಾನಿಸಲಾಯಿತು.

ನಿಹಾರ ಅಂಕಿತ ಕೃಷ್ಣದಾಸ್– ಭರತನಾಟ್ಯ, ಚಾಮರಾಜನಗರ ರಾಮಸಮುದ್ರದ ಸಿದ್ದರಾಜು ಮತ್ತು ತಂಡ– ಶಿವತಾಂಡವ ನೃತ್ಯ, ಮೈಸೂರಿನ ಸ್ನೇಹಭಾರತಿ ಭಜನಾ ಮಂಡಳಿಯ ಅರುಣ, ಪದ್ಮಾ ತಂಡದವರು ಗೀತಗಾಯನ ನಡೆಸಿಕೊಟ್ಟರು.

ಈ ವೇಳೆ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನೆಲೆ ಟ್ರಸ್ಟ್ ಖಜಾಂಜಿ ಎಂ. ಶಿಲ್ಪಾ ವಾತ್ಸಲ್ಯ ಸೇವಾ ಫೌಂಡೇಷನ್ ಅಧ್ಯಕ್ಷ ಎ.ಸಿ. ರವಿಕುಮಾರ್, ಸಮರ್ಪಣಾ ಸೇವಾ ಟ್ರಸ್ಟ್ ಅಧ್ಯಕ್ಷ ಲಯನ್ ಕುಮಾರ್, ಬೆಂಗಳೂರಿನ ಪರಿಸರ ಪ್ರೇಮಿ ಧನಲಕ್ಷ್ಮಿ, ಪ್ರಗತಿಪರ ರೈತ ರಾಜೇಗೌಡ, ಸಂಸ್ಥೆಯ ಸಂಸ್ಥಾಪಕಿ ಮಂಜುಳಾ ಪಾವಗಡ, ನಿವೃತ್ತ ಶಿಕ್ಷಕಿ ಸುಬ್ಬಲಕ್ಷ್ಮಿ, ಶಿವಕುಮಾರ್, ಮಹಾಂತೇಶ್ ಚಿನ್ನ, ಎಂ.ಪಿ. ಮಂಜುನಾಥ್ ಇದ್ದರು.

ಒಳ ಮೀಸಲಾತಿ ವಿಷಯದಲ್ಲಿ ಸರ್ಕಾರ ನ್ಯಾಯ ಒದಗಿಸಿದೆ, ಬಿಜೆಪಿಗರ ಮಾತಿಗೆ ಕಿವಿಗೊಡಬೇಡಿ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸಲಹೆ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡುತ್ತಿರುವುದು.

ಮೈಸೂರು,ಏ.26(ಎಂಕೆ)–ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆಯಲ್ಲಿ ಐತಿಹಾಸಿಕ ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ದಲಿತ ಸಮುದಾಯಗಳಿಗೆ ನ್ಯಾಯ ಒದಗಿಸಿದ್ದು, ಅಪಪ್ರಚಾರ ಮಾಡುತ್ತಿರುವ ಬಿಜೆಪಿಗರ ಮಾತಿಗೆ ದಲಿತ ಸಮುದಾಯಗಳು ಕಿವಿಗೊಡ ಬಾರದು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿಯ ಶೇ.15ರಷ್ಟು ಮೀಸಲಾತಿಯಲ್ಲಿ ಎಡಗೈ ಸಮುದಾಯಕ್ಕೆ ಶೇ. 5.25, ಬಲಗೈ ಸಮುದಾಯಕ್ಕೆ ಶೇ.5.25 ಮತ್ತು ಉಳಿದ ಉಪ ಜಾತಿಗಳಿಗೆ ಶೇ.4.5ರಷ್ಟು ಒಳ ಮೀಸಲಾತಿ ಹಂಚಿಕೆಗೆ ಎಲ್ಲಾ ದಲಿತ ಸಮುದಾಯಗಳು ಒಮ್ಮತದಿಂದ ಒಪ್ಪಿಗೆ ಸೂಚಿಸಿವೆ ಎಂದರು.

ನ್ಯಾಯ ಸಮ್ಮತ ಒಳ ಮೀಸಲಾತಿ ಹಂಚಿಕೆ ಮೂಲಕ ಕಾಂಗ್ರೆಸ್ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ್ದ ಮತ್ತೊಂದು ಭರವಸೆಯನ್ನು ಈಡೇರಿಸಿದಂತಾಗಿದೆ. ಆದರೂ ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆಯನ್ನು ವಿರೋಧ ಮಾಡುತ್ತಿರುವ ಬಿಜೆಪಿಗರು ತಮ್ಮಿಂದ ಸಾಧ್ಯ ವಾದರೆ, ಒಳ ಮೀಸಲಾತಿ ಹಂಚಿಕೆಗೆ ಸಲಹೆಗಳನ್ನು ನೀಡಲಿ ಎಂದು ಟೀಕಿಸಿದರು.

ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ, ದಲಿತರ ಮತಗಳನ್ನು ಪಡೆಯಬೇಕೇಂದು ಒಳ ಮೀಸಲಾತಿಯನ್ನು ಸೃಷ್ಟಿಸಿ, ಶೇ.15ರಿಂದ 17ಕ್ಕೆ ಹೆಚ್ಚಿಸಿ ಸಂವಿಧಾನದ 9ನೇ ಶೇಡ್ಯೂಲ್‌ಗೆ ಸೇರಿಸದೆ ಬಿಟ್ಟು ಹೋದರು. ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ನ್ಯಾ.ನಾಗಮೋಹನ್‌ದಾಸ್ ಅವರ ನೇತೃತ್ವದಲ್ಲಿ ಸಮೀಕ್ಷೆ ನಡೆಸಿ 6–6–5ರ ಅನುಪಾತದಲ್ಲಿ ಹಂಚಿಕೆ ಮಾಡಿದರೆ, ಇದೇ ಬಿಜೆಪಿಯವರು ಹೈಕೋರ್ಟ್‌ಗೆ ಹೋಗಿ ಅದಕ್ಕೂ ಸ್ಟೇ ತಂದಿದ್ದಾರೆ. ಈಗಾಗಿ ಶೇ.15 ರಷ್ಟು ಮೀಸಲಾತಿಯನ್ನೇ ನ್ಯಾಯಸಮ್ಮತವಾಗಿ ಹಂಚಿಕೆ ಮಾಡಬೇಕಾಗಿದೆ ಎಂದು ಹೇಳಿದರು.

ಮಹಿಳಾ ಮೀಸಲಾತಿ: ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಪರವಾಗಿದ್ದಿದ್ದರೆ 2023ರಲ್ಲಿಯೇ ಜಾರಿಗೊಳಿಸಬಹುದಾಗಿತ್ತು. ಆದರೆ, ಡೀಲಿಮಿಟೇಷನ್ ಕಾಯ್ದೆಯನ್ನು ಜಾರಿಗೊಳಿಸುವ ದೃಷ್ಟಿಯಿಂದ ಮೂರು ವರ್ಷವಾದ ಮೇಲೆ ಮಹಿಳಾ ಮೀಸಲಾತಿ ಎಂದು ನಾಟಕವಾಡುತ್ತಿದೆ. ಮಹಿಳಾ ಮೀಸಲಾತಿ ಪರವಾಗಿದ್ದಾರೆ ಎಂದ ಮೇಲೆ ಡೀಲಿಮಿಟೇಷನ್ ಲಿಂಕ್ ಮಾಡುವುದೇಕೆ ಎಂದು ಪ್ರಶ್ನಿಸಿದರು.

ಐತಿಹಾಸಿಕ ಫಲಿತಾಂಶ: 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಮೈಸೂರು ಜಿಲ್ಲೆಯು ಐತಿಹಾಸಿಕ ಸಾಧನೆ ಮಾಡಿದೆ. ಶೇ.94.49ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ದಾಖಲೆ ಬರೆದ ಶ್ರೇಯಕ್ಕೆ ಪಾತ್ರರಾಗಿದ್ದಾರೆ. ಮಕ್ಕಳ ಈ ಸಾಧನೆಗೆ ಶ್ರಮಿಸಿದ ಶಿಕ್ಷಕ ವೃಂದವನ್ನು ಕಾಂಗ್ರೆಸ್ ಅಭಿನಂದಿಸಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮುಖಂಡರಾದ ಶಿವಣ್ಣ, ಬಿ.ಎಂ.ರಾಮು ಇದ್ದರು.



ಗ್ರಾಪಂ ಸದಸ್ಯ ಸ್ಥಾನ ನಿಗದಿ ಕರಡಿಗೆ ಆಕ್ಷೇಪಣೆ ಅವಧಿ ವಿಸ್ತರಣೆ

ಮೈಸೂರು,ಏ.26(ಎಸ್‌ಪಿಎನ್)–ಕರ್ನಾಟಕ ರಾಜ್ಯ ಗ್ರಾಮ ಪಂಚಾಯ್ತಿಗಳ ಚುನಾಯಿತ ಸದಸ್ಯ ಸ್ಥಾನ ನಿಗದಿಯ ಕರಡು ಪ್ರಕಟಣೆಗೆ ಸಾರ್ವಜನಿಕರಿಂದ ಅಹವಾಲು, ಆಕ್ಷೇಪಣೆಯನ್ನು ಸಲ್ಲಿಸುವ ಅವಧಿಯನ್ನು ಮೇ 2ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

ಮುಂದುವರೆದು ರಾಜ್ಯದ 31 ಜಿಲ್ಲೆಗಳ ಗ್ರಾಪಂ ಚುನಾಯಿತ ಸದಸ್ಯರ ಸಂಖ್ಯೆಯ ಕುರಿತಂತೆ, ಸ್ವೀಕರಿಸಿದ ಆಕ್ಷೇಪಣೆ/ ಅಹವಾಲುಗಳ ಬಗ್ಗೆ ಸಾರ್ವಜನಿಕರೊಂದಿಗೆ ಚರ್ಚಿಸಲು ನಿಗದಿಪಡಿಸಿದ್ದ ಏ.27ರ ಪರಿಶೀಲನಾ ಆದಾಲತ್ ಅನ್ನು ಮೇ 5ಕ್ಕೆ ಮುಂದೂಡಲಾಗಿದೆ. ಬೆಂಗಳೂರಿನ ಬಹುಮಹಡಿಗಳ ಕಟ್ಟಡದ ಗ್ರಾಮೀಣಾ ಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಗೇಟ್ ನಂ.2 2ನೇ ಮಹಡಿಯಲ್ಲಿ ಮೇ 5ರಂದು ಸಭೆ ನಡೆಯಲಿದ್ದು, ಮೇ.5ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಬೆಳಗಾವಿ, ಧಾರವಾಡ, ಬಾಗಲಕೋಟೆ, ಗದಗ, ವಿಜಯಪುರ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆ ಭಾಗದ ಅಹವಾಲು ಪರಿಶೀಲನಾ ಸಭೆಯಲ್ಲಿ ಸಾರ್ವಜನಿಕರು ಭಾಗವಹಿಸಬಹುದು.

ಮೇ 5ರಂದು ಮಧ್ಯಾಹ್ನ 2.30ರಿಂದ ಮಧ್ಯಾಹ್ನ 5ರವರೆಗೆ ಮೈಸೂರು, ಮಂಡ್ಯ, ಹಾಸನ, ಕೊಡಗು ಹಾಗೂ ಚಾಮರಾಜನಗರ, ಬೆಂಗಳೂರು ನಗರ, ಬೆಂಗಳೂರು ದಕ್ಷಿಣ ಮತ್ತು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕರು ಆಕ್ಷೇಪಣೆ ಮತ್ತು ಅಹ ವಾಲುಗಳ ಪರಿಶೀಲನಾ ಆದಾಲತ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸಾರ್ವಜನಿಕರು, ತಮ್ಮ ಆಧಾರ್ ಅಥವಾ ಗುರುತಿನ ಚೀಟಿ ಅಥವಾ ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಯಾವುದೇ ಗುರುತಿನ ಚೀಟಿಯ ಪ್ರತಿಯನ್ನು ಸಭೆಗೆ ಕಡ್ಡಾಯವಾಗಿ ತರತಕ್ಕದ್ದು ಎಂದು ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗದ ಸದಸ್ಯ ಕಾರ್ಯದರ್ಶಿ ಡಾ.ಎನ್.ಸೋಮೇಶ್‌ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ರಾಜ್‌ಕುಮಾರ್ ಜನ್ಮದಿನ–ಗೀತಗಾಯನ



ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ ಪ್ರಯುಕ್ತ ಲಯನ್ಸ್ ಕ್ಲಬ್ ಆಫ್ ಮೈಸೂರ್ ಪರಿವರ್ತನ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಗೀತ ಗಾಯನ ಕಾರ್ಯಕ್ರಮವನ್ನು ಡಾ.ರಾಜ್‌ಕುಮಾರ್ ಕಟೌಟ್‌ಗೆ ಪುಷ್ಪಾರ್ಚನೆ ಮಾಡುವ ಮೂಲಕ ಜೆಡಿಎಸ್ ನಗರಾಧ್ಯಕ್ಷ, ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಉದ್ಘಾಟಿಸಿದರು. ಈ ವೇಳೆ ಸಂಸ್ಥೆಯ ಸದಸ್ಯ ಹಾಗೂ ಗಾಯಕ ಹೆಚ್.ಎಂ.ಸತೀಶ್, ಸರಿಗಮಪ ಜ್ಯೂರಿ ಮಹೇಂದರ್, ರವಿಕುಮಾರ್, ಜಾಯ್, ವಿಶಾಕ್, ಗಾನಸುಮಾ, ಪಟ್ಟಸೋಮನಹಳ್ಳಿ ಡಾ. ಕೃಷ್ಣಮೂರ್ತಿ, ಪತ್ರಕರ್ತೆ ಸವಿತಾ ಮತ್ತಿತರರಿದ್ದರು.

ಕುರಿ ಮೇಯಿಸುತ್ತಿದ್ದ ವೃದ್ಧನ ಮೇಲೆ ಹಲ್ಲೆ ನಡೆಸಿ ಕೊಲೆ; ಆರೋಪಿ ಬಂಧನ

ಮೈಸೂರು,ಏ.26(ಪಿಎಂ)– ಜಮೀನೊಂದರಲ್ಲಿ ಕುರಿ ಮೇಯಿಸಿದ್ದ ಕಾರಣಕ್ಕೆ ಹಲ್ಲೆಗೊಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ವೃದ್ಧರೊಬ್ಬರು ಚಿಕಿತ್ಸೆಗೆ ಸ್ಪಂದಿಸದೇ ಸಾವನ್ನಪ್ಪಿದ್ದು, ಹಲ್ಲೆ ನಡೆಸಿದ್ದ ಆರೋಪಿ ಜೈಲು ಸೇರಿದ್ದಾನೆ.

ಮೈಸೂರು ತಾಲೂಕಿನ ಗಳಿಗರಹುಂಡಿ ಗ್ರಾಮದ ನಿಂಗೇಗೌಡ (71) ಮೃತಪಟ್ಟವರು. ಇವರ ಮೇಲೆ ಹಲ್ಲೆ ನಡೆಸಿದ್ದ ಮೈಸೂರಿನ ಇಟ್ಟಿಗೆಗೂಡು ನಿವಾಸಿ ಚಂದ್ರಶೇಖರ್ (60) ಬಂಧಿತ ಆರೋಪಿ. ಪ್ರತಿದಿನ ಕುರಿ ಮೇಯಿಸುವ ಕೆಲಸ ಮಾಡುತ್ತಿದ್ದು, ಅಂತೆಯೇ ಏ.23ರಂದು ಸಂಜೆ 4.30ರ ವೇಳೆಯಲ್ಲಿ ಗ್ರಾಮದಲ್ಲಿ ಕುರಿ ಮೇಯಿಸುತ್ತಿದ್ದಾಗ, ಚಂದ್ರಶೇಖರ್ ಬಂದು ತಮ್ಮ ಜಮೀನಿನಲ್ಲಿ ಕುರಿ ಮೇಯಿಸದಂತೆ ಗಲಾಟೆ ಮಾಡಿದ. ಅಲ್ಲದೆ, ಅವಾಚ್ಯ ಶಬ್ಧಗಳಿಂದ ನಿಂದಿಸುವ ಜೊತೆಗೆ ಮಚ್ಚಿನ ಹಿಂಭಾಗದಿಂದ ಕಾಲಿಗೆ ಹೊಡೆದ. ಜೊತೆಗೆ ದೊಣ್ಣೆಯಿಂದ ಹಲ್ಲೆ ಮಾಡಿ ಗಾಯಗೊಳಿಸಿದ ಎಂದು ನಿಂಗೇಗೌಡ, ಸಾವನ್ನಪ್ಪುವ ಮುನ್ನ ಪೊಲೀಸರಲ್ಲಿ ಹೇಳಿಕೆ ನೀಡಿದ್ದರನ್ವಯ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಹಲ್ಲೆ ಪರಿಣಾಮ ಗಾಯಗೊಂಡಿದ್ದ ನಿಂಗೇಗೌಡರನ್ನು ಅವರ ಪುತ್ರ ಕುಮಾರ್ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ನಿಂಗೇಗೌಡ ಶನಿವಾರ ಸಂಜೆ ಸಾವನ್ನಪ್ಪಿದ್ದು, ಈ ಸಂಬಂಧ ಕೊಲೆ ಪ್ರಕರಣದಡಿ ಆರೋಪಿ ಚಂದ್ರಶೇಖರ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮೈಸೂರು ದಕ್ಷಿಣ ಠಾಣೆ ಪೊಲೀಸರು ತಿಳಿಸಿದರು.



ಬೆಳಗಾವಿಯಲ್ಲಿ ವಕೀಲೆ ಮನೆ ಮೇಲೆ ತಡರಾತ್ರಿ ಗುಂಡಿನ ದಾಳಿ

ಬೆಳಗಾವಿ: ವಕೀಲೆಯೊಬ್ಬರ ಮನೆ ಮೇಲೆ ಗುಂಡಿನ ದಾಳಿ ನಡೆಸಿರುವ ಆತಂಕಕಾರಿ ಘಟನೆ ಬೆಳಗಾವಿಯಲ್ಲಿ ಶನಿವಾರ ರಾತ್ರಿ ನಡೆದಿದೆ. ಮಂಡೋಳಿ ರಸ್ತೆಯ ನಿವಾಸಿ, ವಕೀಲೆ ಪೂಜಾ ಕಾಕತಕರ್ ಅವರ ಮನೆಯ ಮೇಲೆ ನಿನ್ನೆ ತಡರಾತ್ರಿ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ.

ಮನೆಯ ಮೊದಲ ಮಹಡಿಯನ್ನು ಗುರಿಯಾಗಿಸಿ ಈ ದಾಳಿ ಮಾಡಲಾಗಿದ್ದು, ಅಲ್ಲಿ ವಕೀಲೆ ಪೂಜಾ ಕಾಕತಕರ್ ಅವರ ಪುತ್ರಿ ಓದುತ್ತಿದ್ದಳು. ಮನೆಯ ಗ್ಲಾಸ್ ಮೇಲೆ ಫೈರಿಂಗ್ ಮಾರ್ಕ್ ಬಿದ್ದಿದ್ದು, ಘಟನಾ ಸ್ಥಳಕ್ಕೆ ಪೊಲೀಸರು ಮತ್ತು ಸುಕೋ ಟೀಂ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರಭಾವಿ ವಕೀಲೆಯಾಗಿರುವ ಪೂಜಾ ಕಾಕತಕರ್, ಕಳೆದ 18 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಹೈ ಪ್ರೊಫೈಲ್ ಕೇಸ್‌ಗಳ ಪರ ವಾದ ಮಾಡುತ್ತಿದ್ದರು. ಘಟನೆ ನಂತರ ಪೂಜಾ ಕಾಕತಕರ್ ಅವರ ಕುಟುಂಬಕ್ಕೆ ರಕ್ಷಣೆ ನೀಡುವುದಾಗಿ ಪೊಲೀಸರು ಭರವಸೆಯನ್ನು ನೀಡಿದ್ದಾರೆ. ಈ ಸಂಬಂಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

